ಸಂಪುಟ: 13 Volume ಸಂಚಿಕೆ: 358 Issue ಪುಟಗಳು 08 Pages ಬುಧವಾರ 25 ಮಾರ್ಚ್ 2026 ₹6 PRGINO.120927 (RNINO:KARKAN/2011/48371) BDR/054/2026-2027 mallammanudi@gmail.com www.mallammanudi.in 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ , ಕೌಡಾಳೆ

**ಬೆಳಗು**

ನಾವು ಬಿಡುಗಡೆ, ಸ್ವಾತಂತ್ರ್ಯ ಪಡೆಯಬೇಕಾದದ್ದು ಅಜ್ಞಾನದಿಂದ, ಅಧರ್ಮದಿಂದ.

–ಬಿ.ಎಂ.ಶ್ರೀ.

ಎಲ್‌ಪಿಜಿ ಪೂರೈಸಲು ಜಿಲ್ಲಾಡಳಿತಕ್ಕೆ ಮನವಿ 6

ಜಲ ಸಂರಕ್ಷಣೆ ಇಂದಿನ ಅನಿವಾರ್ಯತೆ 7

ಪಶುವೈದ್ಯ ಸಮೀಕ್ಷಾ ರೆಡ್ಡಿ ಸಾವಿಗೆ ನ್ಯಾಯ 8



ಬೀದರ್: ಅರಣ್ಯ ಪರಿಸರ ಸಚಿವರು ಆದ ಈಶ್ವರ ಬಿ. ಖಂಡ್ರೆ ರವರ ಅಭಿನಂದನಾ ಕಾರ್ಯಕ್ರಮದಲ್ಲಿ ದಿಲೀಪಕುಮಾರ ತಾಳಂಪಳ್ಳಿ, ಹಾಗೂ ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ. ಸೇರಿದಂತೆ ಇತರರನ್ನು ಕಾಣಬಹುದು.



ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಉಪ ಚುನಾವಣೆ ರಣತಂತ್ರ ಕುರಿತು ಸಚಿವ ಜಮೀರ್ ಅಹಮದ್ ಖಾನ್ ಹಾಗೂ ಮುಖ್ಯಮಂತ್ರಿ ಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಅವರ ಅಧ್ಯಕ್ಷ ತೆಯಲ್ಲಿ ಮುಸ್ಲಿಂ ಸಮುದಾಯದ ಜನಪ್ರತಿನಿಧಿಗಳ ಸಭೆ ವಿಧಾನ ಸೌಧದ ಸಿ ಎಲ್ ಪಿ ಕಚೇರಿಯಲ್ಲಿ ನಡೆಯಿತು.

## ಆನ್‌ಲೈನ್‌ಗೇಮ್: ವಿದ್ಯಾರ್ಥಿ ಆತ್ಮಹತ್ಯೆ

**ಬೀದರ್:** ಆನ್ಲೈನ್ ಗೇಮ್ ಚಟಕ್ಕೆ ಬಿದ್ದು ಎಂಬಿಬಿಎಸ್ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಬೀದರ್‌ನ ಬ್ರಿಮ್ಸ್ ವೈದ್ಯಕೀಯ ಕಾಲೇಜು ವಸತಿ ನಿಲಯದಲ್ಲಿ ಈ ಘಟನೆ ನಡೆದಿದೆ. ಆನ್ಲೈನ್ ಗೇಮ್‌ನಲ್ಲಿ 80 ಸಾವಿರ ರೂ. ಕಳೆದುಕೊಂಡ ವಿದ್ಯಾರ್ಥಿ, ಮನನೊಂದು ಈ ಕೃತ್ಯ ಎಸಗಿದ್ದಾನೆ. ಅನಿಷ್ಕಾರ್ ಚವ್ಹಾಣ್(21) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ. ಎಂಬಿಬಿಎಸ್ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದ ಅನಿಷ್ಕಾರ್. ವಸತಿ ನಿಲಯದ ಕೊಠಡಿಯಲ್ಲಿ ಫ್ಯಾನ್ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಸಲಗರ್ ತಾಂಡಾದ ನಿವಾಸಿ ಅನಿಷ್ಕಾರ್. ಘಟನಾ ಸ್ಥಳಕ್ಕೆ ಎಸ್ಪಿ ಪ್ರದೀಪ್ ಗುಂಟಿ ಭೇಟಿ ನೀಡಿ, ಪರಿಶೀಲಿಸಿದ್ದಾರೆ.


## ಜನಪರ ವಿಷಯಗಳ ಸಮಗ್ರ ಪ್ರಸ್ತಾಪ

**ಹೊಸದಿಲ್ಲಿ:** ಲೋಕಸಭಾ ಕ್ಷೇತ್ರದ ಸಂಸದರಾದ ಶ್ರೀ ಸಾಗರ್ ಖಂಡ್ರೆ ಅವರು ಇಂದು ಲೋಕಸಭೆಯಲ್ಲಿ 2026ರ ಹಣಕಾಸು ವಿಧೇಯಕದ ಚರ್ಚೆಯಲ್ಲಿ ಭಾಗವಹಿಸಿ ಹಲವು ಮಹತ್ವದ ಜನಪರ ವಿಷಯಗಳನ್ನು ಸಮಗ್ರವಾಗಿ ಪ್ರಸ್ತಾಪಿಸಿದರು. ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ವೇತನದಲ್ಲಿ ಕೇಂದ್ರ ಸರ್ಕಾರದ ಪಾಲನ್ನು ಹೆಚ್ಚಿಸಿ, ಅವರಿಗೆ ನ್ಯಾಯಸಮ್ಮತ ಭತ್ಯೆ ನೀಡಬೇಕೆಂದು ಆಗ್ರಹಿಸಿದರು. EPS–95 ಪಿಂಚಣಿದಾರರು ಹಲವು ವರ್ಷಗಳಿಂದ ಪಿಂಚಣಿ ಹೆಚ್ಚಳಕ್ಕಾಗಿ ಹೋರಾಟ ನಡೆಸುತ್ತಿರುವುದನ್ನು ಉಲ್ಲೇಖಿಸಿ, ಪ್ರಸ್ತುತ ಸುಮಾರು 81 ಲಕ್ಷ ಪಿಂಚಣಿದಾರರಲ್ಲಿ ಬಹುತೇಕರು ಕೇವಲ ₹1,000, ₹1,200 ಪಿಂಚಣಿ ಪಡೆಯುತ್ತಿರುವುದು ಆತಂಕಕಾರಿ ಎಂದು ತಿಳಿಸಿದರು.

## ಇರಾನ್ ಯುದ್ಧ ವಿರಾಮ: ಚರ್ಚೆಗೆ ಅಸ್ತು

• ಮಲ್ಲಮ್ಮ ನುಡಿ ವಾರ್ತೆ ಟೆಹ್ರಾನ್






ಇರಾನ್ನ ಸರ್ವೋಚ್ಚನಾಯಕ ಮೊಜ್ತಾಬಾ ಖಮೇನಿ ಅಮೆರಿಕ ಜೊತೆ ಮಾತುಕತೆ ನಡೆಸಲು ಸಿದ್ಧರಿದ್ದಾರೆ ಎಂದು ಇಸ್ರೇಲಿ ಮಾಧ್ಯಮ ಸಂಸ್ಥೆಯೆಡಿಯೊತ್ ಅಹ್ರೊನೊತ್ ವರದಿ ಮಾಡಿದೆ. ಈ ಬಗ್ಗೆ ಅರಬ್ ನ್ಯೂಸ್ ಉಲ್ಲೇಖಿಸಿದೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಹಾಗೂ ಅಮೆರಿಕದ ಮಧ್ಯವರ್ತಿ ಸ್ಟೀವ್‌ವಿಟ್ಕಾಫ್ ನಡುವಿನ ಒಪ್ಪಂದವನ್ನು ಅಹ್‌ರೌನತ್ ಉಲ್ಲೇಖಿಸಿದೆ. ಇದಕ್ಕೂ ಮೊದಲು, ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಇರಾನ್ ಜೊತೆಗಿನ ಮಾತುಕತೆಯ ಹೇಳಿಕೆಯನ್ನು ತಳ್ಳಿಹಾಕಿದ್ದರು. ಇಸ್ಲಾಮಿಕ್ ಗಣರಾಜ್ಯದ ವಿರುದ್ಧದ ಅಪ್ರಚೋದಿತ ಅಮೆರಿಕ–ಇಸ್ರೇಲ್ ಯುದ್ಧದ 24 ದಿನಗಳಲ್ಲಿ ಟೆಹ್ರಾನ್ ವಾಷಿಂಗ್‌ಟನ್ ಜೊತೆಗೆ ಯಾವುದೇ ಮಾತುಕತೆಗಳನ್ನು ನಡೆಸಿಲ್ಲ ಎಂದು ಇರಾನ್ ವಕ್ತಾರರು ಸ್ಪಷ್ಟಪಡಿಸಿದ್ದರು. ಫ್ಲೋರಿಡಾದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಟೆಹ್ರಾನ್ ಜೊತೆ ನಡೆಯುತ್ತಿರುವ ಮಾತುಕತೆಗಳು ಯಶಸ್ವಿಯಾಗಿ ಮುಂದುವರಿದರೆ ಜಲಸಂಧಿ "ಶೀಘ್ರದಲ್ಲೇ ತೆರೆಯಲ್ಪಡುತ್ತದೆ" ಎಂದು ಹೇಳಿದ್ದಾರೆ.

## ವೇಗಿ ದಯಾಳ್ ಆರ್‌ಸಿಬಿ ಆಡಲ್ಲ..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವೇಗಿ ಯಶ್ ದಯಾಳ್ ಇಂಡಿಯನ್ ಪ್ರೀಮಿಯರ್ ಲೀಗ್ 2026ಕ್ಕೆ ತಂಡವನ್ನು ಸೇರಲ್ಲ ಎಂದು ಆರ್‌ಸಿಬಿ ಕ್ರಿಕೆಟ್ ನಿರ್ದೇಶಕ ಮೊ ಬೊಬಾಟ್ ದೃಢಪಡಿಸಿದ್ದಾರೆ.

ಎರಡು ಲೈಂಗಿಕ ಶೋಷಣೆ ಆರೋಪದ ಪ್ರಕರಣಗಳನ್ನು ಎದುರಿಸುತ್ತಿರುವ 28 ವರ್ಷದ ದಯಾಳ್, ಆರ್‌ಸಿಬಿ ಗೆದ್ದ ಐಪಿಎಲ್ 2025ರ ಫೈನಲ್‌ನಲ್ಲಿ ಕಾಣಿಸಿಕೊಂಡು ಮೊದಲ ಬಾರಿಗೆ ಚಾಂಪಿಯನ್ ಆದ ಬಳಿಕ ಯಾವುದೇ ಸ್ಪರ್ಧಾತ್ಮಕ ಕ್ರಿಕೆಟ್ ಆಡಿಲ್ಲ. ಪಂದ್ಯಾವಳಿಗೆ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬೊಬಾಟ್, ಈ ಆವೃತ್ತಿಯಲ್ಲಿ ಯಶ್ ದಯಾಳ್ ತಂಡಕ್ಕೆ ಸೇರ್ಪಡೆಗೊಳ್ಳುವುದಿಲ್ಲ ಎಂದು ದೃಢಪಡಿಸುತ್ತಿದ್ದೇನೆ. ನಿಮಗೆ ತಿಳಿದಿರುವಂತೆ, ಅವರು ಕೆಲವು ವೈಯಕ್ತಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರು ಫ್ರಾಂಚೈಸಿಯ ಒಪ್ಪಂದದಲ್ಲಿಯೇ ಇರುತ್ತಾರೆ. ಆದರೆ, ಅವರ ಹಿತದೃಷ್ಟಿಯಿಂದ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

# ಯುದ್ಧದ ಅವಘಡ ತಡೆಗೆ ಸಿದ್ಧ

## ರಾಜ್ಯ ಸಭೆಯಲ್ಲಿ ಪ್ರಧಾನಿ ಮೋದಿ ಭಾಷಣ | ರಕ್ಷಣಾ ಸಚಿವರ ನೃತೃತ್ವದಲ್ಲಿ ಮಹತ್ವದ ಸಭೆ

• ಮಲ್ಲಮ್ಮ ನುಡಿ ವಾರ್ತೆ ಹೊಸದಿಲ್ಲಿ

ಅಮೆರಿಕ–ಇಸ್ರೇಲ್, ಇರಾನ್ ನಡುವಿನ ಯುದ್ಧದ ಸಮಸ್ಯೆ ಇಡೀ ವಿಶ್ವವನ್ನು ವ್ಯಾಪಿಸಿದೆ. ಪಶ್ಚಿಮ ಏಷ್ಯಾದಲ್ಲಿ ಕವಿದಿರುವ ಯುದ್ಧದ ಕಾರ್ಮೋಡ ಭಾರತಕ್ಕೂ ಬಿಸಿ ಮುಟ್ಟಿಸಲಿದೆ. ಇದಕ್ಕೆ ಪೂರಕವಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮೂರು ರಕ್ಷಣಾ ಪಡೆಗಳ ಮುಖ್ಯಸ್ಥರು, ರಕ್ಷಣಾ ಸಿಬ್ಬಂದಿ ಮುಖ್ಯಸ್ಥರ ಜೊತೆ ಸಭೆ ನಡೆಸಿ ಹೈವೋಲ್ಟೇಜ್ ಚರ್ಚೆ ನಡೆಸಿದ್ದಾರೆ.

**ಭದ್ರತೆ, ಆರ್ಥಿಕ ಹಿತಾಸಕ್ತಿ:** ಮಧ್ಯಪ್ರಾಚ್ಯ ಸಂಘರ್ಷ 4ನೇ ವಾರಕ್ಕೆ ಕಾಲಿಟ್ಟಿದೆ. ಇದು ಭಾರತಕ್ಕೂ ಅನೇಕ ರೀತಿಯ ಭದ್ರತಾ ಸವಾಲುಗಳನ್ನು ತಂದೊಡ್ಡಿದೆ. ಈ ಹಿನ್ನೆಲೆಯಲ್ಲಿ ರಕ್ಷಣಾ ಸಚಿವಾಲಯವು ಸೇನೆಯ ಸಿದ್ಧತೆಗಳನ್ನು ಪರಿಶೀಲಿಸಲು ಮುಂದಾಗಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ಭಾರತದ ಭದ್ರತೆ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸುವ ಕುರಿತು ಚರ್ಚಿಸಲಾಗಿದೆ ಎಂದು ಮೂಲ ಖಚಿತಪಡಿಸಿದೆ.

**ರಾಜ್ಯ ಸಭೆಯಲ್ಲಿ ಪ್ರಧಾನಿ:** ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಸಭೆಯಲ್ಲಿ ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಮತ್ತು ಭಾರತ ಸೇರಿದಂತೆ ಪ್ರಪಂಚದಾದ್ಯಂತ ಅದು ಸೃಷ್ಟಿಸಿರುವ ಇಂಧನ ಬಿಕ್ಕಟ್ಟಿನ ಕುರಿತು ಮಾತನಾಡಿ, ಈ ಯುದ್ಧವು ವಿಶ್ವಾದ್ಯಂತ ಗಂಭೀರ ಇಂಧನ ಬಿಕ್ಕಟ್ಟನ್ನು ಸೃಷ್ಟಿಸಿದೆ ಎಂದಿದ್ದಾರೆ.



### ವಸ್ತುಗಳ ಪೂರೈಕೆಗೆ ಅಡ್ಡಿ

ಈ ಪರಿಸ್ಥಿತಿಯು ನಮ್ಮ ವ್ಯಾಪಾರ ಮಾರ್ಗಗಳ ಮೇಲೆ ಪರಿಣಾಮ ಬೀರುತ್ತಿರುವುದರಿಂದ ಭಾರತಕ್ಕೂ ಆತಂಕಕಾರಿಯಾಗಿದೆ ಎಂದು ಮೋದಿ ಹೇಳಿದರು. ಪೆಟ್ರೋಲ್, ಡೀಸೆಲ್, ಅನಿಲ ಮತ್ತು ರಸಗೊಬ್ಬರದಂತಹ ಅಗತ್ಯ ವಸ್ತುಗಳ ನಿಯಮಿತ ಪೂರೈಕೆಯನ್ನು ಯುದ್ಧವು ಅಡ್ಡಿಪಡಿಸುತ್ತಿದೆ. ಈ ಯುದ್ಧವು ದೀರ್ಘಕಾಲದವರೆಗೆ ಮುಂದುವರಿದರೆ, ಅದು ಗಂಭೀರ ಪರಿಣಾಮಗಳನ್ನು ಬೀರುತ್ತದೆ ಎಂದು ಪ್ರಧಾನಿ ಹೇಳಿದ್ದಾರೆ.

### ಅಧಿಕಾರಿಗಳು ಹಾಜರು

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಹತ್ವದ ಸಭೆ ನಡೆಸಿದ್ದಾರೆ. ಚೀಫ್ ಆಫ್ ಡಿಫೆನ್ಸ್ ಸ್ಟಾಫ್ ಜನರಲ್ ಅನಿಲ್ ಚೌಹಾಣ್, ಭೂಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ ತ್ರಿಪಾಠಿ, ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ಹಾಗೂ ಡಿಆರ್‌ಡಿಒ ಅಧ್ಯಕ್ಷ ಸಮೀರ್ ಕಾಮತ್ ಭಾಗವಹಿಸಿದ್ದು ವಿಶೇಷ.

### ಸಭೆಯಲ್ಲಿನಡೆದ ಚರ್ಚೆ?

ಈ ಸಭೆಯಲ್ಲಿ ಭಾರತದ ರಕ್ಷಣಾ ಸಿದ್ಧತೆಗಳು, ಕಡಲ ಮಾರ್ಗಗಳ ಭದ್ರತೆ, ಹಾರ್ಮುಜ್ ಜಲಸಂಧಿ ಮೂಲಕ ನಡೆಯುವ ವ್ಯಾಪಾರ, ತುರ್ತು ಪರಿಸ್ಥಿತಿಯನ್ನು ಎದುರಿಸಲು ತ್ರಿವಿಧ ಪಡೆಗಳ ಕಾರ್ಯಾಚರಣೆ, ಭಾರತವು ಶಾಂತಿ ಮತ್ತು ರಾಜತಾಂತ್ರಿಕ ಮಾತುಕತೆಗಳ ಮೂಲಕವೇ ಸಮಸ್ಯೆಗೆ ಪರಿಹಾರ, ತನ್ನ ಭದ್ರತೆಯ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಲು ಸಿದ್ಧವಿಲ್ಲ ಎಂಬ ಸಂದೇಶವನ್ನು ಇಂದಿನ ಸಭೆ ರವಾನಿಸಿದೆ.

ಹತ್ತು ಕೋಟಿ ಭಾರತೀಯರು ಗಲ್ಫ್ ದೇಶಗಳಲ್ಲಿ ವಾಸಿಸುತ್ತಿದ್ದಾರೆ. ಅವರ ಜೀವನ ಮತ್ತು ಜೀವನೋಪಾಯದ ಸುರಕ್ಷತೆಯು ಭಾರತಕ್ಕೆ ಕಳವಳಕಾರಿಯಾಗಿದೆ. ಪ್ರಪಂಚದಾದ್ಯಂತದ ಅನೇಕ ಹಡಗುಗಳು ಹಾರ್ಮುಜ್ ಜಲಸಂಧಿಯಲ್ಲಿ ಸಿಲುಕಿಕೊಂಡಿವೆ. ಅವುಗಳಲ್ಲಿ ಹೆಚ್ಚಿನ ಸಂಖ್ಯೆಯ ಭಾರತೀಯ ಸಿಬ್ಬಂದಿ ಇದ್ದಾರೆ. –ನರೇಂದ್ರ ಮೋದಿ, ಭಾರತದ ಪ್ರಧಾನಿ

### ಯೂನಿವರ್ಸಲ್ ಜೋಕ್: ರಾಹುಲ್

ಭಾರತದ ಆಂತರಿಕ ರಾಜಕೀಯದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವಿನ ವಾಕ್ಸಮರವೂ ತಾರಕಕ್ಕೇರಿದೆ. ಕೇಂದ್ರದ ವಿದೇಶಾಂಗ ನೀತಿಯನ್ನು ನೇರವಾಗಿ, ಕಟುವಾಗಿ ವಾಗ್ದಾಳಿ ನಡೆಸಿರುವ ಲೋಕಸಭೆ ಪ್ರತಿಪಕ್ಷ ನಾಯಕ ಮತ್ತು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿದೇಶಾಂಗ ನೀತಿಯನ್ನು "Universal Joke" ಎಂದು ವ್ಯಂಗ್ಯವಾಡಿದ್ದಾರೆ.

## ಇ-ಖಾತೆಯ ಭ್ರಷ್ಟಾಚಾರ ಬಹಿರಂಗ..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಗ್ರೇಟರ್ ಬೆಂಗಳೂರು ಪಾಲಿಕೆಯಲ್ಲಿ ಇ–ಖಾತೆಯಲ್ಲಿ ಲಂಚಾವತಾರ ನಡೆಯುತ್ತಿದೆ ಎಂದು ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕ ಆರ್ ಅಶೋಕ್ ಆರೋಪ ಮಾಡಿದ್ದಾರೆ.

ಆರೋಪಕ್ಕೆ ಸಾಕ್ಷಿಯಾಗಿ ಸದನದಲ್ಲಿ ಫೋನ್ ಪೇ ದಾಖಲೆ ಪ್ರದರ್ಶನ ಮಾಡಿದ್ದು, ರಾಜ್ಯ ಸರ್ಕಾರದಲ್ಲಿ ಲಂಚ ಇಲ್ಲ ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿಕೊಂಡಿದ್ದರು. ಎಲ್ಲಿದೆ ಲಂಚ ಎಂದು ಪ್ರತಿ ಪಕ್ಷದ ವಿರುದ್ಧ ಡಿಕೆಶಿ ವಾಗ್ದಾಳಿ ನಡೆಸಿದ್ದರು. ಈ ವಿಚಾರವನ್ನು ಸದನದಲ್ಲಿ ಉಲ್ಲೇಖ ಮಾಡಿದ ಅಶೋಕ್, ಸದನದಲ್ಲಿ ಅಧಿಕಾರಿಗಳ ಲಂಚಾವತಾರ ತೆರೆದಿಟ್ಟರು. ಲಂಚ ಸ್ವೀಕಾರದ ಬಗ್ಗೆ ದಾಖಲೆ ಬಿಡುಗಡೆ ಮಾಡಿ, ರಮೇಶ್ ಬಿಬಿಎಂಪಿ ಅಧಿಕಾರಿ 30,000ಕ್ಕೆ ಬೇಡಿಕೆ ಇಟ್ಟಿದ್ದರು ಎಂಬ ಕುರಿತಾಗಿ ಫೋನ್ ಪೇನಲ್ಲಿ ಹಣ ವರ್ಗಾವಣೆಯ ದಾಖಲೆ ಬಿಡುಗಡೆ ಮಾಡಿದ್ದಾರೆ. 15,000 ಲಂಚ ನೀಡಿದ್ರೂ ಇ–ಖಾತಾ ಅರ್ಜಿ ತಿರಸ್ಕರಿಸಲಾಗಿತ್ತು ಎಂದು ಅಶೋಕ್ ಆರೋಪಿಸಿದ್ದಾರೆ.

## ರಾಜ್ಯದಲ್ಲಿ ಹಿಂದೂಗಳ ಸರ್ಕಾರ ಶೀಘ್ರ

• ಮಲ್ಲಮ್ಮ ನುಡಿ ವಾರ್ತೆ ಮದ್ದೂರು



2028ರ ಕರ್ನಾಟಕ ಚುನಾವಣೆಯಲ್ಲಿ ರಾಜ್ಯದಲ್ಲಿ ಹಿಂದೂಗಳ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಭವಿಷ್ಯ ನುಡಿದಿದ್ದಾರೆ.

ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ವಿವಿಧ ಹಿಂದೂ ಸಂಘಟನೆಗಳು ಆಯೋಜಿಸಿದ್ದ ಬಲಿದಾನ್ ದಿವಸ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಸರ್ಕಾರ ಬಂದರೆ, ಪೊಲೀಸರ ಕೈಗೆ ಎಕೆ.47 ಕೊಟ್ಟು ಪಾಕಿಸ್ತಾನ್ ಜಿಂದಾಬಾದ್ ಅಂದವರ ಬಾಯಿಗೆ ಗುಂಡು ಹೊಡೆಸ್ತೀವಿ ಎಂದು ಗುಡುಗಿದ್ದಾರೆ. ನಮ್ಮ ಪಕ್ಷ ಸರ್ಕಾರ ರಚಿಸಿದ್ದೇ ಆದರೆ, ಗಣಪತಿ ಉತ್ಸವಾ ಅಥವಾ ಹಿಂದೂ ಆಚರಣೆಗಳ ಮೇಲೆ ಹಲ್ಲೆ ನಡೆದರೆ ಬುಲ್ಡೋಜರ್ ಬಳಸಲಾಗುವುದು, ಪೊಲೀಸ್ ಅಧಿಕಾರಿಗಳನ್ನು ಎಐ–47 ರೈಫಲ್ಗಳಿಂದ ಸಜ್ಜುಗೊಳ್ಳಲಾಗುವುದು ಎಂದು ಹೇಳಿದ್ದಾರೆ. 'ಪಾಕಿಸ್ತಾನ ಜಿಂದಾಬಾದ್' ಎಂಬ ಘೋಷಣೆ ಕೂಗುವವರಿಗೆ ಬಾಯಿಗೆ ಗುಂಡು ಹೊಡೆಸಲಾಗುವುದು ಎಂದು ಪ್ರತಿಕ್ರಿಯಿಸಿದ್ದಾರೆ.

## ಜಾತಿ ಸಂಘರ್ಷದಲ್ಲಿ ಕೊಳಗಲ್ಲು..!

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯ ಕೊಳಗಲ್ಲಿನಲ್ಲಿ ಉಂಟಾದ ಜಾತಿ ಸಂಘರ್ಷವು ಇಡೀ ಗ್ರಾಮವನ್ನೇ ಇಬ್ಭಾಗ ಮಾಡಿದೆ. ಸಾಮಾನ್ಯ ಜನರ ದಿನನಿತ್ಯದ ಜೀವನವನ್ನು ಅಸ್ತವ್ಯಸ್ತಗೊಳಿಸಿದೆ.

ಕುರುಬ, ವಾಲ್ಮೀಕಿ ಹಾಗೂ ಮಾದಿಗ ಸಮುದಾಯಗಳ ನಡುವೆ ಉಂಟಾದ ವೈಮನಸ್ಸು ಇದೀಗ ಗ್ರಾಮದಲ್ಲಿ ಸಾಮಾಜಿಕ ಏಕತೆಯನ್ನು ಮುರಿದಿದೆ. ಕೆಲವು ವಾರಗಳಿಂದ ಗ್ರಾಮದಲ್ಲಿರುವ ಎಲ್ಲಾ ಎಂಟು ಸವಿತಾ ಸಮಾಜದ ಅಂಗಡಿಗಳು ಸಂಪೂರ್ಣವಾಗಿ ಬಂದ್ ಆಗಿವೆ. ಎಲ್ಲಾ ಸಮುದಾಯಗಳಿಗೂ ಸೇವೆ ನೀಡುವ ಇವರು, ಈಗ ಈ ಸಂಘರ್ಷದ ಮಧ್ಯೆ ಸಿಲುಕಿಕೊಂಡಿದ್ದಾರೆ.

ಒಂದು ಸಮುದಾಯದವರಿಗೆ ಸೇವೆ ನೀಡಿದರೆ ಮತ್ತೊಂದು ಸಮುದಾಯದಿಂದ ವಿರೋಧ ವ್ಯಕ್ತವಾಗುತ್ತಿರುವ ಕಾರಣ, ಸಿವತಾ ಸಮಾಜದವರು ತಮ್ಮ ಅಂಗಡಿಗಳನ್ನು ಬಂದ್ ಮಾಡುವ ನಿರ್ಧಾರಕ್ಕೆ ಬಂದಿದ್ದಾರೆ. ನಾವು ಎಂದಿಗೂ ಜಾತಿಯ ಆಧಾರದ ಮೇಲೆ ಯಾರನ್ನೂ ನೋಡಿಲ್ಲ. ಆದರೆ, ಈಗ ನಾವು ಮಾಡದ ತಪ್ಪಿನ ಶಿಕ್ಷೆ ಅನುಭವಿಸುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಕೊಳಗಲ್ಲು ಗ್ರಾಮವು ಹಿಂದಿನಿಂದಲೂ ಜಾತಿ ಆಧಾರಿತ ಪ್ರದೇಶವಾಗಿದ್ದು, ಕುರುಬ ಮತ್ತು ಮಾದಿಗ ಸಮುದಾಯಗಳ ನಡುವೆ ಈ ಹಿಂದೆ ಕೂಡ ಸಂಘರ್ಷಗಳು ನಡೆದಿರುವ ಉದಾಹರಣೆಗಳಿವೆ. ಈ ಸಂಬಂಧ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



### ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡ

ಈ ಪರಿಸ್ಥಿತಿಯಿಂದ ಗ್ರಾಮಸ್ಥರಿಗೂ ಸಂಕಷ್ಟ ಎದುರಾಗಿದೆ. ಸಣ್ಣಪುಟ್ಟ ಸೇವೆಗಳಿಗೂ ಜನರು ಬಳ್ಳಾರಿ ನಗರಕ್ಕೆ ತೆರಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮದಲ್ಲಿ ಇಷ್ಟರಲ್ಲೇ ಎರ್ರಿತಾತನ ವಾರ್ಷಿಕ ಜಾತ್ರೆ, ರಥೋತ್ಸವ ನಡೆಯಬೇಕಿದೆ. ಒಂದು ಸಮುದಾಯ ಜಾತ್ರೆ ನಡೆಸುವುದಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದರೆ, ಮತ್ತೊಂದು ಸಮುದಾಯ ಸಂಪ್ರದಾಯ ಮುಂದುವರೆಸುವಂತೆ ಒತ್ತಾಯಿಸುತ್ತಿದೆ. ಇದರಿಂದ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ ಎಂದು ಜನತೆ ಆತಂಕವ್ಯಕ್ತಪಡಿಸಿದ್ದಾರೆ.

## ಅಕ್ರಮ ಮನೆಗಳನ್ನು ಸಕ್ರಮಗೊಳಿಸಿ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಮಸಳಿ ಗ್ರಾಮದಲ್ಲಿ ಜಮೀನು ಸರ್ವೆ ನಂ.ಗಳಾದ 3/2 3 410/2, 481, 482/+ ಈ ಐದು ಜಮೀನುಗಳಲ್ಲಿರುವ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಅಕ್ರಮ ಇದ್ದ ಮನೆಗಳಿಗೆ ಸಕ್ರಮಗೊಳಿಸಿ 'ಇ' ಸ್ವತ್ತು ಉತಾರಿ ನೀಡುವ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಳಿಗೆ ಮನವಿ ಸಲ್ಲಿಸಿದ್ದಾರೆ.

ರಾಜ್ಯಪಾಲರ ವತಿಯಿಂದ ಗ್ರಾಂ. ಪಂ. ಅಭಿವೃದ್ಧಿ ಅಧಿಕಾರಿಗಳಿಗೆ ಐದು ಜಮೀನುಗಳ ಹಸ್ತಾಂತರಿಸಲಾಗಿದೆ. 30 ವರ್ಷಗಳಿಂದ ಮೂರು ನೂರು ಕುಟುಂಬಗಳು ವಾಸವಿದ್ದು ಈ ಎಲ್ಲಾ ಕುಟುಂಬಗಳಿಗೆ ಪಂಚಾಯಿತಿಯಲ್ಲಿ ಈಗಾಗಲೇ ಕೆಲವೊಂದು ಕೈಬರಹ ಉತಾರಿ ದೊರೆಯುತ್ತಿದೆ. 2014–2015ರಿಂದ ಈ ಎಲ್ಲಾ ಕುಟುಂಬಗಳಿಗೆ ಕುಡಿಯುವ ನೀರು, ವಿದ್ಯುತ್ ಸೌಲಭ್ಯ , ರಸ್ತೆಯ ವ್ಯವಸ್ಥೆ ಇದೆ ಹಾಗಾಗಿ ಎಲ್ಲರಿಗೂ ಇ ಸ್ವತ್ತನ್ನು ಮಾಡಿ ಗಣಕಯಂತ್ರದ ಉತಾರಿ ನೀಡಲು ಕುಟುಂಬಗಳು ಆಗ್ರಹಿಸಿದ್ದಾರೆ.




**ಲೋಕಸಭೆಯಲ್ಲಿ ರಾಷ್ಟ್ರೀಯ ಭದ್ರತೆ, ಸಹಕಾರಿ ಒಕ್ಕೂಟ, ದಕ್ಷಿಣ ಕನ್ನಡದ ಅಭಿವೃದ್ಧಿ ಪರ ಧ್ವನಿಯೆತ್ತಿದ್ದಾರೆ: ಕ್ಯಾ. ಬ್ರಿಜೇಶ್ ಚೌಟ, ಸಂಸದ**



ಬಸವಕಲ್ಯಾಣ :– ಇಲ್ಲಿನ ತಿಪುರಾಂತಿನ ಜಗದ್ಗುರು ಘನಲಿಂಗ ರುದ್ರಮುನಿ ಸಂಸ್ಥಾನ ಗವಿಮಠದಿಂದ ಸೋಮವಾರ ಪೂಜ್ಯಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜಾತ್ರಾ ಭಿತ್ತಿಪತ್ರ ಬಿಡುಗಡೆ ಗೊಳಿಸಿದರು. ಈ ಸಂದರ್ಭದಲ್ಲಿ ಶರಣಪ್ಪ ಬಿರಾದಾರ. ಬಸವಂತಪ್ಪ ಲವಾರೆ. ಮಲ್ಲಿಕಾರ್ಜುನ್ ಅಲಗೂಡೆ. ದೀಲಿಪ ಕುಮಾರ್ ದೇಸಾಯಿ. ಸೂರ್ಯಕಾಂತ ಬಿರಾದಾರ. ಸಂಜುಕುಮಾರ ಜಾಧವ. ಲೋಕೇಶ್ ಮೊಳಕೆರೆ. ರವಿ ನೌದಗಿಕರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಮಲ್ಲಮ್ಮ ನುಡಿ ಚಿತ್ರ.

# ಪಕ್ಷವನ್ನು ತಳಮಟ್ಟದಿಂದ ಭದ್ರಗೊಳಿಸಿ




• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪಟ್ಟಣದ ಭಾರತೀಯ ಜನತಾ ಪಾರ್ಟಿ ಮಂಡಲ ಕಾರ್ಯಾಲಯದಲ್ಲಿ ರೈತ ಮೋರ್ಚಾ ಪದಾಧಿಕಾರಿಗಳ ಸ್ವಾಗತ ಹಾಗೂ ಪರಿಚಯ ಕಾರ್ಯಕ್ರಮ ಜರುಗಿತು.

ಈ ಸಂದರ್ಭದಲ್ಲಿ ನೂತನವಾಗಿ ನೇಮಕವಾದ ರೈತ ಮೋರ್ಚಾದ ಪದಾಧಿಕಾರಿಗಳು ಮಾಜಿ ಶಾಸಕ ಪ್ರಕಾಶ ಖಂಡ್ರೆ ಅವರನ್ನು ಸನ್ಮಾನಿಸಿದರು. ರೈತ ಮೋರ್ಚಾದ ಪದಾಧಿಕಾರಿಗಳನ್ನು ಪ್ರಕಾಶ ಖಂಡ್ರೆ ಸನ್ಮಾನಿಸಿ ಪಕ್ಷದ ಸಂಘಟನೆಗೆ ಹೆಚ್ಚಿನ ಸಮಯ ನೀಡಿ ಪಕ್ಷವನ್ನು ತಳಮಟ್ಟದಿಂದ ಬಲಿಷ್ಠ ಮಾಡಿ ಎಂದು ಸಲಹೆ ನೀಡಿದರು. ಈ ಸಂಧರ್ಭದಲ್ಲಿ ಮಂಡಲ ಅಧ್ಯಕ್ಷರಾದ ವೀರಣ್ಣ ಕಾರಬಾರಿ, ಮಂಡಲ ಪ್ರಧಾನ ಕಾರ್ಯದರ್ಶಿಯಾದ ರೇವಣಸಿದ್ದ ಜಾಡರ್, ಡಾ. ಮಹೇಶ್

ಭಾಲ್ಕೆ, ರೈತ ಮೋರ್ಚಾ ಅಧ್ಯಕ್ಷರಾದ ಶಿವಕುಮಾರ ಅಣದೂರೆ, ರೈತ ಮೋರ್ಚಾದ ಪ್ರಧಾನ ಕಾರ್ಯದರ್ಶಿಗಳಾದ ಜಗದೀಶ್ ಕನ್ನಾಳೆ , ಮಾರುತಿ ಬಿರಾದಾರ್ ಸೇರಿದಂತೆ ಮೋರ್ಚಾದ ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಖಜಾಂಚಿ, ಕಾರ್ಯಕಾರಿಣಿ ಸದಸ್ಯರು, ಹಾಗೂ ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೊ: 9845028349



## ಸರಕಾರಿ ಕಛೇರಿಗಳಲ್ಲಿ ಜನತೆಗೆ ಅಲೆದಾಡಿಸಬೇಡಿ

ರಾಜ್ಯದ ವಿವಿಧ ಸರಕಾರಿ ಕಛೇರಿಗಳಿಗೆ ಪ್ರತಿದಿನ ಅನೇಕ ಜನರು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಬರುತ್ತಾರೆ. ಆದರೆ ಹಲವಾರು ಕಡೆಗಳಲ್ಲಿ ಜನರು ಒಂದು ಕಛೇರಿಯಿಂದ ಮತ್ತೊಂದು ಕಛೇರಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿರುವುದು ವಿಷಾದಕರ ಸಂಗತಿ. ಸರಕಾರಿ ಸೇವೆಗಳನ್ನು ಪಡೆಯಲು ಜನರು ದಿನಗಟ್ಟಲೆ ಕಾಯಬೇಕಾಗುವುದು, ಅಧಿಕಾರಿಗಳನ್ನು ಭೇಟಿಯಾಗಲು ಸಾಧ್ಯವಾಗದಿರುವುದು ಸಾಮಾನ್ಯ ಸಮಸ್ಯೆಯಾಗುತ್ತಿದೆ.

ಸಾಮಾನ್ಯ ನಾಗರಿಕರು ಜನನ ಪ್ರಮಾಣ ಪತ್ರ, ಮರಣ ಪ್ರಮಾಣ ಪತ್ರ, ಜಮೀನು ದಾಖಲೆಗಳು, ಪಿಂಚಣಿ, ರೇಷನ್ ಕಾರ್ಡ್ ಸೇರಿದಂತೆ ಅನೇಕ ಕೆಲಸಗಳಿಗಾಗಿ ಕಛೇರಿಗಳ ದ್ವಾರ ತಟ್ಟುತ್ತಾರೆ. ಆದರೆ ಅಗತ್ಯ ದಾಖಲೆಗಳ ಹೆಸರಿನಲ್ಲಿ ಅಥವಾ ಅಧಿಕಾರಿಗಳು ಕಛೇರಿಯಲ್ಲಿ ಲಭ್ಯವಿಲ್ಲ ಎಂಬ ಕಾರಣಗಳಿಂದ ಜನರನ್ನು ಮತ್ತೆ ಮತ್ತೆ ಕರೆದೊಯ್ಯುವುದು ಜನರಿಗೆ ತೊಂದರೆ ಉಂಟುಮಾಡುತ್ತಿದೆ.

ಸರಕಾರ ಜನರಿಗೆ ಸುಲಭವಾಗಿ ಸೇವೆಗಳು ದೊರಕುವಂತೆ ವಿವಿಧ ಯೋಜನೆಗಳು ಮತ್ತು ವ್ಯವಸ್ಥೆಗಳನ್ನು ಜಾರಿಗೆ ತಂದಿದ್ದರೂ, ಅವುಗಳು ತಳಮಟ್ಟದಲ್ಲಿ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಕೆಲವು ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಕಾರ್ಯನಿರ್ವಹಣೆಯ ಕೊರತೆಯಿಂದ ಜನರಿಗೆ ಅನಾವಶ್ಯಕ ತೊಂದರೆಗಳು ಎದುರಾಗುತ್ತಿವೆ.

ಜನರು ತಮ್ಮ ದೈನಂದಿನ ಕೆಲಸಗಳನ್ನು ಬಿಟ್ಟು ಕಛೇರಿಗಳಿಗೆ ಬರುವುದು ಸುಲಭವಲ್ಲ. ರೈತರು, ಕಾರ್ಮಿಕರು ಮತ್ತು ಗ್ರಾಮೀಣ ಪ್ರದೇಶದ ಜನರು ಒಂದು ಕೆಲಸಕ್ಕಾಗಿ ಹಲವು ಬಾರಿ ಕಛೇರಿಗೆ ಬರಬೇಕಾದರೆ ಅದು ಅವರಿಗೆ ಆರ್ಥಿಕ ಹಾಗೂ ಮಾನಸಿಕ ಕಷ್ಟವನ್ನುಂಟುಮಾಡುತ್ತದೆ.

ಆದ್ದರಿಂದ ಸರಕಾರಿ ಅಧಿಕಾರಿಗಳು ಜನರ ಸಮಸ್ಯೆಗಳನ್ನು ತಕ್ಷಣ ಗಮನಿಸಿ, ಒಂದೇ ಬಾರಿ ಬಂದಾಗ ಕೆಲಸ ಮುಗಿಯುವಂತೆ ಕ್ರಮ ಕೈಗೊಳ್ಳಬೇಕು. ಜನರನ್ನು ಅಲೆದಾಡಿಸುವ ಪ್ರವೃತ್ತಿ ನಿಲ್ಲಬೇಕು. ಸರಕಾರಿ ಕಛೇರಿಗಳು ಜನಸೇವೆಯ ಕೇಂದ್ರಗಳಾಗಬೇಕು, ಜನರ ಕಷ್ಟ ಹೆಚ್ಚಿಸುವ ಸ್ಥಳಗಳಾಗಬಾರದು.

ಜನಸಾಮಾನ್ಯರಿಗೆ ಸುಲಭವಾಗಿ ಹಾಗೂ ಗೌರವದಿಂದ ಸೇವೆ ನೀಡುವುದು ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯ ಎಂಬುದನ್ನು ಮರೆಯಬಾರದು. ಆಗ ಮಾತ್ರ ಜನರಲ್ಲಿ ಸರಕಾರದ ಮೇಲಿನ ನಂಬಿಕೆ ಮತ್ತಷ್ಟು ಬಲವಾಗುತ್ತದೆ.

# ಶಾಂತಿಯುತ ರಾಮನವಮಿಗೆ ಸಭೆ




• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಪಟ್ಟಣದಲ್ಲಿ ಶ್ರೀರಾಮನವಮಿ ಹಬ್ಬವನ್ನು ಅತ್ಯಂತ ಶಾಂತಿಯುತವಾಗಿ ಹಾಗೂ ಸೌಹಾರ್ದಯುತವಾಗಿ ಆಚರಿಸುವ ನಿಟ್ಟಿನಲ್ಲಿ ಕಮಲನಗರ ಪೊಲೀಸ್ ಠಾಣೆಯ ಆವರಣದಲ್ಲಿ ಮಂಗಳವಾರ ಮಹತ್ವದ 'ಶಾಂತಿ ಸಭೆ'ಯನ್ನು ಆಯೋಜಿಸಲಾಗಿತ್ತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ತಹಶೀಲ್ದಾರ ಅಮಿತಕುಮಾರ ಕುಲಕರ್ಣಿ ಅವರು, "ಹಬ್ಬಗಳು ಸಮಾಜದಲ್ಲಿ ಭಾವೈಕ್ಯತೆಯನ್ನು ಮೂಡಿಸುವಂತಿರಬೇಕು. ಪ್ರತಿಯೊಬ್ಬರೂ ಕಾನೂನು ಚೌಕಟ್ಟಿನಲ್ಲಿ ಹಬ್ಬವನ್ನು ಆಚರಿಸುವ ಮೂಲಕ ಸೌಹಾರ್ದತೆಯನ್ನು ಕಾಪಾಡಬೇಕು," ಎಂದು ಸಲಹೆ ನೀಡಿದರು.

ಸಿಪಿಐ ಶ್ರೀಕಾಂತ ಅಲ್ಲಪುರೆ ಅವರು ಮಾತನಾಡಿ, ಹಬ್ಬದ ಮೆರವಣಿಗೆಯ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು. ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.ಪಿಎಸ್ಐ ಆಶಾ ರಾಠೋಡ್ ಅವರು ಹಬ್ಬದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕಮಲನಗರ ಗ್ರಾಮ ಪಂಚಾಯತ ಪಿ.ಡಿ.ಓ ದಿಲೀಪ ಸಂತಪುರೆ, ಪ ಮುಖಂಡರಾದ ಶ್ರೀರಂಗ ಪರಿಹಾರ, ಬಾಲಾಜಿ ತೆಲೆಂಗ, ಎಸ್.ಎನ್. ಶಿವಣಕರ, ಶಿವಾನಂದ ವಡ್ಡೆ, ಅಝುರ ಭಾಗವನ ಸೇರಿದಂತೆ ವಿವಿಧ ಸಮುದಾಯದ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಸಭೆಯಲ್ಲಿ ಹಬ್ಬದ ಮೆರವಣಿಗೆ ಮಾರ್ಗ, ಧ್ವನಿವರ್ಧಕ ಬಳಕೆ ಹಾಗೂ ಅಗತ್ಯ ಮುನ್ನೆಚ್ಚರಿಕೆಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು.

# ವಚನ ವಿಶ್ವವಿದ್ಯಾಲಯಕ್ಕೆ ದೇವರ ದಾಸಿಮಯ್ಯನವರ ಹೆಸರಿಡಿ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಬಸವನಾಡಿನ ಬಸವಕಲ್ಯಾಣದಲ್ಲಿ ಅನಾವರಣಗೊಳ್ಳುತ್ತಿರುವ ರಾಜ್ಯದ ಪ್ರಪ್ರಥಮ ಹಾಗೂ ನೂತನ ವಚನ ವಿಶ್ವವಿದ್ಯಾಲಯಕ್ಕೆ ಆದ್ಯ ವಚನಕಾರರಾದ ದೇವರ ದಾಸಿಮಯ್ಯನವರ ಹೆಸರಿಡಲು ವಿನಂತಿಸಿ ತಹಸಿಲ್ದಾರರ ಮುಖಾಂತರ ಮುಖ್ಯಮಂತ್ರಿಗಳಿಗೆ ತಾಲೂಕಿನ ನೇಕಾರ ಸಮುದಾಯಗಳ ಒಕ್ಕೂಟದ ಬಾಂಧವರು ಮನವಿ ಸಲ್ಲಿಸಿದರು. ರಾಮನಾಥ ಎಂಬ ಅಂಕಿತದಲ್ಲಿ ಸುಮಾರು 176 ವಚನಗಳನ್ನು ರಚಿಸಿದ್ದಾರೆ. ಇವರ ವಚನಗಳು ಸರಳ, ವೈಚಾರಿಕ, ಸಮಾಜ ಸುಧಾರಣೆಯ ಸಂದೇಶವನ್ನು ಸಾರುತ್ತವೆ. ಎಂದು ಸಮಾಜದ ಮುಖಂಡರು ತಿಳಿಸಿದರು. ಸಂದರ್ಭದಲ್ಲಿ ಸಂತೋಷ್ ಬಿಜಿ ಪಾಟೀಲ್, ಬಾಬುರಾವ್ , ಬಸವರಾಜ್ ದುಮ್ಮನಸೂರೆ, ರೇವಣಸಿದ್ಧ ಗೌಡನೂರ, ಸಂಗಮೇಶ್ ಕಾಮುರ್ಗೆ, ಸಚಿನ್ , ಮಂಗಲಾ ಕಾಡೋದೇ, ಶೃತಿ ಪಾಟೀಲ್, ರೇಖಾ ನಂದಗೆ, ಚಂದ್ರಕಾಂತ್ ಹಿಪ್ಪರಗೆ ಇನ್ನಿತರರು ಉಪಸ್ಥಿತರಿದ್ದರು.

# ಸಾಲಬಾಧೆ ತಾಳದೆ ರೈತ ನೇಣಿಗೆ ಶರಣು



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ತಾಲೂಕಿನ ಹಾಲಹಳ್ಳಿ(ಕೆ) ಗ್ರಾಮದಲ್ಲಿ ರೈತರೊಬ್ಬರು ಭಾನುವಾರ ಸಾಲಬಾಧೆ ತಾಳಲಾರದೇ ನೇಣು ಬೀಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸೋಮನಾಥ ಕಲ್ಲಪ್ಪ ಲಿಂಗಬಾಶೆಟ್ಟಿ(53) ಆತ್ಮಹತ್ಯೆ ಮಾಡಿಕೊಂಡ ರೈತ. ಇವರಿಗೆ ಪತ್ನಿ, ಮೂವರು ಪುತ್ರಿಯರು, ಒರ್ವ ಪುತ್ರನಿದ್ದಾನೆ.

ಕಳೆದ 3–4 ವರ್ಷಗಳಿಂದ ಕೃಷಿ ನಿರ್ವಹಣೆಗಾಗಿ ಸ್ವಸಹಾಯ ಸಂಘ ಸೇರಿ ಖಾಸಗಿಯಾಗಿ ಲಕ್ಷಾಂತರ ರೂ ಸಾಲ ಮಾಡಿದ್ದಾರೆ. ಹೊಲದಲ್ಲಿನ ಬೆಳೆಗಳು ಕೈಕೊಟ್ಟಿದ್ದರಿಂದ ಸಾಲದ ಹೊರೆ ಹೆಚ್ಚುತ್ತಲೇ ಇತ್ತು. ಹಾಗಾಗಿ ಸಾಲ ತೀರಿಸಲು ಸಾಧ್ಯವಾಗದೇ ಮನೆಯಲ್ಲಿ ಭಾನುವಾರ ನಸುಕಿನ ಜಾವ ಫ್ಯಾನ್‌ಗೆ ನೇಣು ಬೀಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ,

ಈ ಕುರಿತು ಮೃತ ರೈತನ ಪತ್ನಿ ಸಂಪಾವತಿ ನೀಡಿದ ದೂರಿನ ಮೇರೆಗೆ ಧನ್ನೂರಾ(ಎಚ್) ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಉದ್ಯೋಗ : ನೇರ ಸಂದರ್ಶನ

ರಾಯಚೂರು: ಇಲ್ಲಿನ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಮಾರ್ಚ್ 27ರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 02 ಗಂಟೆವರೆಗೆ ನೇರ ಸಂದರ್ಶನ ಆಯೋಜಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವಂತೆ ಕೋರಲಾಗಿದೆ.

ನೇರ ಸಂದರ್ಶನದಲ್ಲಿ ಎರಡು ಖಾಸಗಿ ಕಂಪನಿಗಳು ಭಾಗವಹಿಸಿ ತಮ್ಮಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳಲಿದ್ದಾರೆ.

ಅರ್ಹತೆಗಳು: ಎಸ್.ಎಸ್.ಎಲ್.ಸಿಮ, ಪಿ.ಯು.ಸಿ ಹಾಗೂ ಎಲ್ಲಾ ಪದವೀಧರ ಆಸಕ್ತ 18 ರಿಂದ 30 ವರ್ಷಗಳ ವರೆಗಿನ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ.

ವಿದ್ಯಾರ್ಹತೆಯ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳು ಮತ್ತು ತಮ್ಮ ಬಯೋಡೆಟಾ, ಆಧಾರ್ ಕಾರ್ಡ್ ಪ್ರತಿ, ಭಾವಚಿತ್ರಗನ್ನು ಸಲ್ಲಿಸಬೇಕು.

## ಚೆಕ್‌ಬುಕ್ ಕಳೆದು ಹೋಗಿವೆ

ನಾನು **ಸಂತೋಷ ತಂದೆ ರಾಮಶೇಟ್ಟಿ ಘಾಳೆ** ಸಾ.ಬಾಲಾಜಿ ಇನ್‌ಫರ್ ಪ್ರೋಜೆಕ್ಟ್ ಮುಚಳಂ ತಾಲ್ಲೂಕು ಬಸವಕಲ್ಯಾಣ ಆದ ನಾನು ನನ್ನ ಎಚ್‌ಡಿಎಫ್‌ಸಿ ಬ್ಯಾಂಕಿನ ಖಾತೆ ಸಂಖ್ಯೆ:50200106702687 ಆಗಿದ್ದು, ಇದೇ ಖಾತೆಯ ಚೆಕ್‌ಪುಕ್‌ಗಳು ಕಳೆದು ಹೋಗಿವೆ. ಅದರಲ್ಲಿ ಒಟ್ಟು 23 ಚೆಕ್ ಬುಕ್ ಹಾಳೆಗಳು ಇದ್ದು, ಚೆಕ್ ನಂ. 000001 ರಿಂದ 000022 ಆಗಿರುತ್ತದೆ. ನನ್ನ ಎಲ್ಲಾ ಚೆಕ್ ಬುಕ್ ಹಾಳೆಗಳ ಸಹಿ ಮಾಡಿದ್ದೇನೆ. ಚೆಕ್ ಬುಕ್ ಜನವರ 20 –2026 ರಿಂದ ಕಾಣೆಯಾಗಿದ್ದು, ಬಸವಕಲ್ಯಾಣ ಅಥವಾ ನನ್ನ ಸೈಟ್ ಕೆಲಸ ಇರುವ ಭುವಿಂಜ್ ತಾಲ್ಲೂಕು, ವೈ. ಸತಾರಾ ಜಿಲ್ಲೆ ಮಹಾರಾಷ್ಟ್ರದಲ್ಲಿ ಕಳೆದು ಹೋಗಿವೆ, ಈ ಚೆಕ್‌ಬುಕ್‌ಗಳು ಯಾರಿಗಾದರೂ ದೂರಕಿದರೆ ಇಂದೆ ಸಂಪರ್ಕಿಸಿ: 9036377060

ಕರ್ನಾಟಕ ಸರ್ಕಾರ

ತಾಲೂಕಾ ಪಂಚಾಯತ ಔರಾದ(ಬಿ)

ಕಚೇರಿ ದೂರವಾಣಿ:–08485–280030 E-mail:-eotpaurad@gmail.com

ಸಂಖ್ಯೆ;ತಾಪಂಔ/ನರೇಗಾ/ಸಿಆರ್–/2026–27 ದಿನಾಂಕ: 24/03/2026

**ಗುತ್ತಿಗೆ ಆಧಾರದ ಮೇಲೆ ವಾಹನ ಸರಬರಾಜಿಗೆ ಟೆಂಡರ್ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2026–27 ನೇ ಸಾಲಿಗೆ ಎಪ್ರಿಲ್ 2026 ರಿಂದ ಮಾರ್ಚ–2027 ರವರೆಗೆ ಸಹಾಯಕ ನಿರ್ದೇಶಕರು (ಗ್ರಾ.ಉ) ತಾಲೂಕ ಪಂಚಾಯತ ಔರಾದ(ಬಾ) ಇವರು ನರೇಗಾ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯತಗಳ ಸಂದರ್ಶನ/ತಪಾಸಣೆಗಾಗಿ ಸಂಚರಿಸಲು ಕೆಳಗೆ ಕೋಷ್ಠಕದಲ್ಲಿ ಸೂಚಿಸಿದ ನಾಲ್ಕು ಚಕ್ರಗಳ ಒಂದು ವಾಹನ ಅವಶ್ಯಕತೆ ಇರುತ್ತದೆ.

ಪ್ರಯುಕ್ತ ಆಸಕ್ತ ವಾಹನ ಮಾಲೀಕರಿಂದ/ಟ್ರಾವೆಲ್ ಏಜೆನ್ಸಿಗಳಿಂದ ಟೆಂಡರ್ ಆಹ್ವಾನಿಸಿದೆ. ಅರ್ಹ ಮಾಲೀಕರು/ಟ್ರಾವೆಲ್ ಏಜೆನ್ಸಿಗಳ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

| ಕ್ರ.ಸಂ | ವಾಹನದ ವಿವರ | ಮಾಸಿಕ ಕ್ರಮಿಸಬೇಕಾದದೂರ | ಮಾಸಿಕ ನಿಗದಿಪಡಿಸಿದ ಗರಿಷ್ಟ ಮೊತ್ತ | ಟೆಂಡರ್‌ಅರ್ಜಿಯ ಬೆಲೆ |
|---|---|---|---|---|
| 1 | ನಾಲ್ಕು ಚಕ್ರದ ವಾಹನ (ಎ.ಸಿ ಸಹಿತ ಕಾರು) | 2500 ಕಿ.ಮೀ | ರೂ.35000/– + ಜಿ.ಎಸ್.ಟಿ | ರೂ.500/– |

1. ಟೆಂಡರ್ ಅರ್ಜಿಗಳನ್ನು ದಿನಾಂಕ: 25/03/2026 ರಿಂದ 30/03/2026 ರೊಳಗೆ ಈ ಕಛೇರಿಯಲ್ಲಿ ಕಛೇರಿ ಅವಧಿಯಲ್ಲಿ ಬೆಳಗ್ಗೆ 10:00 ಗಂಟೆಯಿಂದ ಸಂಜೆ 5:30 ರವರೆಗೆ ಪಡೆಯಬಹುದು.
2. ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಮುಚ್ಚಿದ ಲಕೋಟೆಯಲ್ಲಿ ದಿನಾಂಕ: 01/04/2026 ರಂದು ಸಂಜೆ 5:30ರ ಒಳಗಾಗಿ ಈ ಕಛೇರಿಗೆ ತಲುಪುವಂತೆ ಅಂಚೆ ಮೂಲಕ/ಖುದ್ದಾಗಿ ಸಲ್ಲಿಸಬಹುದು.
3. ಟೆಂಡರ್‌ನ್ನು ದಿನಾಂಕ:02/04/2026ರಂದು ಸಂಜೆ 4:00 ಗಂಟೆಗೆ ಈ ಕಛೇರಿಯ ಅಧಿಕಾರಿಗಳ ಸಮಕ್ಷಮದಲ್ಲಿ ತೆರೆಯಲಾಗುವುದು.
4. ಷರತ್ತು ಹಾಗೂ ನಿಬಂಧನೆಗಳನ್ನು ಟೆಂಡರ್ ಫಾರಂನೊಂದಿಗೆ ಪಡೆಯುವುದು.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಮುಖ್ಯಸ್ಥರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕು ಪಂಚಾಯತ, ಔರಾದ(ಬಾ).

# ಮಾ.26 ರಂದು ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–2 ರ ವ್ಯಾಪ್ತಿಯಲ್ಲಿ ವಿದ್ಯುತ್ ಲೈನ್ ಗಳ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುರಿಂದ 11 ಕೆ.ವಿ ಫೀಡರ್ ಗಳಾದ ಎಫ್–33, ಎಫ್–73 ವ್ಯಾಪ್ತಿಯ ವಿವಿಧೆಡೆ ಮಾ.26 ರಂದು ಬೆಳಿಗ್ಗೆ 9.30 ರಿಂದ ಸಂಜೆ 5.30 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:

ಎಫ್–33 ರ ವ್ಯಾಪ್ತಿಯ ಕೆ.ಚ್.ಬಿ. ಕಾಲೋನಿ, ನೇತಾಜಿ ನಗರ, ಇನ್ನಾರೆಡ್ಡಿ ಲೇಔಟ್, ಇನ್ ಫ್ಯಾಂಟರಿ ರಸ್ತೆ, ವಾಸವಿ ಶಾಲೆ, ಕೊಳಗಲ್ ರಸ್ತೆ, ವಿದ್ಯಾನಗರ, ಕಲ್ಯಾಣಿ ಕಾಲೋನಿ, ಭತ್ರಿ ರಸ್ತೆ, ಭತ್ರಿ, ಗುರು ಕಾಲೋನಿ, ಸತ್ಯವಾಣಿ ನಗರ, ಸಿದ್ಧಾರ್ಥ ನಗರ, ವಿಯಾನಿ ಶಾಲೆ.

ಎಫ್–73 ರ ವ್ಯಾಪ್ತಿಯ ಬಸವನಕುಂಟೆ, ಕೋಟೆ ಪ್ರದೇಶ, 1 ನೇ ಗೇಟ್, 2 ನೇ ಗೇಟ್, ಸಿದ್ದಾರ್ಥ ನಗರ, ಸುಧಾಕ್ರಾಸ್, ಒ.ಪಿ.ಡಿ ಸೇರಿದಂತೆ ಮುಂತಾದ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹಾಗಾಗಿ ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಲ್ಲಮ್ಮ ಪಾಟೀಲ್‌ಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪಟ್ಟಣದ ನಿವಾಸಿ, ನಿವೃತ್ತ ಪ್ರಾಂಶುಪಾಲರಾದ ಮಲ್ಲಮ್ಮ ಆರ್ ಪಾಟೀಲ್ ರವರಿಗೆ ಬೆಂಗಳೂರಿನಲ್ಲಿ ಮಂಗಳವಾರ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಲ್ಲಮ್ಮ ಆರ್ ಪಾಟೀಲ್ ರವರ ಸಾಹಿತ್ಯಿಕ ಚಿಂತನ, ಸಂಘಟನಾ ಶಕ್ತಿಯನ್ನು ಗುರುತಿಸಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ರವರು ಪ್ರಶಸ್ತಿ ನೀಡಿ ಗೌರವಿಸಿದರು. ಈ ಭಾಗದ ಮಹಿಳೆಗೆ ಅತ್ಯುತ್ತಮ ಪ್ರಶಸ್ತಿ ದೊರೆತಿದ್ದಕ್ಕಾಗಿ ಕಲ್ಯಾಣ ಕರ್ನಾಟಕ ಪ್ರತಿಷ್ಠಾನದ ತಾಲೂಕು ಅಧ್ಯಕ್ಷ ಶಿವಾಜಿರಾವ್ ಮಾನೆ, ನ್ಯಾಯವಾದಿ ರಾಜಶೇಖರ ಅಷ್ಟುರೆ, ಮಕ್ಕಳ ತಜ್ಞ ಡಾ. ನಂದರಾಜ್ ಪಾಟೀಲ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಶಂಭುಲಿಂಗ ಕಾಮಣ್ಣ, ಪತ್ರಕರ್ತ ಜಯರಾಜ್ ಧಾಬಶೆಟ್ಟಿ ಸೇರಿದಂತೆ ಹಲವರು ಅಭಿನಂದಿಸಿ ಹರ್ಷ ವ್ಯಕ್ತ ಪಡಿಸಿದ್ದಾರೆ.

# ಶಿಕ್ಷಕ ವೃತ್ತಿಯೊಂದಿಗೆ ಸಮಾಜ ಸೇವೆಗೆ ನಿರತರಾದ ನಿವೃತ್ತ ಶಿಕ್ಷಕ ಶರಣಪ್ಪ ಕೊಪ್ಪದ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲೆಯ ತಾಲೂಕಿನ ಬಿನ್ನಾಳ ಗ್ರಾಮದ ಶರಣಪ್ಪ ಕೊಪ್ಪದ ಅವರು ತಮ್ಮ ತಂದೆ ಶಿವಬಸಪ್ಪ ಹಾಗೂ ತಾಯಿ ನಿಂಗಮ್ಮ ಅವರಿಗೆ ಪ್ರೀತಿಯ ಮಗನಾಗಿ ಅವರ ಮಾತಿಗೆ ಗೌರವ ಕೊಡುತ್ತಾ,ಉತ್ತಮ ಸಂಸ್ಕಾರ ಸಂಸ್ಕೃತಿ ಉಳ್ಳವರಾಗಿದ್ದರು . ಬಿನ್ನಾಳದಲ್ಲಿ ಪ್ರಾಥಮಿಕ ಶಿಕ್ಷಣ ,ತಿಮ್ಮಪುರದಲ್ಲಿ ಪ್ರೌಢ ಶಿಕ್ಷಣ, ಗದಗ ಕೆ ವಿ ಎಸ್ ಆರ್ ಕಾಲೇಜಿನಲ್ಲಿ ಪಿಯುಸಿ ಐಟಿಸಿ, ಧಾರವಾಡದಲ್ಲಿ ಬಿಎ ,ಮಾನಸ ಗಂಗೋತ್ರಿ ಮೈಸೂರಿನಲ್ಲಿ ಬಿಎಡ್ ಶಿಕ್ಷಣವನ್ನು ಮುಗಿಸಿದ್ದಾರೆ ನಂತರ ಶಿಕ್ಷಕರಾಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬೆಣಕಲ್ಲ್ ಗ್ರಾಮದಲ್ಲಿ 1985 ರ ಜೂನ್ 1 ರಿಂದ 1995 ರ ಜೂನ್ 21ರವರೆಗೆ, ಚಿಕೇನಕೊಪ್ಪದಲ್ಲಿ1995 ರ ಜೂನ್ 21 ರಿಂದ 2003 ರ ಅಕ್ಟೋಬರ್20 ರ ವರೆಗೆ , ಸಿ.ಆರ್.ಸಿ ಕುಕನೂರಿನಲ್ಲಿ 2023 ರ ಅಕ್ಟೋಬರ್ 21 ರಿಂದ 2006 ರ ನವಂಬರ್ 4 ರ ವರೆಗೆ, ಮಸಬಹಂಚಿನಾಳದ ಶ್ರೀಮತಿ ಗೌರಮ್ಮ ಬಸಪ್ಪ ಆಚಾರ ಸ.ಪ್ರೌಢ ಶಾಲೆಯಲ್ಲಿ 2006 ರ ನವಂಬರ್ 4 ರಿಂದ 2016 ರ ಮೇ 16 ರ ವರೆಗೆ, ಬಿ.ಆರ್.ಸಿ ಯಲಬುರ್ಗಾದಲ್ಲಿ 2016 ರ ಮೇ 16 ರಿಂದ2022 ರ ಮಾರ್ಚ 31 ರ ವರೆಗೆ ಹೀಗೆ ಇದರ ಜೋತೆಗೆ 40 ವರ್ಷಗಳವರೆಗೆ ಧಾರ್ಮಿಕ ರಂಗ, ಸಾಹಿತ್ಯ ,ಸಹಕಾರ ,ಕಲಾ ,ಶಿಕ್ಷಣ ರಂಗದಲ್ಲಿ ನಿರೂಪಕರಾಗಿ ಉಪನ್ಯಾಸಕರಾಗಿ ಸಾಹಿತ್ಯ ಹಾಗು ಮಠ ಮಂದಿರಗಳಲ್ಲಿ, ಶಿವಾನುಭವ ಚಿಂತನ ಗೋಷ್ಠಿಯಲ್ಲಿ ಭಾಗವಹಿಸಿ ತಮ್ಮ ಅನುಪಮಾ ಸೇವೆ ಸಲ್ಲಿಸುತ್ತಾ ಬಂದಿರುತ್ತಾರೆ ಅವರ ಶಿಕ್ಷಣ ರಂಗ ಧಾರ್ಮಿಕ ರಂಗ ಸಮಾಜ ಸೇವೆ ಇವುಗಳನ್ನು ಗುರುತಿಸಿ ಪ್ರಶಸ್ತಿಗಳನ್ನು ಬಾಚಿಕೊಂಡಿದ್ದಾರೆ ಇವರು ಹಿರಿಯರಲ್ಲಿ ಹಿರಿಯರಾಗಿ ಕಿರಿಯದಲ್ಲಿ ಕಿರಿಯರಾಗಿ ಸರ್ವ ಜನಾಂಗದವರೊಂದಿಗೆ ಪ್ರೀತಿಯ ಒಡನಾಟವನ್ನು ಇಟ್ಟುಕೊಂಡು ಉತ್ತಮ ಸ್ನೇಹ ಜೀವಿಗಳಾಗಿದ್ದಾರೆ ಇವರಿಗೆ ಬಂದ ಪ್ರಶಸ್ತಿಗಳು ಲೆಕ್ಕವಿಲ್ಲದಷ್ಟು ಇವೆ ಅದರಲ್ಲಿ ತಾಲೂಕ ಉತ್ತಮ ಶಿಕ್ಷಕ, ಜನ ಮೆಚ್ಚಿದ ಶಿಕ್ಷಕ ,ಜಿಲ್ಲಾ ಉತ್ತಮ್ಮ ಸಂಪನ್ಮೂಲ ವ್ಯಕ್ತಿ ಪ್ರಶಸ್ತಿಗಳನ್ನು ಸರ್ಕಾರದಿಂದ ಪಡೆದುಕೊಂಡಿದ್ದಾರೆ , ಶಿಕ್ಷಣ ಮಾಸಪತ್ರಿಯ 22 ವಾರ್ಷಿಕೋತ್ಸವ ಮತ್ತು ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ರಾಜ್ಯ ಮಟ್ಟದ ಶೈಕ್ಷಣಿಕ ಸಮಾವೇಶದಲ್ಲಿ ರಾಜ್ಯ ಪ್ರಶಸ್ತಿ , ಕರ್ನಾಟಕ ಭೂಷಣ ಕರ್ನಾಟಕ ರತ್ನ,ಕರ್ನಾಟಕ ಚೇತನ ರಾಜ್ಯ ಪ್ರಶಸ್ತಿ ಹಾಗೂ ಶ್ರೀ ಮಹದೇವ ಸ್ವಾಮೀಜಿ ಕುಕನೂರ ಅವರು ನೀಡಿದ ಶ್ರೀ ಗುದ್ನೇಶ್ವರ ಪ್ರಶಸ್ತಿ ಪಡೆದುಕೊಂಡಿದ್ದಾರೆ ,

ಇವರು ನಂದಿ ಬಸವೇಶ್ವರ ಸೇವಾ ಸಮಿತಿ ಕಾರ್ಯದರ್ಶಿಯಾಗಿ ,ಶ್ರೀ ಭೀಮಾಂಬಿಕ ಶಿವಾನುಭವ ಸೇವಾ ಸಮಿತಿ ಕಾರ್ಯದರ್ಶಿಯಾಗಿ ,ಹಾಗು ಪ್ರಭಾರಿ ಬಿ ಆರ್ ಸಿ ಅಧಿಕಾರಿಯಾಗಿ ,ಪ್ರಾಥಮಿಕ ಶಾಲಾ ಸಹಕಾರ ಸಂಘದ ನಿರ್ದೇಶಕರಾಗಿ ,ಪ್ರೌಢಶಾಲಾ ಶಿಕ್ಷಕ ಸರ್ಕಾರ ಸಂಘದ ನಿರ್ದೇಶಕ ಮತ್ತು ಖಜಾಂಚಿ ,ಗೌರವ ಅಧ್ಯಕ್ಷ ಹಾಗೂ ಮಾಧ್ಯಮಿಕ ಶಾಲೆಗಳ ಜಿಲ್ಲಾ ಉಪಾಧ್ಯಕ್ಷ ಹಾಗೂ ಅನೇಕ ಸಂಘ ಸಂಸ್ಥೆಗಳ ಗೆಳೆಯರ ಬಳಗದಿಂದ ಹಾಲುಮತ ಸಮಾಜ ಇತರ ಸಮಾಜ ಸರ್ವ ಸಮಾಜದ ಶಿಷ್ಯ ಬಳಗದೊಂದಿಗೆ ಸನ್ಮಾನ ಪ್ರೀತಿಯ ಗೌರವ ಅರ್ಪಣೆಗಳನ್ನು ಪಡೆದಿದ್ದಾರೆ ಬರಹ :

ಶರಣಬಸಪ್ಪ ದಾನಕ್ಕೈ ಯಲಬುರ್ಗಾ

# 79 ಗ್ರಾಮ ಪಂಚಾಯತ್‌ಗಳು ಕ್ಷಯ ಮುಕ್ತ: ಫೌಜೀಯಾ ತರನ್ನುಮ್

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಜಿಲ್ಲೆಯಲ್ಲಿ ಕ್ಷಯರೋಗ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳು ಯಶಸ್ವಿಯಾಗುತ್ತಿದ್ದು, ಸಾರ್ವಜನಿಕರಲ್ಲಿ ಈ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವುದು ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ಬಿ. ಫೌಜೀಯಾ ತರನ್ನುಮ್ ಅವರು ತಿಳಿಸಿದರು.

ಮಂಗಳವಾರ ನಗರದ ಹಳೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಲಬುರಗಿ, ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕಛೇರಿ ಕಲಬುರಗಿ ಇವರುಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ವಿಶ್ವ ಕ್ಷಯರೋಗ ದಿನಾಚರಣೆ, ಕ್ಷಯ ಮುಕ್ತ ಗ್ರಾಮ ಪಂಚಾಯತಗಳಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಟಿಬಿ ಮುಕ್ತ ಭಾರತ ಅಭಿಯಾನ 100 ದಿನಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಕ್ಷಯರೋಗವು ಸ್ಪರ್ಶದಿಂದ ಹರಡುವುದಿಲ್ಲ. ಆದರೆ, ಸಮಾಜದಲ್ಲಿ ರೋಗಿಗಳ ಬಗ್ಗೆ ಇರುವ ತಾರತಮ್ಯ ಮತ್ತು ಭಯವನ್ನು ಹೋಗಲಾಡಿಸಬೇಕಿದೆ. ರೋಗಿಗಳಿಗೆ ಕುಟುಂಬದ ಬೆಂಬಲ ಅತ್ಯಗತ್ಯ ಎಂದರು.

ಈಗಾಗಲೇ ಜಿಲ್ಲೆಯಲ್ಲಿ 79 ಗ್ರಾಮ ಪಂಚಾಯತಿಗಳು ಕ್ಷಯಮುಕ್ತ ಎಂದು ಘೋಷಣೆಯಾಗಿವೆ. ಇದರಲ್ಲಿ 2023 ರಲ್ಲಿ 15, 2024 ರಲ್ಲಿ 21 ಮತ್ತು 2025–2026 ವರ್ಷದಲ್ಲಿ 43 ಪಂಚಾಯತಿಗಳು ಸೇರಿವೆ ಎಂದು ಹೇಳಿದರು. ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕ್ಷಯರೋಗಕ್ಕೆ ಸಂಪೂರ್ಣ ಉಚಿತ ಚಿಕಿತ್ಸೆ ಮತ್ತು ಪರೀಕ್ಷೆ ಲಭ್ಯವಿದೆ. ಸತತ ಎರಡು ವಾರ ಕೆಮ್ಮು ಇದ್ದಲ್ಲಿ ತಕ್ಷಣ ಕಫ ಪರೀಕ್ಷೆ ಮಾಡಿಸಿಕೊಳ್ಳಬೇಕು. ಜಿಲ್ಲೆಯಲ್ಲಿ ಕ್ಷಯ–ರೋಗ ಚಿಕಿತ್ಸೆಯ ಯಶಸ್ಸಿನ ಪ್ರಮಾಣ ಶೇ. 90ಕ್ಕೂ ಹೆಚ್ಚಿದೆ. ಪ್ರತಿ ವರ್ಷ ಸುಮಾರು 80 ರಿಂದ 90 ಸಾವಿರ ಪರೀಕ್ಷೆಗಳನ್ನು ನಡೆಸಲಾಗುತ್ತಿದ್ದು, ಹೆಚ್ಚಿನ ಜನರನ್ನು ಗುರುತಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಹೇಳಿದರು.



**ಕ್ಷಯಮುಕ್ತ ಜಿಲ್ಲೆಯತ್ತ ದಿಟ್ಟ ಹೆಜ್ಜೆ**

ನಿಕ್ಷಯ್ ಮಿತ್ರ’ ಯೋಜನೆಯಡಿ ರೋಗಿಗಳಿಗೆ ಪೌಷ್ಟಿಕ ಆಹಾರದ ಕಿಟ್ ಮತ್ತು ಪ್ರೋಟೀನ್ ಪೌಡರ್ ನೀಡುತ್ತಿರುವ ಖಾಸಗಿ ವೈದ್ಯರು, ಆಸ್ಪತ್ರೆಗಳು ಮತ್ತು ಸಂಘ–ಸಂಸ್ಥೆಗಳ ಕಾರ್ಯವನ್ನು ಜಿಲ್ಲಾಧಿಕಾರಿಗಳು ಶ್ಲಾಘಿಸಿದರು. ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭಂವರ್ ಸಿಂಗ್ ಮೀನಾ ಅವರು ಮಾತನಾಡಿ ಜಿಲ್ಲೆಯಲ್ಲಿ ಕ್ಷಯರೋಗ ನಿರ್ಮೂಲನೆಗಾಗಿ ಹಮ್ಮಿಕೊಳ್ಳಲಾದ ’ಟಿಬಿ ಮುಕ್ತ ಪಂಚಾಯಿತಿ’ ಅಭಿಯಾನವು ಉತ್ತಮ ಫಲಿತಾಂಶ ನೀಡುತ್ತಿದ್ದು, ಈ ವರ್ಷ ಜಿಲ್ಲೆಯ ಒಟ್ಟು 43 ಗ್ರಾಮ ಪಂಚಾಯಿತಿಗಳನ್ನು ‘ಕ್ಷಯ ಮುಕ್ತ’ ಎಂದು ಘೋಷಿಸಲಾಗಿದೆ ಎಂದು ಹೇಳಿದರು.

ಕಳೆದ ವರ್ಷ 36 ಗ್ರಾಮ ಪಂಚಾಯಿತಿಗಳು ಕ್ಷಯ ಮುಕ್ತವಾಗಿದ್ದವು, ಈ ಬಾರಿ ಆ ಸಂಖ್ಯೆ 43ಕ್ಕೆ ಏರಿರುವುದು ಜಿಲ್ಲೆಯ ಆರೋಗ್ಯ ಕ್ಷೇತ್ರದಲ್ಲಿನ ಪ್ರಗತಿಯನ್ನು ತೋರಿಸುತ್ತದೆ. ಜಿಲ್ಲೆಯಲ್ಲಿ ಈವರೆಗೆ ಅಂದಾಜು 87,000 ಕ್ಕೂ ಹೆಚ್ಚು ಶಂಕಿತ ವ್ಯಕ್ತಿಗಳನ್ನು ತಪಾಸಣೆಗೆ ಒಳಪಡಿಸಲಾಗಿದೆ. ಇದು ನಿಗದಿಪಡಿಸಿದ ಗುರಿಗಿಂತಲೂ ಹೆಚ್ಚಿನ ಸಾಧನೆಯಾಗಿದೆ. ಕ್ಷಯರೋಗವು ಕೇವಲ ಆರೋಗ್ಯ ಇಲಾಖೆಯ ಜವಾಬ್ದಾರಿಯಲ್ಲ, ಇದು ಸಾಮಾಜಿಕ ಹೊಣೆಗಾರಿಕೆಯಾಗಿದೆ. ರೋಗ ಲಕ್ಷಣವಿರುವವರನ್ನು ಆರಂಭಿಕ ಹಂತದಲ್ಲೇ ಗುರುತಿಸಿ ಚಿಕಿತ್ಸೆ ಕೊಡಿಸುವುದು ಮುಖ್ಯ ಎಂದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ ಡಾ. ಚಂದ್ರಕಾಂತ ನರಬೋಳಿ ಅವರು ಪ್ರಾಸ್ತಾವಿಕ ಮಾತನಾಡಿ, ಜಿಲ್ಲೆಯಲ್ಲಿ ಕ್ಷಯರೋಗ (ಟಿಬಿ) ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯು ಕ್ಷಯರೋಗ ಪತ್ತೆ ಮತ್ತು ಚಿಕಿತ್ಸೆಯಲ್ಲಿ ರಾಜ್ಯದ ಸರಾಸರಿ ಮಟ್ಟವನ್ನು ತಲುಪುವಲ್ಲಿ ಯಶಸ್ವಿಯಾಗಿದೆ. 2022ರಲ್ಲಿ ರಾಜ್ಯ ಮಟ್ಟದಲ್ಲಿ 31ನೇ ಸ್ಥಾನದಲ್ಲಿದ್ದ ಕಲಬುರಗಿ ಜಿಲ್ಲೆ, ನಿರಂತರ ಪ್ರಯತ್ನದ ಫಲವಾಗಿ ಇಂದು 14–15ನೇ ಸ್ಥಾನಕ್ಕೆ ಏರಿದೆ. ಪ್ರಸ್ತುತ ಜಿಲ್ಲೆಯಲ್ಲಿ ಶೇ. 90ಕ್ಕಿಂತ ಹೆಚ್ಚು ಪ್ರಕರಣಗಳನ್ನು ಗುರುತಿಸಲಾಗುತ್ತಿದೆ ಎಂದು ಅವರು ಹೇಳಿದರುಲ. ಇ.ಎಸ್.ಐ.ಸಿ ಆಸ್ಪತ್ರೆ ಕ್ಷಯ–ರೋಗ ನೋಡಲ್ ಅಧಿಕಾರಿ ಡಾ. ಲಾವಣ್ಯ ಪಿಟರ ಅವರು ಕ್ಷಯ ರೋಗದ ಬಗ್ಗೆ ಉಪನ್ಯಾಸ ನೀಡಿ ಮಾತನಾಡಿ, ಕ್ಷಯರೋಗವು ಕೇವಲ ಶ್ವಾಸಕೋಶಕ್ಕೆ ಸೀಮಿತವಾಗಿರದೆ, ದೇಹದ ಕೂದಲು ಮತ್ತು ಉಗುರನ್ನು ಹೊರತುಪಡಿಸಿ ಉಳಿದೆಲ್ಲಾ ಭಾಗಗಳಿಗೂ ಹರಡಬಲ್ಲ ಮಾರಕ ಕಾಯಿಲೆಯಾಗಿದೆ ಎಂದು ಎಚ್ಚರಿಸಿದರು. ಜಿಲ್ಲೆಯ ಕ್ಷಯರೋಗದ ಗಂಭೀರತೆ ಮತ್ತು ಅದನ್ನು ತಡೆಗಟ್ಟುವ ಕ್ರಮಗಳ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು.ಟಿಬಿ ಕಾಯಿಲೆಯು ಇಂದು ನಿನ್ನೆಯದಲ್ಲ, ಇದು ಸುಮಾರು ಐದು ಸಾವಿರ ವರ್ಷಗಳಿಗೂ ಹಳೆಯದಾದ ಇತಿಹಾಸ ಹೊಂದಿದೆ. ವಿಜ್ಞಾನಿಗಳು ಪ್ರಾಚೀನ ಈಜಿಪ್ಟ್‌ನ ’ಮಮ್ಮಿ’ಗಳಲ್ಲಿಯೂ ಈ ರೋಗದ ಲಕ್ಷಣಗಳನ್ನು ಪತ್ತೆಹಚ್ಚಿದ್ದಾರೆ.

ಈ ಕಾಯಿಲೆಯು ಮನುಕುಲವನ್ನು ಅತೀ ದೀರ್ಘಕಾಲದಿಂದ ಕಾಡುತ್ತಿರುವ ’ಬ್ರಹ್ಮರಾಕ್ಷಸ ಇದ್ದಂತೆ ಎಂದು ಹೇಳಿದರು.

ಕ್ಷಯರೋಗದ ಚಿಕಿತ್ಸೆಯು ಕನಿಷ್ಠ ಆರು ತಿಂಗಳುಗಳ ಕಾಲ ಸತತವಾಗಿ ನಡೆಯಬೇಕು. ಆದರೆ ಅನೇಕ ರೋಗಿಗಳು ಮಾತ್ರೆಗಳನ್ನು ಆರಂಭಿಸಿದ ಮೂರ್ನಾಲ್ಕು ದಿನಗಳಲ್ಲಿ ಗುಣಮುಖರಾದಂತೆ ಭಾಸವಾಗಿ ಚಿಕಿತ್ಸೆಯನ್ನು ಅರ್ಧಕ್ಕೆ ನಿಲ್ಲಿಸುತ್ತಾರೆ. ಇದು ರೋಗವು ಮತ್ತೆ ಉಲ್ಬಣಗೊಳ್ಳಲು ಮತ್ತು ಇತರರಿಗೆ ಹರಡಲು ಪ್ರಮುಖ ಕಾರಣವಾಗಿದೆ. ಸಂಕ್ಷಿಪ್ತ ಮಾಹಿತಿ ನೀಡಿದರು.

# ಅಂಬೇಡ್ಕರ್ ಪುತ್ಥಳಿ ಸ್ಥಾಪನೆಗೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ,ಬಳ್ಳಾರಿ, :



ನಗರದ ಪ್ರಮುಖ ಸರ್ಕಲ್ ಒಂದರಲ್ಲಿ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪುತ್ಥಳಿಯನ್ನು ಸ್ಥಾಪಿಸಬೇಕೆಂದು ನಗರದ ದಲಿತ ಸಮುದಾಯ ಮುಖಂಡರು ಜಿಲ್ಲಾಡಳಿತಕ್ಕೆ ಆಗ್ರಹಿಸಿದ್ದಾರೆ.

ನಗರದ ಹೊಸ ಜಿಲ್ಲಾಡಳಿತ ಭವನದಲ್ಲಿ ಬಾಬು ಜಗಜೀವನ್ ರಾಂ ಮತ್ತು ಅಂಬೇಡ್ಕರ್ ಜಯಂತಿಯ ಪೂರ್ವ ಸಿದ್ಧತಾ ಸಭೆಯಲ್ಲಿ ಈ ಕುರಿತು ಚರ್ಚೆ ಮಾಡಿದ ಮುಖಂಡರು. ವಾಲ್ಮೀಕಿ ಸರ್ಕಲ್ ನಲ್ಲಿ ವಾಲ್ಮೀಕಿ ಪುತ್ಥಳಿ ಸ್ಥಾಪಿಸಿದಂತೆ ಸರ್ವ ಜನರ ಆಕರ್ಷಣೆಯ ಕೇಂದ್ರವಾಗಿ ಅಂಬೇಡ್ಕರ್ ಅವರ ಪುತ್ಥಳಿಯನ್ನು ಪ್ರಮುಖ ಸರ್ಕಲ್ ನಲ್ಲಿ ಸ್ಥಾಪಿಸಬೇಕೆಂದು ಆಗ್ರಹಿಸಿಲಾಯ್ತು.

ಈ ವೇಳೆ ಕೆಲವರು ಮೋತಿ ಸರ್ಕಲ್ ಮಧ್ಯಭಾಗದಲ್ಲಿಡಲು ಕೋರಿದರು. ಇನ್ನು ಕೆಲವರು ತಾಳೂರು ರೋಡ್ ಗೆ ಅಂಬೇಡ್ಕರ್ ಹೆಸರು ಇಟ್ಟು ಸರ್ಕಲ್ ನಲ್ಲಿ ಪುತ್ಥಳಿ ಸ್ಥಾಪಿಸಬೇಕೆಂದರು. ಈ ಬಗ್ಗೆ ಪ್ರಸ್ತಾವನೆ ಕೊಡಿ ಸರ್ಕಾರಕ್ಕೆ ಸಲ್ಲಿಸಲಿದೆಂದು ಡಿಸಿ.ನಾಗೇಂದ್ರಪ್ರಸಾದ್ ಅವರು ಹೇಳಿದ್ದಾರೆ.

ಏ.5 ರಂದು ಹಸಿರು ಕ್ರಾಂತಿಯ ಹರಿಕಾರ ಬಾಬು ಜಗಜೀವನ ರಾಂ ಅವರ ಜಯಂತಿಯನ್ನು ಡಾ.ಜೋಳದರಾಶಿ ದೊಡ್ಡನಗೌಡ ರಂಗ ಮಂದಿರದಲ್ಲಿ ಆಚರಿಸಲು ನಿರ್ಧರಿಸಿತು.

ಅಂಬೇಡ್ಕರ್ ಜಯಂತಿ:

ಕಳೆದ ವರ್ಷ ಜಯಂತಿ ಆಚರಣೆ ಸಂದರ್ಭದಲ್ಲಿ ಬಿಸಿಲು ಇದ್ದ ಕಾರಣ ಸಮಾರಂಭದಲ್ಲಿ ಜನರ ಕೊರತೆ ಎದ್ದು ಕಾಣುತ್ತಿತ್ತು. ಅದಕ್ಕಾಗಿ ಈ ಬಾರಿ ರಂಗಮಂಮದಿರದಲ್ಲಿ ಆಚರಿಸವ ಪ್ರಸ್ತಾವನೆಯನ್ನು ಜಿಲ್ಲಾಡಳಿತ ಮುಂದಿಟ್ಟಾಗ ದಲಿತ ಮುಖಂಡರು ಒಪ್ಪಲಿಲ್ಲ. ಪ್ರತಿ ವರ್ಷದಂತೆ ಬೆಳಿಗ್ಗೆ 9 ಕ್ಕೆ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ, ನಂತರ ಮೆರವಣಿಗೆ ಬೆಳಿಗ್ಗೆ 11 ರಿಂದ ಮುನಿಷಿಪಲ್ ಹೈಸ್ಕೂಲ್ ಮೈದಾನದಲ್ಲಿ ವೇದಿಕೆ ಕಾರ್ಯಕ್ರಮ ಮಾಡಲು ನಿರ್ಧರಿಸಿತು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ, ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ, ಜಿಲ್ಲಾ ಅಂಬೇಡ್ಕರ್ ಸಂಘ ಸೇರಿದಂತೆ ದಲಿತ ಸಮುದಾಯದ ಮುಖಂಡರು ಪಾಲ್ಗೊಂಡಿದ್ದರು.

# ಸ್ತ್ರೀ ಪುರುಷ ಸಮಾನರೆಂದ ದಾಸಿಮಯ್ಯ: ಗಾದೆಪ್ಪ




• ಮಲ್ಲಮ್ಮ ನುಡಿ ವಾರ್ತೆ,ಬಳ್ಳಾರಿ, :

ನಗರದ ಸಾಂಸ್ಕೃತಿಕ ಸಮುಚ್ಚಯದಲ್ಲಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೊಂಗಿರಣ ಸಭಾಂಗಣದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಿದ್ದ ಆದ್ಯ ವಚನಕಾರ ದೇವರ ದಾಸಿಮಯ್ಯ ಜಯಂತಿ ನಡೆಯಿತು.

ಕಾರ್ಯಕ್ರಮ ಉದ್ಘಾಟನೆಯನ್ನು ಮೇಯರ್ ಗಾದೆಪ್ಪ ಉದ್ಘಾಟನೆ ಮಾಡಿ, ದೇವರು ದಾಸಿಮಯ್ಯ ನೇಕಾರ ಸಮಾಜದ ವಚನಕಾರರಾಗಿದ್ದಾರೆ ಇವರು ವಿಶ್ವ ಗುರು ಬಸವಣ್ಣನವರ ಅನುಭವ ಮಂಟಪದಲ್ಲಿದ್ದರು,

ಸ್ತ್ರೀ – ಪುರುಷ ಭೇದ ಭಾವ ಇಲ್ಲದೆ ಎಲ್ಲರೂ ಸಮಾನ ಎಂದು ಸಾರಿದವರೆಂದರು.

ಶಿಕ್ಷಕ ಅಮಾತಿ ಬಸವರಾಜ್ ದೇವರ ದಾಸಿಮಯ್ಯ ಅವರ ಕುರಿತು ಉಪನ್ಯಾಸ ನೀಡಿದರು.

ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ್, ಚೇಂಬರ್ ಆಪ್ ಕಾಮರ್ಸ್ ಅಧ್ಯಕ್ಷ ಅವ್ವಾರು ಮಂಜುನಾಥ್, ಹೋರಾಟಗಾರರಾದ ಸಿರಿಗೇರಿ ಪನ್ನರಾಜ್ ಮೊದಲಾದವರು ಇದ್ದರು.

# ಅನುಭವ ಮಂಟಪಕ್ಕೆ ಹೆಚ್ಚುವರಿ 50 ಕೋಟಿ ರೂ. ಬಿಡುಗಡೆ: ಖಂಡ್ರೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಆಧುನಿಕ ಅನುಭವ ಮಂಟಪ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ತಮ್ಮ ಕೋರಿಕೆಯ ಮೇರೆಗೆ ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೆಚ್ಚುವರಿಯಾಗಿ 50 ಕೋಟಿ ರೂ.ಗಳನ್ನು ಪೂರಕ ಬಜೆಟ್ ನಲ್ಲಿ ನೀಡಿ, ಬಿಡುಗಡೆ ಮಾಡಿರುವುದಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ಈಶ್ವರ ಬಿ ಖಂಡ್ರೆ ಧನ್ಯವಾದ ಅರ್ಪಿಸಿದ್ದಾರೆ.

ಮುಂದಿನ ವರ್ಷ ಅಂದರೆ 2027ರ ಮಾರ್ಚ್ ತಿಂಗಳೊಳಗೆ ಆಧುನಿಕ ಅನುಭವ ಮಂಟಪ ಕಾಮಗಾರಿ ಪೂರ್ಣಗೊಳಿಸಲು ಸಂಕಲ್ಪ ಮಾಡಿದ್ದು, ಈ ನಿಟ್ಟಿನಲ್ಲಿ ಕಾಮಗಾರಿಯ ವೇಗ ಹೆಚ್ಚಿಸಲು ಹೆಚ್ಚುವರಿಯಾಗಿ 50 ಕೋಟಿ ಬಿಡುಗಡೆ ಮಾಡುವಂತೆ ತಾವು ಕೋರಿದ್ದು, ಮುಖ್ಯಮಂತ್ರಿಗಳು ಪೂರಕ ಬಜೆಟ್ ನಲ್ಲಿ ಅದಕ್ಕೆ ಅವಕಾಶ ಮಾಡಿ, ಹಣ ಬಿಡುಗಡೆ ಮಾಡಿದ್ದಾರೆ. ನಾವು ನುಡಿದಂತೆ ನಡೆದಿದ್ದೇವೆ ಎಂದು ಈಶ್ವರ ಖಂಡ್ರೆ ತಿಳಿಸಿದ್ದಾರೆ.

770 ಅಮರ ಗಣಂಗಳ ಹೆಸರಲ್ಲಿ ಅವರ ಚಿತ್ರವಿರುವ ಕಂಬಗಳಲ್ಲಿ 770 ವಚನಗಳನ್ನು ಕೆತ್ತಿಸಲಾಗಿದೆ. ವೈಜ್ಞಾನಿಕವಾಗಿ ಇಷ್ಟಲಿಂಗ ಪೂಜೆ–ಯ ಪರಿಕಲ್ಪನೆಯನ್ನು ಈ ಆಧುನಿಕ ಅನುಭವ ಮಂಪಟದಲ್ಲಿ ಅಳವಡಿಸಲಾಗಿದೆ. ಕಾಮಗಾರಿ ಅತ್ಯಂತ ವೇಗವಾಗಿ ನಡೆಯುತ್ತಿದ್ದು, ಮುಂದಿನ ವರ್ಷ ಬಸವಜಯಂತಿಯೊಳಗೆ ಈ ಕಾಮಗಾರಿ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡುವುದು ಸರ್ಕಾರದ ಸಂಕಲ್ಪವಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ತಿಳಿಸಿದ್ದಾರೆ.

# ದೇಶಭಕ್ತಿಯನ್ನು ಪ್ರತಿಯೊಬ್ಬರು ಮೈಗೂಡಿಸಿ ಕೊಳ್ಳಬೇಕು




• ಮಲ್ಲಮ್ಮ ನುಡಿ ವಾರ್ತೆ, ವಿಜಯನಗರ

ಪತಂಜಲಿ ಯೋಗ ಸಮಿತಿ ವಿಜಯನಗರ ಜಿಲ್ಲಾ ಘಟಕ ನಗರದ ವಡಕರಾಯ ದೇವಸ್ಥಾನ ದಲ್ಲಿ ತನ್ನ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ ರಾಜಗುರು, ಭಗತ್ ಸಿಂಗ್ ಹಾಗೂ ಸುಖದೇವ್ ಹುತಾತ್ಮರಾದ ಸವಿ ನೆನಪಿಗಾಗಿ ನಡೆಸುವ ಬಲಿದಾನ ದಿನದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು .

ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ ಸಮಾಜಿಕ ಕಾರ್ಯಕರ್ತ ಪಾಂಡುರಂಗ ರಂಪೂರೆ ಮಾತನಾಡಿ ,ತಮ್ಮ ವಯಸ್ಸಿಗೆ ಮೀರಿದ ಯೋಚನೆಯ ಮೂಲಕ ಪ್ರಾಣ ತ್ಯಾಗ ಮಾಡಿದ ಈ ಮೂವರು ದೇಶಭಕ್ತರಿಗೆ ನಾವು ಗೌರವ ಸಲ್ಲಿಸಬೇಕಾದರೆ ದೇಶಭಕ್ತಿಯನ್ನು ಮೈಗೂಡಿಸಿ ಕೊಳ್ಳಬೇಕು ಎಂದರು. ಯೌವನ ಅನ್ನೋದು ಕೇವಲ ದೇಹ ಪ್ರೇಮಕ್ಕಲ್ಲ , ದೇಶ ಪ್ರೇಮಕ್ಕೆ ಇರಬೇಕೆಂದು ವ್ಯಕ್ತ ಪಡಿಸಿದರು.. ಸ್ವಾತಂತ್ರ್ಯದ ಹೋರಾಟದಲ್ಲಿ ಕ್ರಾಂತಿಕಾರಿಗಳ ಹೋರಾಟ ಬ್ರಿಟಿಷರ ನಿದ್ದೆಗೆಡಿಸಿತ್ತು.

ಈ ಮೂರು ಜನರ ಕ್ರಾಂತಿಕಾರಿಗಳಿಂದ ದೇಶದ ಜನರಲ್ಲಿ ಸ್ವಾತಂತ್ರ್ಯಕ್ಕಾಗಿ ಇನ್ನಷ್ಟು ಕಿಚ್ಚನ್ನು ಹೆಚ್ಚಾಗಿಸಿದರು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪತಂಜಲಿ ರಾಜ್ಯ ಯುವ ಪ್ರಭಾರಿ ಕಿರಣ್ ಕುಮಾರ್, ಜಿಲ್ಲಾ ಯುವ ಪ್ರಭಾರಿ ವಿರೇಶ್ ಕನಕೇರಿಮಠ, ರಾಜ್ಯ ಸಮಿತಿ ಸದಸ್ಯರಾದ ಬಾಲಚಂದ್ರ ಶರ್ಮ, ರಾಜೇಶ್ ಕರ್ವಾ, ಕೇಂದ್ರ ಸಂಚಾಲಕ ಸತ್ಯಪ್ಪ, ಲಲಿತಾ ಪಾಟೀಲ್, ಪ್ರಕಾಶ ಕುಲಕರ್ಣಿ,

ನಗರದ ವಿವಿಧ ಕೇಂದ್ರಗಳ

ಸಂಚಾಲಕರಾದ ಶ್ರೀರಾಮ, ಆನಂತ ಜೋಶಿ, ಶಿವಮೂರ್ತಿ, ಕವಿತಾ ಆನಂದ್, ಡಾ.ಸಮಂಗಲಾದೇವಿ, ರೇಣುಕಾ ಪಾಟೀಲ್, ಅಶೋಕ ಚಿತ್ರಗಾರ, ವಿಠೋಬ ಬಲ್ಲಾಳ್, ರಾಜಾಭಕ್ತಿ, ಅಕ್ಷಯ ಆಚಾರಿ ಇತರರಿದ್ದರು.

# ಮಕ್ಕಳಿಗೆ ಗುಣಮಟ್ಟದ ಸಂಸ್ಕಾರಯುತ ಶಿಕ್ಷಣ ಕೊಡಿಸಿ: ಡಿವೈಎಸ್‌ಪಿ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಮಕ್ಕಳಿಗೆ ಗುಣಮಟ್ಟದ ಸಂಸ್ಕಾರಯುತ ಶಿಕ್ಷಣ ಕೊಡಿಸಿ ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ಸರ್ಕಾರ ಸಾಕಷ್ಟು ವೆಚ್ಚ ಮಾಡುತ್ತಿದೆ. ಶಿಕ್ಷಕರು ಬಡವರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಡಾ. ಚನ್ನಬಸವ ಪಟ್ಟದ್ದೇವರು ಸತ್ಯ ಸಂಕಲ್ಪದಂತೆ ಶ್ರಮಿಸಿ ಗುಣಮಟ್ಟದ ಶಿಕ್ಷಣದ ಜೊತೆಗೆ ಸಂಸ್ಕಾರ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಎಂದು ಭಾಲ್ಕಿ ಡಿವೈಎಸ್‌ಪಿ ಶಿವಾನಂದ ಪವಾಡ್ ಶೇಟ್ಟಿ ನುಡಿದರು.

ತಾಲೂಕಿನ ಖೇಡ ಸಂಗಮ ಗ್ರಾಮದ ನೀಲಾಂಬಿಕೆ ಆಶ್ರಮದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ವತಿಯಿಂದ ಅಲ್ಲಮಪ್ರಭುದೇವರ ಜಯಂತೋತ್ಸವ ಮತ್ತು ಡಾ.ಚನ್ನಬಸವಪಟ್ಟದ್ದೇವರ ಗುರುಕುಲ ಹಿರಿಯ ಪ್ರಾಥಮಿಕ ಶಾಲೆಯ 26ನೇ ವಾರ್ಷಿಕೋತ್ಸವ ಪ್ರಯುಕ್ತ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಜ್ಯೋತಿ ಬೆಳಗಿಸಿ ಉದ್ಗಾಟಿಸಿ, ಮಾತನಾಡಿ ಭಾಲ್ಕಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಅಧ್ಯಾತ್ಮದೊಂದಿಗೆ ಜ್ಞಾನ ದಾಸೋಹ ಕಲ್ಪಿಸಿ ಸಮಾಜದಲ್ಲಿ ಶೈಕ್ಷಣಿಕ ಕ್ರಾಂತಿ ತಂದಿರುವುದು ಮೆಚ್ಚುಗೆಗೆ ಪಾತ್ರವಾಗಿದೆ ಎಂದರು.

ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಡಾ.ಶಿವಲಿಂಗ ಹೇಡೆ ಮಾತನಾಡಿ ವೋಮ ಕಾಯ ಸಿದ್ಧ ಅಲ್ಲಮ್ ಪ್ರಭು ದೇವರ ಮಹಿಮೆ ಅಪಾರವಾದದ್ದು ಶರಣ ಗೊಗ್ಗಯ್ಯ , ಹಾಗೂ ಸಿದ್ದರಾಮ ಶರಣರಿಗೆ ಭೌತಿಕ ಜೀವನದಿಂದ ಆಧ್ಯಾತ್ಮದ ಕಡೆಗೆ ತೆಗೆದು ಕೊಂಡು ಬಂದ ಮಹಾ ತೇಜಪುಂಜ ಅಲ್ಲಮ್‌ರು ತನುವ ತೊಂಟವ ಮಾಡಿ ಮನವ ಗುದ್ದಲಿ ಮಾಡಿ ಕಳೆದನಯ್ಯಾ ಭ್ರಾಂತಿಯ ಬೇರು ಎಂಬ ಆಧ್ಯಾತ್ಮದ ವಿಷಯ ಅರಿತವನೆ ಯೋಗಿ ಆತನೆ ಶರಣ ಜೀವಿ ನಾವೂಗಳು ಶರಣರು ಹಾಕಿ ಕೊಟ್ಟ ದಾರಿಯಲ್ಲಿ ನಡೆದು ಜೀವನ ಹಸನಾಗಿಸಿ ಕೊಳ್ಳ ಬೇಕೆಂದರು,

ನೇತೃತ್ವವಹಿಸಿದ ಭಾಲ್ಕಿ ಹಿರೇಮಠ ಸಂಸ್ಥಾನದ ಪೀಠಾಧಿಪತಿಗಳಾದ ಗುರುಬಸವಪಟ್ಟದ್ದೇವರು ಮಾತನಾಡಿ ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ ಹೊನ್ನು ಮಾಯೆ ಎಂಬರು ಹೊನ್ನು ಮಾಯೆಯಲ್ಲ ಮನದ ಮುಂದಣಾಸೆಯ ಮಾಯೇ ಎಂಬ ಅಲ್ಲಮ್‌ರ ವಚನ ಅರ್ಥಗರ್ಭಿತವಾದದ್ದು ಮಹಾದೇವಿ ಅಕ್ಕಳಿಗೆ ಅಕ್ಕ ಎಂದು ಕರೆದವರು ಅಲ್ಲಮ್ ಪ್ರಭುಗಳೆ ಅಕ್ಕಳ ಜ್ಞಾನ ಒರೆಗೆ ಹಚ್ಚಿದ ಶೂನ್ಯ ಸಿಂಹಾಸನಾಧೀಶ ಅಲ್ಲಮ್‌ರು, ಯುಗಾದಿ ಹಬ್ಬ, ಭಾರತೀಯ ಸಂಸ್ಕೃತಿಗೆ ಹೊಸ ವರುಷ, ಗಡಿ ಭಾಗದ ಮಕ್ಕಳ ಸರ್ವಾಂಗೀನ ಪ್ರಗತಿಗಾಗಿ ಹಿರೇಮಠ ಸಂಸ್ಥಾನ ವಿದ್ಯಾಪೀಠದ ಮೂಲಕ ಶೈಕ್ಷಣೀಕ ಕ್ರಾಂತಿಗೈಯುತ್ತಲಿದೆ ಇದರ ಲಾಭ ಎಲ್ಲಾ ಮಕ್ಕಳಿಗೆ ದೊರಕಲೆಂದು ಹಾರೈಸಿದರು, ನೀಲಾಂಬಿಕೆ ಆಶ್ರಮದ ಡಾ.ಮಹಾದೇವಮ್ಮ ತಾಯಿ ಅಧ್ಯಕ್ಷತೆಯನ್ನು ವಹಿಸಿದರು.

ನಾಗಮಾರಪಳ್ಳಿ ಆಸ್ಪತ್ರೆ ಅಧ್ಯಕ್ಷ ತರುಣ ಸೂರ್ಯಕಾಂತ ನಾಗಮಾರಪಳ್ಳಿ ಮತ್ತು ತಾ.ಪಂ. ಇಒ.ಹಣಮಂತರಾಯ ಕೌಟಗೆ, .ಪಿಡಿಒ.ಸಂಧ್ಯಾರಾಣಿ ಸೋನಾಳೆ, ಡಾ.ಎಸ್ ಎಸ್ ಮೈನಾಳೆ, ವಿಶ್ವನಾಥಪ್ಪ ಜೆಇ, ದಾಸೋಹ ಸಮಿತಿ ಅಧ್ಯಕ್ಷ ಸಿದ್ದಯ್ಯ ಕಾವಡಿ ಮಠ, ರಾಷ್ಟ್ರೀಯ ಬಸವದಳ ತಾಲೂಕಾಧ್ಯಕ್ಷ ಶಿವಶರಣಪ್ಪ ವಲ್ಲೇಪೂರೆ, ಮುಖ್ಯಶಿಕ್ಷಕಿ ಅರ್ಚನಾ ವಿಶ್ವಕರ್ಮ, ಶಿವಕುಮಾರ ಸ್ವಾಮಿ, ಸುರೇಶ ನೀಲಮಠ, ರೇಷ್ಮಾ ಹೊಳಸಂಬ್ರೆ, ವೈಶಾಲಿ ಬಿರಾದಾರ, ಸುನೀತಾ ಶ್ಯಾಮವೇಲ್ ಹಾಗೂ ಸಿಬ್ಬಂದಿ ಇದ್ದರು. ಸಂಗೀತಾ ಮೇತ್ರೆ ನಿರೂಪಿಸಿದರು. ನೀಲಕಂಠ ಬಿರಾದಾರ ಸ್ವಾಗತಿಸಿದರು. ಸಂಜೀವಕುಮಾರ ಮೇಂಗಾ ವಂದಿಸಿದರು. ನಂತರ ಶಾಲಾ ಮಕ್ಕಳಿಂದ ಕಾರ್ಯಕ್ರಮಕ್ಕೆ ಮುಂಚೆ ಅಕ್ಕನ ಬಗಳದ ವತಿಯಿಂದ ಅಲ್ಲಮಪ್ರಭುದೇವರ ತೊಟ್ಟಿಲು ಕಾರ್ಯಕ್ರಮ ನಡೆಯಿತು.

ಸ್ಥಾನಿಕ ಸಮಿತಿ ಅಧ್ಯಕ್ಷ ನೀಲಕಂಠ ಬಿರಾದಾರ ಸ್ವಾಗತಿಸಿದರು. ಮುಖ್ಯಗುರು ಅರ್ಚನಾ ವಿಶ್ವಕರ್ಮವರದಿ ವಾಚಿಸಿದರು. ಸಂಗೀತಾ ಮೇತ್ರೆ ಕಾರ್ಯಕ್ರಮ ನಿರೂಪಿಸಿದರೆ, ಅನೀಲ ಹೊಳಸಮುದ್ರೆ ವಂದಿಸಿದರು. ಶಾರದಾಬಾಯಿ ಬಾಬುರಾವ ಅವರು ಭಕ್ತಿ ದಾಸೋಹ ನೆರವೇರಿಸಿದರು.

# 25ಕ್ಕೆ ಎನ್ ಜಿನ್ ಅಂಚೆ ಕಚೇರಿ ಉದ್ಘಾಟನೆ

• ಮಲ್ಲಮ್ಮ ನುಡಿ ವಾರ್ತೆ, ರಾಯಚೂರು

ಮಾರ್ಚ್ 24 (ಕರ್ನಾಟಕ ವಾರ್ತೆ): ಭಾರತ ಸರ್ಕಾರದ ಅಂಚೆ ಇಲಾಖೆಯ ರಾಯಚೂರು ವಿಭಾಗದಿಂದ ಎನ್–ಜಿನ್ ಅಂಚೆ ಕಚೇರಿ ಉದ್ಘಾಟನಾ ಕಾರ್ಯಕ್ರಮವನ್ನು ಮಾರ್ಚ್ 25ರ ಬೆಳಿಗ್ಗೆ 10 ಗಂಟೆಗೆ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.

ಮುಖ್ಯ ಅತಿಥಿಗಳಾಗಿ ಧಾರವಾಡದ ಎನ್.ಕೆ. ಪ್ರದೇಶ ಅಂಚೆ ಸೇವೆಗಳ ನಿರ್ದೇಶಕರಾದ ಶ್ರೀಹರ್ಷ ಎನ್,

ಧಾರವಾಡದ ಎನ್.ಕೆ. ಪ್ರದೇಶ ಸಹಾಯಕ ಪೋಸ್ಟ್ ಮಾಸ್ಟರ್ ಜನರಲ್ (ಬಿಡಿ) ಎಚ್.ಎಂ.ಮಂಜೇಶ್, ರಾಯಚೂರು ವಿಭಾಗದ ಅಂಚೆ ಅಧೀಕ್ಷಕರಾದ ಶಿವಾನಂದ ಆರ್.ಎಚ್., ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎಂ. ಹನುಮಂತಪ್ಪ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

# ದಾಸವಾಣಿ ಸಂಗೀತ ಕಾರ್ಯಕ್ರಮ


ಬಳ್ಳಾರಿ,: ಶ್ರೀ ಗುರು ಪುಟ್ಟರಾಜ ಸಂಗೀತ ಪಾಠಶಾಲೆ ವತಿಯಿಂದ ಹವಂಭಾವಿ ವಿರಾಟ್ ನಗರದ ಗಾನಯೋಗಿ ಕಲಾ ಕೇಂದ್ರದಲ್ಲಿ ಶ್ರೀ ಪುರಂದರ ದಾಸರ ಸ್ಮರಣೆ ಅಂಗವಾಗಿ ದಾಸವಾಣಿ ಸಂಗೀತ ಕಾರ್ಯಕ್ರಮ ನಡೆಯಿತು




ಕಾರ್ಯಕ್ರಮವನ್ನು ಹಿರಿಯರಾದ ಪೂಲೆಕ್ಸ್ ಹನುಮಂತಪ್ಪನವರು ತಂಬೂರಿ ಮೀಟುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದರಾದ ಕೆ ಎಸ್ ಸತ್ಯನಾರಾಯಣ ಮತ್ತಿಹಳ್ಳಿ ಅಹಿರಾಜ್ ಎಸ್ ಬಸವರಾಜ್ ಕೆ ದೊಡ್ಡ ಬಸವ ಗವಾಯಿ ಕವಿತಾ ಮತ್ತು ದೇಸಾಯಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು

ಕಾರ್ಯಕ್ರಮದಲ್ಲಿ ಸತ್ಯನಾರಾಯಣಪೇಟೆಯ ಸಪ್ತಸ್ವರ ಸಂಗೀತ ಕಲಾವಿದರ ಬಳಗದಿಂದ ದಾಸವಾಣಿ ಕಾರ್ಯಕ್ರಮ ನಡೆಯಿತು ಕಲಾವಿದರಾಗಿ ರಾಮ್ ಮೋಹನ್ ಕುಲಕರಣಿ ವಿದ್ಯಾರಘುನಾಥ್ ಜಯಲಕ್ಷ್ಮಿ ವಿಜಯೇಂದ್ರ ವಿಠ್ಠಲ್ ದೇಸಾಯಿ ಅವರು ಗೀತ ನಡೆಸಿಕೊಟ್ಟರು

# ಸುಧಾ ಜೀನಿಯಸ್ ಹಂಟ್ ಪ್ರತಿಭಾ ಅನ್ವೇಷಣೆ ಪರೀಕ್ಷೆ



• ಮಲ್ಲಮ್ಮ ನುಡಿ ವಾರ್ತೆ ಲಿಂಗಸೂಗೂರು

ಪಟ್ಟಣದ ಪ್ರತಿಷ್ಠಿತ ಡಾ. ಸುಧಾಮೂರ್ತಿ ಇನ್ಫೋ ಪದವಿ ಪೂರ್ವ ಕಾಲೇಜು ವತಿಯಿಂದ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ (ಖಖಐಅ), ಸಿಬಿಎಸ್‌ಇ (ಅಃಖಇ) ಮತ್ತು ಐಸಿಎಸ್‌ಇ (ಋಅಖಇ) ವಿದ್ಯಾರ್ಥಿಗಳಿಗಾಗಿ "ಸುಧಾ ಜೀನಿಯಸ್ ಹಂಟ್–2026" ಎಂಬ ಬೃಹತ್ ಪ್ರತಿಭಾ ಅನ್ವೇಷಣೆ ಪರೀಕ್ಷೆಯನ್ನು ಆಯೋಜಿಸಲಾಗಿದೆ.

ಪರೀಕ್ಷೆಯ ವಿವರಗಳು: ದಿನಾಂಕ: 04–04–2026, ಶನಿವಾರ

ಸಮಯ: ಬೆಳಿಗ್ಗೆ 10:00 ಗಂಟೆಗೆ ಸ್ಥಳ (ಪರೀಕ್ಷಾ ಕೇಂದ್ರ): ಡಾ. ಸುಧಾಮೂರ್ತಿ ಇನ್ಫೋ ಪದವಿ ಪೂರ್ವ ಕಾಲೇಜು, ಅನ್ನದಾನಗೌಡ ಆಸ್ಪತ್ರೆ ಹತ್ತಿರ, ಎಂ.ಎನ್.ಆರ್ ಬಿಲ್ಡಿಂಗ್, ರಾಯಚೂರು ಬೈಪಾಸ್ ರಸ್ತೆ, ಲಿಂಗಸೂಗೂರು. ಬಹುಮಾನದ ವಿವರ: ಈ ಪರೀಕ್ಷೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಆಕರ್ಷಕ ನಗದು ಬಹುಮಾನ ನೀಡಲಾಗುವುದು:

ಪ್ರಥಮ ಬಹುಮಾನ: ರೂ. 20,000/–

ದ್ವಿತೀಯ ಬಹುಮಾನ: ರೂ. 10,000/–

ತೃತೀಯ ಬಹುಮಾನ: ರೂ. 5,000/–

ನೋಂದಣಿ ಪ್ರಕ್ರಿಯೆ: ಆಸಕ್ತ ವಿದ್ಯಾರ್ಥಿಗಳು ತಮ್ಮ ಹೆಸರು, ವರ್ಗ, ಶಾಲೆಯ ಹೆಸರು ಮತ್ತು ವಿಳಾಸವನ್ನು ಈ ಕೆಳಗಿನ ಮೊಬೈಲ್ ಸಂಖ್ಯೆಗಳಿಗೆ ಎಸ್‌ಎಂಎಸ್ (ಖಒಖ) ಅಥವಾ ವಾಟ್ಸಾಪ್ (ಘುಚಿಣ–ಂಠಿಠಿ) ಮಾಡುವ ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು:

ಮೊಬೈಲ್: 9019023348, 9740338346, 6360053115, 8746009385 ಲಿಂಗಸೂಗೂರು ಮತ್ತು ಸುತ್ತಮುತ್ತಲಿನ ಭಾಗದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಸುವರ್ಣ ಅವಕಾಶದ ಸದುಪಯೋಗ ಪಡೆದುಕೊಳ್ಳಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬಾಲಪ್ಪ ಹಿರೇಮನಿ, ಪ್ರಾಚಾರ್ಯರು ಸುಧಾಮೂರ್ತಿ ಇನ್ಫೋ ಪದವಿಪೂರ್ವ ಕಾಲೇಜು(ವಿಜ್ಞಾನ ವಿಭಾಗ), ಲಿಂಗಸುಗೂರು

# ಗ್ರಂಥಾಲಯ ಕಟ್ಟಡ ಕಾಮಗಾರಿ ಕಳಪೆ: ಕ್ರಮಕ್ಕೆ ಜೈ ಭೀಮ್ ಬಿಗ್ರೇಡ್ ಸೇನೆ ಅಗ್ರಹ



• ಮಲ್ಲಮ್ಮ ನುಡಿ ವಾರ್ತೆ ಲಿಂಗಸೂಗೂರು

ತಾಲೂಕಿನ ಕಾಳಾಪೂರ ಗ್ರಾಮದಲ್ಲಿ 2025–26ನೇ ಸಾಲಿನ ಜಿಲ್ಲಾ ಪಂಚಾಯತ್ ಹಾಗೂ ತಾಲೂಕಾ ಪಂಚಾಯಿತಿ ಅಭಿವೃದ್ಧಿ ಅನುದಾನದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ಗ್ರಂಥಾಲಯ ಕಟ್ಟಡ ಕಾಮಗಾರಿಯು ಸಂಪೂರ್ಣವಾಗಿ ಕಳಪೆ ಮಟ್ಟದಿಂದ ಕೂಡಿದ್ದು ಕೂಡಲೇ ಕಾಮಗಾರಿಯ ಬಿಲ್ ತಡೆಹಿಡಿದು ತಪ್ಪಿತಸ್ಥರ ವಿರುದ್ಧ ಕ್ರಮ ಕೈ ಗೊಳ್ಳಬೇಕೆಂದು ಜೈ ಭೀಮ್ ಬಿ ಗ್ರೇಡ್ ಸೇನೆಯ ತಾಲೂಕ ಅಧ್ಯಕ್ಷ ಸಣ್ಣೆಪ್ಪ ಕಾಳಾಪೂರ ಹಾಗೂ ತಾಲೂಕ ಸಂಘಟನಾ ಕಾರ್ಯದರ್ಶಿ ಬಸವರಾಜ್ ಎಸ್ ಅವರು ತಾಲೂಕ ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.

2025–26ನೇ ಸಾಲಿನ ಕಾಳಾಪೂರ ಗ್ರಾಮದಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಾಣ ಕಾಮಗಾರಿ ಅಂದಾಜು ವೆಚ್ಚ ರೂ. 15.00 ಲಕ್ಷ ರೂಪಾಯಿಗಳ ಅನುದಾನದಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಟೆಂಡರ್ ನಿಯಮಗಳ ಪ್ರಕಾರ ಕಾಮಗಾರಿಯನ್ನು ಕೈಗೊಳ್ಳದೇ ಕಳಪೆಮಟ್ಟದ ಕಾಮಗಾರಿ ಮಾಡಲಾಗುತ್ತಿದ್ದು ಅಂದಾಜು ಪತ್ರಿಕೆಯ ನಿಯಮಗಳನ್ನು ಉಲ್ಲಂಘನೆ ಮಾಡಲಾಗಿದೆ.

ಅಳತೆ ಪ್ರಮಾಣದಲ್ಲಿ ಸಿಮೆಂಟ ಬಳಕೆ ಮಾಡಿರುವುದಿಲ್ಲ. ಸಮಯಕ್ಕೆ ಸರಿಯಾಗಿ ಕ್ಯೂರಿಂಗ್ ಮಾಡಿರುವುದಿಲ್ಲ. ಇಲ್ಲಿ ಅಂದಾಜು ಪತ್ರಿ–ಕೆಯ ಪ್ರಕಾರ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ. ನಿಯಮ ಉಲ್ಲಂಘನೆ ಮಾಡಿ ಕಾಮಗಾರಿಯನ್ನು ಕಳಪೆಮಟ್ಟದಿಂದ ಕೈಗೊಂಡು ಇಲ್ಲಿ ಹಣ ದುರ್ಬಳಕೆಗೆ ಮುಂದಾಗಿರುವದು ಕಂಡು ಬಂದಿದ್ದು ಇಲಾಖೆಯ ನಿಯಮಾನುಸಾರ ಕಾಮಗಾರಿ ಅಂದಾಜು ಪತ್ರಿಕೆಯ ಪ್ರಕಾರ ಕೈಗೊಳ್ಳದೇ ಇರುವದರಿಂದ ಮತ್ತು ಈ ಎಲ್ಲಾ ನ್ಯೂನತೆಗಳು ಸದರಿ ಕಾಮಗಾರಿಯಲ್ಲಿದ್ದು ಮತ್ತು ಟೆಂಡರ ನಿಯಮ ಉಲ್ಲಂಘನೆ ಮಾಡಿ ಕಾಮಗಾರಿ ಕೈಗೊಂಡಿದ್ದನ್ನು ಸಂಬಂಧಪಟ್ಟ ಕಿ.ಇಂ.ರವರು ಇದರ ಬಿಲ್ಲು ತಡೆಹಿಡಿಯಲು ಸೂಚಿಸಬೇಕು.

ತಳಪಾಯ ಕಲ್ಲಿನಿಂದ ಕಟ್ಟದೆ ಕಳಪೆ ಮಟ್ಟದ ಕಪ್ಪು ಎಳ್ಳೆಯಿಂದ ತಳಪಾಯ ಕಟ್ಟಿರುತ್ತಾರೆ. ಇಲ್ಲಿ ತಳಪಾಯ ಕಲ್ಲು ಕಟ್ಟಡ ಮಾಡದೇ ನಿಯಮ ಉಲ್ಲಂಘನೆ ಮಾಡಲಾಗಿದೆ. ವಾಲ್ ಎಳ್ಳೆಗಳು ಉತ್ತಮ ಗುಣಮಟ್ಟದ ಬ್ಲಾಕಗಳನ್ನು ಬಳಕೆ ಮಾಡಿರುವುದಿಲ್ಲ. ಉತ್ತಮ ಗುಣಮಟ್ಟದ ಮರಳು ಬಳಕೆ ಮಾಡದೇ ಮಣ್ಣು ಮಿಶ್ರಿತ ಮರಳು ಬಳಕೆ ಮಾಡಲಾಗಿದೆ. ಇಲ್ಲಿಯು ಕೂಡ ನಿಯಮ ಉಲ್ಲಂಘನೆ ಮಾಡಲಾಗಿದೆ.

ಕಾರಣ ಈ ನಮ್ಮ ಸಂಘಟನೆಯ ದೂರನ್ನು ಪರಿಗಣಿಸಿ ಕಾಮಗಾರಿಯ ಸ್ಥಳ ಪರಿಶೀಲನೆ ಮಾಡಿ ಅಂದಾಜು ಪತ್ರಿಕೆಯ ನಿಯಮಗಳನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡಿ ಕಳಫೆ ಕಾಮಗಾರಿಯ ಬಿಲ್ಲನ್ನು ಮಂಜೂರು ಮಾಡಬಾರದೆಂದು ಅವರು ಒತ್ತಾಯಿಸಿದ್ದಾರೆ. ಒಂದು ವೇಳೆ ಈ ನಮ್ಮ ದೂರನ್ನು ಕಡೆಗಣಿಸಿ ಕಳಪೆಕಾಮಗಾರಿ ಬಿಲ್ಲು ಮಂಜೂರು ಮಾಡಲು ಮುಂದಾದರೆ ಇದಕ್ಕೆ ಸಂಬಂಧಪಟ್ಟ ತಮ್ಮನ್ನೇ ನೇರಹೊಣೆಗಾರರನ್ನಾಗಿ ಮಾಡುವಂತೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ದೂರು ಸಲ್ಲಿಸಿ ಕ್ರಮಕ್ಕೆ ಒತ್ತಾಯಿಸಲಾಗುವುದೆಂದು ಅವರು ಮನವಿಯಲ್ಲಿ ಎಚ್ಚರಿಸಿದ್ದಾರೆ.

# ವಚನ ಸಾಹಿತ್ಯಕ್ಕೆ ದೇವರ ದಾಸಿಮಯ್ಯನವರ ಕೊಡುಗೆ ಅಪಾರ: ಕರ್ಣಕುಮಾರ

• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ



ವಚನ ಸಾಹಿತ್ಯಕ್ಕೆ ದೇವರ ದಾಸಿಮಯ್ಯನವರ ಕೊಡುಗೆ ಅಪಾರವಾಗಿದ್ದು, ವಚನಗಳ ಮೂಲಕ ಸಮಾಜಕ್ಕೆ ಮಾರ್ಗದರ್ಶನ ನೀಡಿದರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ ಅವರು ಹೇಳಿದರು.

ಸೋಮವಾರದಂದು ನಗರದ ಸಾಹಿತ್ಯ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಶ್ರೀ ದೇವರ ದಾಸಿಮಯ್ಯ ಅವರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದಾಸಿಮಯ್ಯ ಅವರ ವಚನಗಳು ಸರಳತೆ, ಸಮಾನತೆ ಹಾಗೂ ಭಕ್ತಿ ತತ್ವಗಳನನು ಸಾರುತ್ತವೆ. ಅವರು ಜಾತಿ ಬೇಧವನ್ನು ವಿರೋಧಿಸಿ, ಮಾನವೀಯ ಮೌಲ್ಯಗಳನ್ನು ಉತ್ತೇಜಿಸಿದ ಶ್ರೇಷ್ಠ ವಚನಕಾರರು. ಅವರ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಅವರು ಹೇಳಿದರು.

ಗಂಗಾವತಿಯ ಮುರಹರಿನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕರಾದ ಸಾಹಿತಿ ಅಮರಮ್ಮ ಕೋಚಿ ಅವರು ದೇವರ ದಾಸಿಮಯ್ಯ ಅವರ ಕುರಿತು ನೀಡಿದ ವಿಶೇಷ ಉಪನ್ಯಾಸದಲ್ಲಿ ದಾಸಿಮಯ್ಯನವರು ಕನ್ನಡದ ಮೊದಲ ವಚನಕಾರರಲ್ಲಿ ಒಬ್ಬರು. ಇವರನ್ನು ವಚನ ಸಾಹಿತ್ಯದ ಆದ್ಯ ವಚನಕಾರ ಎಂದು ಕರೆಯಲಾಗುತ್ತದೆ. ಅಂದಿನ ಕಾಲದ ಜನರಲ್ಲಿದ್ದ ಮೂಢನಂಬಿಕೆ, ಮೇಲು–ಕೀಳು ಎಂಬ ಭೇದಭಾವವನ್ನು ಇವರು ತಮ್ಮ ಸರಳ ಮಾತುಗಳ ಮೂಲಕ ತಿದ್ದಿದರು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಉಪತಹಶೀಲ್ದಾರ್ ಗವಿಸಿದ್ದಪ್ಪ ಹಾಗೂ ನೇಕಾರ ಸಮುದಾಯದ ಅಧ್ಯಕ್ಷರಾದ ಶಿವಶಂಕರಪ್ಪ ಚೆನ್ನಿ, ಶಿವಶಂಕರಪ್ಪ ಕರಡಕಲ ಹಾಗೂ ಸಮಾಜ ಬಂಧುಮಿತ್ರರು ಉಪಸ್ಥಿತರಿದ್ದರು.

# ಯಾನಾಗುಂದಿ: 27ಕ್ಕೆ ಶ್ರೀ ರಾಮನವಮಿ ಮಹೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್.



ಗುರುಮಠಕಲ್ ಪಟ್ಟಣಕ್ಕೆ ಅತ್ಯಂತ ಸನಿಹದ ಸೇಡಂ ತಾಲೂಕಿನ ಯಾನಾಗುಂದಿ ಗ್ರಾಮದಲ್ಲಿರುವ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀ ರಾಮನವಮಿ ಮಹೋತ್ಸವವನ್ನು ಭಕ್ತಿಭಾವದಿಂದ ಆಚರಿಸಲು ಭರದ ಸಿದ್ಧತೆಗಳು ನಡೆಯುತ್ತಿವೆ ಎಂದು ಯಾನಗುಂದಿ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಕಾರ್ಯದರ್ಶಿ ಜಗನ್ನಾಥರೆಡ್ಡಿ ಮಾಲಿ ಪಾಟೀಲ್ ಗುರುಮಠಕಲ್ ನಲ್ಲಿ ಪತ್ರಿಕೆಗೆ ಮಾಹಿತಿ ನೀಡಿದ್ದಾರೆ.

ಮಾತಾ ಮಾಣಿಕೇಶ್ವರಿ ಅಮ್ಮನವರು ಯಾನಗುಂದಿ ಕ್ಷೇತ್ರಕ್ಕೆ ಬಂದು ಮೊದಲು ಧ್ಯಾನ ಮಾಡಿದ ಪುಣ್ಯ ಕ್ಷೇತ್ರ ಈ ರಾಮಲಿಂಗೇಶ್ವರ ದೇವಸ್ಥಾನ, ಪಾರಂಪರಿಕವಾಗಿ ದೇವಸ್ಥಾನದಲ್ಲಿ ಜರುಗುವ ಶ್ರೀ ಸೀತಾರಾಮ ಕಲ್ಯಾಣೋತ್ಸವವನ್ನು ಶುಕ್ರವಾರ ದಿನಾಂಕ 27–03–2026 ರಂದು ವೈಭವದಿಂದ ನಡೆಸುತ್ತಿದ್ದು,

ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಹೇಳಿದರು.

ಕಾರ್ಯಕ್ರಮದ ಅಂಗವಾಗಿ ಮುಂಜಾನೆ 10 ಗಂಟೆಗೆ ಕ್ಷೀರಾಭಿಷೇಕ, ಮಧ್ಯಾಹ್ನ 2 ಗಂಟೆಗೆ ಶ್ರೀ ಸೀತಾರಾಮ ಕಲ್ಯಾಣೋತ್ಸವ ಹಾಗೂ ರಾತ್ರಿ 10 ಗಂಟೆಗೆ ಶ್ರೀ ಸ್ವಾಮಿಯವರ ರಥೋತ್ಸವ ನಡೆಯಲಿದೆ. ಕಾರ್ಯಕ್ರಮದಲ್ಲಿ ದಿವಂಗತ ಶ್ರೀ ರಾಮರೆಡ್ಡಿ ಮಾಲಿ ಪಾಟೀಲ್ ಕುಟುಂಬ ಸದಸ್ಯರು ಹಾಗೂ ಸಾವಿರಾರು ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ, ಬಂದ ಭಕ್ತಾದಿಗಳಿಗೆ ಊಟದ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಾಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿಸಲು ಕೋರಿದರು.

# ಕಾಲುವೆ ದುರಸ್ತಿ ಕಾರ್ಯ ಮುಗಿಸಿ, ಕುಡಿಯೊಕ್ಕೆ ನೀರು ಕೊಡಿ: ನಾಡಗೌಡ




• ಮಲ್ಲಮ್ಮ ನುಡಿ ವಾರ್ತೆ, ಸಿಂಧನೂರು

ತುಂಗಭದ್ರಾ ಡ್ಯಾಂ ಮುಖ್ಯ ಕಾಲುವೆ ಓಡೆದಿದ್ದು. ಗ್ರಾಮಗಳ ಕೆರೆಗಳು ನೀರು ಖಾಲಿಯಾಗಿದ್ದು. ನೀರಿನ ಹಾಹಾಕಾರ ಉಂಟಾಗುವ ಸಾಧ್ಯತೆ ಹೆಚ್ಚು ಇರುವುದು ಇದಕ್ಕೆ ಕಾರಣ ಅಧಿಕಾರಿಗಳು ನಿರ್ಲಕ್ಷ್ಯ ಧೋರಣೆ ಎಂದು ಮಾಜಿ ಸಚಿವ ವೆಂಕಟರಾವ್ ನಾಡಗೌಡ ಅವರು ಆರೋಪಿಸಿದರು

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಎಡದಂಡೆ ಮುಖ್ಯ ಕಾಲುವೆ ಓಡಿಯುವುದಕ್ಕೆ ಅಲ್ಲಿನ ಅಧಿಕಾರಿಗಳ ಬೇಜವಾಬ್ದಾರಿ ಮತ್ತು ಕಾಲುವೆ ದುರಸ್ತಿ ಬಗ್ಗೆ ಶಾಸಕರು ಹಾಗೂ ಸಚಿವರುಗಳು ಹೇಳಿಕೆಗಳು ರೈತರಲ್ಲಿ ಗೊಂದಲ ಸೃಷ್ಟಿಯಾಗಿದ್ದು

ಈಗಾಗಲೇ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಲ್ಲಿ ವಾರಕ್ಕೊಮ್ಮೆ ನೀರು ಬಿಡುವಂತೆ ಸಭೆಯಲ್ಲಿ ಪ್ರಕಟಣೆ ಮೂಲಕ ಶಾಸಕರೇ ಮಾಡಿದ್ದಾರೆ. ಇವರು ಆಡಳಿತ ವೈಖರಿಯನ್ನು ಜವಾಬ್ದಾರರೇ ಕಾರಣವಾಗುತ್ತದೆ ಎಂದರು

ಕಾಲುವೆ ದುರಸ್ತಿ ಕಾರ್ಯದಲ್ಲಿ ವಿಚಾರದಲ್ಲಿ. ಸರ್ಕಾರಕ್ಕೂ ಮತ್ತು ಆಧಿಕಾರಿಗಳು ನಡುವೆ ಗೊಂದಲಗಳ ಇದ್ದು. ಯಾರು ಯಾರಿಗೆ ಸಂಬಂಧ ಇಲ್ಲ ಎಂಬಂತೆಯೇ ಕಾಣಿಸುತ್ತದೆ ನಮಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕಾಲುವೆ ದುರಸ್ತಿ ಕಾರ್ಯಯಾಗಬೇಕು. ತಾತ್ಕಾಲಿಕವಾಗಿ ರೆಡಿ ಮಾಡಿ ಸರ್ಕಾರ ಗಮನಕ್ಕೆ ತರುವುದಾಗಿ ಶಾಸಕರ ಹೇಳಿಕೆ ಇನ್ನೂ ಸಚಿವರು ಈಗಾಗಲೇ ಕೆಲಸ ಕಾರ್ಯ ಪ್ರಾರಂಭವಾಗಿದ್ದು ಎಂದು ಸಚಿವರು ಹೇಳುತ್ತಾರೆ. ಒಟ್ಟಾರೆ ಅದೆಷ್ಟು ಮುಖ್ಯ ಕಾಲುವೆ ದುರಸ್ತಿ ಕಾರ್ಯ ಮುಗಿಸಿ ಮೊದಲು ಕುಡಿಯುವುದಕ್ಕೆ ನೀರು ಬಿಡುವ ಕೆಲಸ ಮಾಡಿ. ಇನ್ನೂ 15–20 ತಡವಾದರೆ ನೀರಿನ ಸಮಸ್ಯೆ ಉದ್ಭವಿಸಿರೆ ಜನರು ರೊಚ್ಚಿಗೆ ಹೇಳುತ್ತಾರೆ ಎಂದು ಎಚ್ಚರಿಸಿದರು.

ತಾಲೂಕಿನ ಹೊಸಳ್ಳಿ ( ಇಜೆ) ಕ್ಯಾಂಪ್ ಬಳಿ ಬರುವ ಶ್ರೀ ಕೃಷ್ಣ ದೇವರಾಯ ಶಾಲೆಯಲ್ಲಿ ಸೈನಿಕ ಶಾಲೆಯನ್ನು ಉದ್ಘಾಟನೆ ಮಾಡುವುದಕ್ಕೆ ಏಪ್ರಿಲ್ 4 ರಂದು ಕೇಂದ್ರ ಸಚಿವರಾದ ಎಚ ಡಿ ಕುಮಾರಸ್ವಾಮಿ ಹಾಗೂ ರಕ್ಷಣಾ ರಾಜ್ಯ ಸಚಿವರು ಸಂಜಯ ಶೇಠ್ ಆಂಧ್ರಪ್ರದೇಶದ ನಾರಾ ಲೋಕೇಶ್ ಸಂಸದ ಭರತ ಜಿಲ್ಲಾ ಉಸ್ತುವಾರಿ ಸಚಿವರು ಸಂಸದರು ಭಾಗವಹಿಸಲಿದ್ದಾರೆ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು

ಈ ಸಂದರ್ಭದಲ್ಲಿ. ಅಶೋಕ್ ಗೌಡ ಗದ್ರಟಗಿ. ಜಿ.ಸತ್ಯನಾರಾಯಣ ಅಲ್ಲಮ ಪ್ರಭು ಪೂಜಾರ .ದಾಸರಿ ಸತ್ಯನಾರಾಯಣ ವೆಂಕೋಬ ಕಲ್ಲೂರು. ಜಲಾನಿ ಪಾಷಾ. ಎಸ್ ಬಿ ಟೈಲರ್. ರವಿ.ಅಜಯ್. ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಇದ್ದರು.

# ಯುಗಾದಿ ರಂಜಾನ್: ಕಿಟ್ ವಿತರಣೆ



• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕಾಂಗ್ರೆಸ್ ಮುಖಂಡರು ವಿದ್ಯಾಭೂಷಣ್ ಇಂಟ–ರ್ ನ್ಯಾಷನಲ್ ಸ್ಕೂಲ್ ಸಂಸ್ಥಾಪಕರಾದ ಬ.ನಾ. ರವಿ ಹಾಗೂ ಹೆಗ್ಗನಹಳ್ಳಿಯ ಕಾಂಗ್ರೆಸ್ ಪಕ್ಷದ ಜಿಬಿಎ ಅಕಾಂಕ್ಷಿ ಶ್ರೀಮತಿ ಪಾರ್ವತಿ ಬ.ನಾ.ರವಿ ದಂಪತಿಗಳು ಯುಗಾದಿ ಹಾಗೂ ರಂಜಾನ್ ಪ್ರಯುಕ್ತ ಹಮ್ಮಿಕೊಂಡಿದ್ದ ರೇಷನ್ ಕಿಟ್ ವಿತರಣೆಗೆ ಕುಣಿಗಲ್ ಶಾಸಕ ಡಾ.ರಂಗನಾಥ್ ಹಾಗೂ ಅರೇಶಂಕರಮಠದ ಸದ್ಗುರು ಶ್ರೀ ಸಿದ್ದರಾಮಚೈತನ್ಯ ಮಹಾಸ್ವಾಮೀಜಿಗಳು ಅಮೃತ ಹಸ್ತದಿಂದ ನೇರೇವೆರೆಸಿದರು.

ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ ಬಡವರ ದೀನ ದಲಿತರ ಪಕ್ಷ ಜನಗಳ ನೆರೆವಿಗೆ ಸದಾ ಸಿದ್ದವಿರುತ್ತದೆ ಈ ಹಿನ್ನಲೆಯಲ್ಲಿ ಪಕ್ಷದ ಮುಖಂಡರ ಸಲಹೆ ಸಹಕಾರದೊಂದಿಗೆ ವಾರ್ಡ್ ನ ನೂರಾರು ಕುಟುಂಬಗಳಿಗೆ ಉಚಿತ ರೇಷನ್ ಪದಾರ್ಥಗಳ ಕಿಟ್ ಗಳನ್ನು ವಾರ್ಡ್ ಗಳಲ್ಲಿ ವಿತರಣೆ ಮಾಡಿದ್ದೆವೆ

ಮುಂದಿನ ದಿನಗಳಲ್ಲಿ ಜನರಪರ ಕೆಲಸಗಳಲ್ಲಿ ಅವರ ಕಷ್ಟ ಸುಖಗಳಲ್ಲಿ ಭಾಗವಹಿಸಿ ಪಕ್ಷವನ್ನು ಸಂಘಟಿಸುವ ಕೆಲಸದಲ್ಲಿ ತೊಡಗಿಕೊಂಡಿರುವೆ ಮುಂದಿನ ಜಿಬಿಎ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದು ಎಲ್ಲರ ಸಹಕಾರದಿಂದ ಮತ್ತಷ್ಟು ಜನಸೇವೆಗೆ ಮುಂದಾಗುವೆ ಎಂದು ಕಾಂಗ್ರೆಸ್ ಮುಖಂಡ,ಬನಾ ರವಿ ತಿಳಿಸಿದರು.

ಈ ಸಂಧರ್ಭದಲ್ಲಿ ಕೆಪಿಸಿಸಿ ಕಾರ್ಮಿಕ ವಿಭಾಗದ ಅಧ್ಯಕ್ಷ ,ಬಿಡಿಎ ಸದಸ್ಯರಾದ ಪುಟ್ಟಸ್ವಾಮಿಗೌಡ, ರಾಜಗೋಪಾಲನಗರ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಬಿ ಜಗದೀಶ್ ಕುಮಾರ್, ಕೆಪಿಸಿಸಿ ಕಾರ್ಮಿಕ ವಿಭಾಗದ ಪ್ರಧಾನ ಕಾರ್ಯದರ್ಶಿ ಮೋಹನ್, ರಾಜ್ಯ ಜಂಟಿ ಕಾರ್ಯದರ್ಶಿ ನಿಸಾರ್ ಖಾನ್, ಹೆಗ್ಗನಹಳ್ಳಿ ಬ್ಲಾಕ್ ಯೂಥ್ ಕಾಂಗ್ರೆಸ್ ಉಪಾಧ್ಯಕ್ಷ ಗಿಡ್ಡೇನಹಳ್ಳಿ ಶಶಿಕುಮಾರ್, ಮುಖಂಡರಾದ ತಾಸೀನ ಭಾನು,ಸೇರಿದಂತೆ ಹಲವಾರು ಪ್ರಮುಖ ಇದ್ದರು

# ನಗರಸಭೆಯಿಂದ ಅರ್ಜಿ ಅಹ್ವಾನ

ರಾಯಚೂರು :ಜಿಲ್ಲೆಯ ಸಿಂಧನೂರಿನ ನಗರಸಭೆಯಿಂದ 2026–27ನೇ ಸಾಲಿನ ಶೇ.7.25 & ಶೇ.5 ಯೋಜನೆಗಳಿಗೆ ಕಾಯ್ದಿರಿಸಲಾದ ಎಸ್.ಎಫ್.ಸಿ (ಮುಕ್ತನಿಧಿ) ಅನುದಾನಗಳ ಅನುಷ್ಠಾನಕ್ಕಾಗಿ ವೈಯಕ್ತಿಕ ಚಟುವಟಿಕೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಪೂರ್ಣ ವಿವರದ ಪ್ರಕಟಣೆಯನ್ನು ನಗರಸಭೆ ಕಾರ್ಯಾಲಯ ನೋಟಿಸ್ ಫಲಕದಲ್ಲಿ ಹಾಗೂ ವೆಬ್‌ಸೈಟ್ ವಿಳಾಸ: http://www.sindhanurcity.mrc.gov.in/ನಲ್ಲಿ ಪ್ರಕಟಿಸಲಾಗಿದೆ.

ಅರ್ಹ ಫಲಾನುಭವಿಗಳು ವೈಯಕ್ತಿಕ ಚಟುವಟಿಕೆವಾರು ಮುಂದೆ ತಿಳಿಸಿರುವ ಅಗತ್ಯ ಎಲ್ಲಾ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಗಳ ಧೃಢೀಕರಣದೊಂದಿಗೆ ಏಪ್ರಿಲ್ 22ರ ಸಂಜೆ 5.30ರೊಳಗೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಕೊನೆಯ ದಿನಾಂಕ ಮೀರಿ ಬಂದಂತಹ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ವೈಯಕ್ತಿಕ ಚಟುವಟಿಕೆಗಳ ಯೋಜನೆಗಳ ಬಗ್ಗೆ ಸಮರ್ಪಕವಾಗಿ ತಿಳಿದುಕೊಂಡು ಅರ್ಜಿಗಳನ್ನು ಸಲ್ಲಿಸಬೇಕೆಂದು ಸಿಂಧನೂರು ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೌರ್ಜನ್ಯ, ಶೋಷಣೆಯನ್ನು ತಡೆಗಟ್ಟಲು ಪ್ರತಿಯೊಬ್ಬರೂ ಮುಂದಾಗಬೇಕು



• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ

ಸಮಾಜದಲ್ಲಿ ನಡೆಯುತ್ತಿರುವ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಹಾಗೂ ಶೋಷಣೆಯನ್ನು ತಡೆಗಟ್ಟಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದು ಗಣಪತಿ ಅಷ್ಟೋರೆ ರವರು ತಾಲ್ಲೂಕಿನ ಶೆಡೋಳ ಗ್ರಾ ಪಂ. ಸಮುದಾಯ ಭವನದಲ್ಲಿ ಏರ್ಪಡಿಸಿದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮೇಲಿನ ದೌರ್ಜನ್ಯ ಕುರಿತು ಒಂದು ಪ್ರತಿಬಂಧ ವಿಚಾರಗೋಷ್ಠಿ ಕಾರ್ಯಗಾರ ಮತ್ತು ಕೋಮು ಸೌಹಾರ್ದತೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ತಿಳಿಸಿದರು.ಲೈಂಗಿಕ ದೌರ್ಜನ್ಯ ಕುರಿತು ಅರಿವು ಮೂಡಿಸಿದರೆ ಮಾತ್ರ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಸಾಧ್ಯ ಎಂದರು. ಇತಿಹಾಸದ ಕಾಲಘಟ್ಟದಲ್ಲಿ ಸಾಕಷ್ಟು ಏರಿಳಿತ ಅನುಭವಿಸಿರುವ ಸ್ತ್ರೀಯರು ಆಧುನಿಕ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಭಾಗವಹಿಸುವ ಸಾಮರ್ಥ್ಯ ಹೊಂದಿದ್ದರೂ ಕೂಡ ಮಹಿಳಾ ಸಭಲೀಕರಣ ಸಾಕಷ್ಟು ಪ್ರಮಾಣದಲ್ಲಿ ಯಶಸ್ವಿಯಾಗುತ್ತಿಲ್ಲ. ಇದಕ್ಕೆ ಪ್ರತಿಯೊಬ್ಬ ಮಹಿಳೆಯರು ಎಚ್ಚೆತ್ತುಕೊಂಡು ನಮಗಿರುವ ಅವಕಾಶ ಪಡೆದುಕೊಳ್ಳಬೇಕು. ಮಹಿಳೆಯರಿಗಾಗಿ ಸರಕಾರ ಮತ್ತು ಕಾನೂನುಗಳ ಸದುಪಯೋಗ ಪಡೆದುಕೊಂಡು ಸಭಲತೆ ಹೊಂದಬೇಕು. ಅಂದಾಗ ಇಂತಹ ಕಹಿ ಘಟನೆಗಳು ನಿಲ್ಲುತ್ತವೆ ಎಂದರು. ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯ ಲಿಂಗರಾಜ ಅರಸು, ಗೌತಮ್ಮ ಚವ್ಹಾಣ, ದಶರಥ, ಊರಿನ ಗಣ್ಯರು, ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ ವಿವಿಧ ಕ್ಷೇತ್ರದಲ್ಲಿ ಸೇವೆಗೈದ 7 ಜನ ಗಣ್ಯರ ಆಯ್ಕೆ

ಮಲ್ಲಮ್ಮ ನುಡಿ ವಾರ್ತೆ, ಬಸವಕಲ್ಯಾಣದ




ಇಲ್ಲಿನ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠದ ವತಿಯಿಂದ ಪ್ರತಿಷ್ಠಿತ 2026 ರ ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ 7 ಜನ ಗಣ್ಯರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ಪುರಸ್ಕೃತರಾದ

ಬಸವ ಬೆರಳಚ್ಚು ಸಂಸ್ಥೆಯ ಪ್ರಾಚಾರ್ಯರಾದ ಎ.ಜಿ ಪಾಟೀಲ. ಹರಿ ಓಂ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ದಿಲೀಪಗೀರ ಕಿಶನಗೀರ ಗೋಸಾವಿ ಗೋಕುಳ. ಕೃಷಿ ಇಲಾಖೆಯ ನಿವೃತ್ತ ವ್ಯವಸ್ಥಾಪಕರಾದ ಜಯಪ್ರಕಾಶ ಬಸವರಾಜ ಸ್ವಾಮಿ ಉಮರ್ಗಾಕರ್ ಹುಮನಾಬಾದ. ನಿವೃತ್ತ ಮುಖ್ಯ ಗುರುಗಳಾದ ಸರಸ್ವತಿ ಶಿವಕುಮಾರ ಬೆಂಬಳಿ.

ಜಿಲ್ಲಾ ಬಜರಂಗದಳ ಸಹ ಸಂಯೋಜಕರಾದ ರವಿ ವೀರಣ್ಣ ನಾವದ್ಗೇಕರ.

ಸಮಾಜ ಸೇವಕರಾದ ಶಿವಕುಮಾರ ಬಿರಾದಾರ.

ಸಮಾಜ ಸೇವಕರಾದ ಲೋಕೇಶ ಮೊಳಕೆರೆ ಪ್ರತಾಪೂರ. ಇವರಿಗೆ ತ್ರಿಪುರಾಂತಿನ ಗವಿಮಠದ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದ್ದಾರೆ. ಬರುವ ಏಪ್ರಿಲ್ 7 ರಂದು ಮಂಗಳವಾರ ಬೆಳಿಗ್ಗೆ 11. ಗಂಟೆಗೆ ಇಲ್ಲಿನ ಗವಿಮಠ ಆವರಣದಲ್ಲಿ ಈ ಪ್ರಶಸ್ತಿ ಪ್ರಧಾನ ಸಮಾರಂಭ ಹಾಗೂ " ಗುರು ಘನಲಿಂಗರ ಗುರುವಿನ ಲೀಲಾ " ಧ್ವನಿಸುರಳಿ ಬಿಡುಗಡೆ ಸಮಾರಂಭವು ಹಾಗೂ ಶ್ರೀ ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವ ಅಂಗವಾಗಿ ಜರುಗಲಿದೆ. ಈ ಕಾರ್ಯಕ್ರಮಕ್ಕೆ ನಾಡಿನ ಹರಗುರು ಚರಮೂರ್ತಿಗಳು, ರಾಜಕೀಯ ಮುಖಂಡರು, ಸಾಹಿತಿಗಳು, ಕವಿ, ಕಲಾವಿದರು, ಅತಿಥಿಗಣ್ಯರು ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಸಕಲ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀ ಘನಲಿಂಗ ರುದ್ರಮುನಿ ಶಿವಯೋಗಿಗಳ ಆಶೀರ್ವಾದ ಪಡೆದು ಮಹಾಪ್ರಸಾದ ಸ್ವೀಕರಿಸಿ ಪುನೀತರಾಗಬೇಕೆಂದು ಗವಿಮಠ ಟ್ರಸ್ಟ್ ವತಿಯಿಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುಣಮಟ್ಟ ಖಾತರಿ ಪಡಿಸಿಕೊಂಡು ಉತ್ಪನ್ನ ಖರೀದಿಸಿ: ಬಾಲಕೃಷ್ಣ



• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

**ವಿಶ್ವಗ್ರಾಹಕ ಹಕ್ಕುಗಳ ದಿನಾಚರಣೆ**

ಗ್ರಾಹಕರು ಯಾವುದೇ ರೀತಿಯ ಉತ್ಪನ್ನ ಖರೀದಿಸಬೇಕಾದರೆ ಉತ್ಪನ್ನದ ಪ್ರಮಾಣ ಮತ್ತು ಗುಣಮಟ್ಟ ಖಾತರಿ ಪಡಿಸಿಕೊಂಡು ಖರೀದಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಇ. ಬಾಲಕೃಷ್ಣ ಹೇಳಿದರು.

ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಆಹಾರ ಸುರಕ್ಷತಾ ಇಲಾಖೆ ಸಹಯೋಗದಲ್ಲಿ ಮಂಗಳವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ವಿಶ್ವ ಗ್ರಾಹಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬ ಗ್ರಾಹಕನೂ ತಾನು ಖರೀದಿಸುವ ವಸ್ತುಗಳ ಗುಣಮಟ್ಟ, ತೂಕ ಮತ್ತು ಅಳತೆ ಪ್ರಮಾಣದ ಬಗ್ಗೆ ಅರಿತಿರಬೇಕು. ಗ್ರಾಹಕನೇ ಮಾರುಕಟ್ಟೆಯ ರಾಜ ಎನ್ನುವ ಮಾತು ಅನ್ವಯವಾಗಬೇಕಾದರೆ, ಗ್ರಾಹಕರು ಸಹ ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಿರಬೇಕು. ಗ್ರಾಹಕರು ವಿವಿಧ ಮಾಧ್ಯಮಗಳಲ್ಲಿ ಬಿತ್ತರಿಸುವ ಆಕರ್ಷಣೀಯ ಜಾಹೀರಾತುಗಳಿಗೆ ಮಾರು ಹೋಗಿ ಉತ್ಪನ್ನ ಖರೀದಿಸಬಾರದು.

ಬದಲಾಗಿ ಉತ್ಪನ್ನದ ಗುಣಮಟ್ಟ, ಸುರಕ್ಷತೆಯ ಬಗ್ಗೆ ಪರಿಶೀಲಿಸಿ ಖರೀದಿಸಬೇಕು. ಯಾವುದೇ ವಸ್ತು, ಉತ್ಪನ್ನ ಖರೀದಿಸಿದಾಗ ತಪ್ಪದೇ ಅಧಿಕೃತ ಬಿಲ್ ಅಥವಾ ರಶೀದಿ ಪಡೆಯಬೇಕು. ಉತ್ಪನ್ನ ಖರೀದಿಸಿದಾಗ ಲೋಪದೋಷ ಉಂಟಾದಾಗ ದೂರು ದಾಖಲಿಸಲು ಅಥವಾ ಗ್ರಾಹಕರ ಹಕ್ಕು ಪ್ರತಿಪಾದಿಸಲು ಸಹಕಾರಿಯಾಗಲಿದೆ. ವ್ಯಾಪಾರಸ್ಥರು ಕಡ್ಡಾಯವಾಗಿ ಮುದ್ರೆ ಹಾಕಿಸಿದ ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನೇ ಬಳಸಬೇಕು. ಗ್ರಾಹಕರಿಗೆ ಈ ಬಗ್ಗೆ ಅನುಮಾನವಿದ್ದಲ್ಲಿ ತಕ್ಷಣ ಸಂಬಂಧಪಟ್ಟ ಇಲಾಖೆಗೆ ದೂರು ನೀಡಬಹುದು. ವಸ್ತು ಅಥವಾ ಸೇವೆಯಲ್ಲಿ ನ್ಯೂನತೆ ಕಂಡುಬಂದಲ್ಲಿ ಗ್ರಾಹಕರು ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ನೀಡಿ. ಕಾನೂನಾತ್ಮಕವಾಗಿ ನ್ಯಾಯ ಪಡೆಯಲು ಅವಕಾಶವಿದೆ ಎಂದು ತಿಳಿಸಿದರು.

ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಅಧ್ಯಕ್ಷ ಎನ್. ತಿಪ್ಪೇಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ವಕೀಲ ಕರುಣಾನಿಧಿ ಗ್ರಾಹಕ ಹಕ್ಕುಗಳ ಕುರಿತು ಉಪನ್ಯಾಸ ನೀಡಿದರು.

ಗ್ರಾಹಕರ ದಿನಾಚರಣೆ ಪ್ರಯುಕ್ತ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ವತಿಯಿಂದ ತಾತ್ಕಾಲಿಕ ಸ್ಟಾಲ್ ಸ್ಥಾಪಿಸಿ ಗ್ರಾಹಕರಿಗೆ ಅರಿವು ಮೂಡಿಸಲಾಯಿತು.

ಈವೇಳೆ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪನಿರ್ದೇಶಕ ರಿಯಾಜ್, ಕಾನೂನು ಮಾಪನ ಶಾಸ್ತ್ರ ಇಲಾಖೆ ಸಹಾಯಕ ನಿಯಂತ್ರಕ ಮನೋಜ್ ಕುಮಾರ್, ವಕೀಲರ ಸಂಘದ ಅಧ್ಯಕ್ಷ ಗುಜ್ಜಲ ನಾಗರಾಜ್, ಕಾರ್ಯದರ್ಶಿ ಕೃಷ್ಣದೇವರಾಯಲು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಗ್ರಾಹಕರು ಉಪಸ್ಥಿತರಿದ್ದರು.

# 8ನೇ ರಾಜ್ಯ ಸಮ್ಮೇಳನ




• ಮಲ್ಲಮ್ಮ ನುಡಿ ವಾರ್ತೆ ಲಿಂಗಸೂಗೂರು

ಮಾರ್ಚ್ 30.31 ರಂದು ಕರ್ನಾಟಕ ರೈತ ಸಂಘದ 8 ನೇ ರಾಜ್ಯ ಸಮ್ಮೇಳನವನ್ನು ರಾಯಚೂರಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧ್ಯಕ್ಷ ಅಶೋಕ ನಿಲೋಗಲ್ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತಾಡಿದ ಅವರು ಕಾರ್ಪೊರೇಟ್ ಪರವಾದ ಕೃಷಿ ಕಾಯ್ದೆಗಳು ರದ್ದು ಪಡಿಸಬೇಕು ಎಂಬ ದ್ಯೇಯ ವಾಕ್ಯದೊಂದಿಗೆ ಮಾರ್ಚ್ 30.31 ರಂದು ರಾಯಚೂರು ನಗರದ ಅಯ್ಯಪ್ಪ ಸ್ವಾಮಿ ಕಲ್ಯಾಣ ಮಂಟಪ್ಪದಲ್ಲಿ ರಾಜ್ಯ ಮಟ್ಟದ 8 ನೇ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದ್ದು, ರೈತರು, ಕಾರ್ಮಿಕರು, ಪ್ರಗತಿಪರ ಚಿಂತಕರು, ವಿದ್ಯಾರ್ಥಿಗಳು, ಮಹಿಳೆಯರು ಸಮ್ಮೇಳನದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಕರೆ ನೀಡಿದರು. ಗೋಷ್ಠಿಯಲ್ಲಿ ಶೇಖರಯ್ಯ ಗೆಜ್ಜೆಲಗಟ್ಟ, ಚಿಟ್ಟಿಬಾಬು ಬುದಿವಾಳ ಕ್ಯಾಂಪ್, ಬಿ. ಎನ್ ಯರದಿಹಾಳ, ಹುಲಗಪ್ಪ ಸಿರವಾರ ಇದ್ದರು.

# ವಸತಿ ಶಾಲೆಗಳ 6ನೇ ತರಗತಿ ಪ್ರವೇಶ ಪರೀಕ್ಷೆ ಏಪ್ರಿಲ್ 12ಕ್ಕೆ

ರಾಯಚೂರು: ಇಲ್ಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2026–27ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ಪರೀಕ್ಷೆಯನ್ನು ಏಪ್ರಿಲ್ 12ರಂದು ಜಿಲ್ಲೆಯ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಏಕಕಾಲಕ್ಕೆ ಜರುಗಲಿದ್ದು, ಅರ್ಜಿ ಸಲ್ಲಿಸಿರುವ ಅರ್ಹ ವಿದ್ಯಾರ್ಥಿಗಳು ಈ ಪರೀಕ್ಷಗೆ ಕಡ್ಡಾಯವಾಗಿ ಹಾಜರಾಗುವಂತೆ ಕೋರಲಾಗಿದೆ.ಜಿಲ್ಲೆಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ರಾಯಚೂರು (ಬೋಳಮಾನದೊಡ್ಡಿ ರಸ್ತೆ), ಗಿಲ್ಲೇಸೂಗೂರು (ಚಂದ್ರಬಂಡಾ ರಸ್ತೆ), ಯರಮರಸ್ ಕ್ಯಾಂಪ್, ಗಿಲ್ಲೆಸುಗೂರು ಕ್ಯಾಂಪ್, ಮಾನವಿ, ಸಿಂಧನೂರು, ಚನ್ನಹಳ್ಳಿ, ಮಸ್ಕಿ, ಲಿಂಗಸೂಗೂರು, ಸಿರವಾರ, ದೇವದುರ್ಗ ಮತ್ತು ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ, ಯರಮರಸ್ ಕ್ಯಾಂಪ್ ರಾಯಚೂರಿನಲ್ಲಿ 6ನೇ ತರಗತಿಯಿಂದ 10ನೇ ತರಗತಿಯ ವರೆಗೆ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಅಲ್ಪಸಂಖ್ಯಾತರ ಸಮುದಾಯಕ್ಕೆ ಶೇ.75 ರಷ್ಟು ಸ್ಥಾನಗಳನ್ನು ಮತ್ತು ಶೇ.25 ರಷ್ಟು ಸ್ಥಾನಗಳನ್ನು ಇತರೆ ವರ್ಗದವರಿಗೆ ಮೀಸಲಿರಿಸಿ, ಪ್ರಸ್ತುತ ಕರ್ನಾಟಕದ ಸರ್ಕಾರದ/ಅಂಗೀಕೃತ ಶಾಲೆಗಳಲ್ಲಿ 5ನೇ ತರಗತಿಯಲ್ಲಿ ಉತ್ತೀರ್ಣರಾದ ಅರ್ಹ ವಿದ್ಯಾರ್ಥಿಗಳಿಂದ 6ನೇ ತರಗತಿ ಪ್ರವೇಶಕ್ಕಾಗಿ ಅಲ್ಪಸಂಖ್ಯಾತರ ಸಮುದಾಯದವರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬುದ್ದಿಸ್ಟ್, ಸಿಖ್ ಮತ್ತು ಪಾರ್ಸಿ ಅರ್ಹ ವಿದ್ಯಾರ್ಥಿಗಳು ಮತ್ತು ಪ.ಜಾತಿ/ಪ.ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳಿಗೆ ಆನ್‌ಲೈನ್ ಸೇವಾಸಿಂಧು ವಿಳಾಸ: Website:https://sevasindhuservices.karnataka.gov.in ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತು. ಅರ್ಜಿ ಸಲ್ಲಿಸಿರುವ ಅರ್ಹ ವಿದ್ಯಾರ್ಥಿಗಳಿಗೆ ದಿನಾಂಕ:12.04.2026 ಭಾನುವಾರದಂದು ಪ್ರವೇಶ

# ಸಮುದಾಯ ಭವನ ಕಾಮಗಾರಿಗೆ ಶಾಸಕ ಪ್ರಭು ಚವ್ಹಾಣ ಶಂಕುಸ್ಥಾಪನೆ



• ಮಲ್ಲಮ್ಮ ನುಡಿ ವಾರ್ತೆ ಔರಾದ(ಬಿ)

ಪಟ್ಟಣದಲ್ಲಿ 3 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಂಡಿರುವ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದ ನಿರ್ಮಾಣ ಕಾಮಗಾರಿಗೆ ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಇತ್ತೀಚೆಗೆ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಔರಾದನಲ್ಲಿ ಸುಂದರ ಹಾಗೂ ಭವ್ಯವಾದ ಅಂಬೇಡ್ಕರ್ ಭವನ ನಿರ್ಮಾಣವಾಗಬೇಕು ಎನ್ನುವುದು ನನ್ನ ಬಹಳ ದಿನಗಳ ಕನಸಾಗಿತ್ತು. ಹಿಂದೆ ಎರಡು–ಮೂರು ಸಲ ಅನುದಾನವನ್ನು ಮೀಸಲಿಟ್ಟಿದ್ದೆ. ಟೆಂಡರ್ ಕೂಡ ಆಗಿತ್ತು. ನಿವೇಶನ ಸಮಸ್ಯೆಯಿಂದಾಗಿ ಕೆಲಸ ಆಗಿರಲಿಲ್ಲ. ಇದೀಗ ಕಾಲ ಕೂಡಿ ಬಂದಿದೆ. 3 ಕೋಟಿ ರೂಪಾಯಿ ಅನುದಾನ ಒದಗಿಸಿದ್ದು, ಔರಾದ ಪಟ್ಟಣದಲ್ಲಿ ಭವ್ಯ ಹಾಗೂ ಸುಸಜ್ಜಿತ ಅಂಬೇಡ್ಕರ್ ಭವನ ನಿರ್ಮಾಣವಾಗಲಿದೆ ಎಂದು ಅವರು ಹೇಳಿದರು.

ನೂತನ ಅಂಬೇಡ್ಕರ್ ಭವನವು ಡಾ.ಬಿ.ಆರ್ ಅಂಬೇಡ್ಕರ್ ಅವರ ಚಿಂತನೆಗಳನ್ನು ಪಸರಿಸಲು ವೇದಿಕೆಯಾಗಲಿದೆ. ಸಮಾಜ ಬಾಂಧವರು ಸಭೆ–ಸಮಾರಂಭಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲ ಆಗುವ ರೀತಿಯಲ್ಲಿ ಕಟ್ಟಡವನ್ನು ವಿನ್ಯಾಸ ಮಾಡಲಾಗಿದೆ. ಈ ಕಟ್ಟಡ ಸುಂದರ ಮತ್ತು ಭವ್ಯವಾಗಿ ನಿರ್ಮಾಣಗೊಳ್ಳಬೇಕೆಂಬ ಸದಾಶಯ ಹೊಂದಿದ್ದು, ಭವನದ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿ ಮತ್ತಷ್ಟು ಅನುದಾನ ಬೇಕಿದಲ್ಲಿ ಒದಗಿಸಲು ಸಿದ್ದ ಎಂದು ಹೇಳಿದರು.

ಸ್ಥಳ ಪರಿಶೀಲನೆ: ಇದೇ ವೇಳೆ ಶಾಸಕರು ಅಂಬೇಡ್ಕರ್ ಭವನ ನಿರ್ಮಾಣ ಸ್ಥಳದಲ್ಲಿ ಸಂಚರಿಸಿ ಕಾಮಗಾರಿಯ ಬಗ್ಗೆ ಮಾಹಿತಿ ಪಡೆದರು. ಗುತ್ತಿಗೆದಾರರು ಇದನ್ನು ಸ್ವಂತ ಕಟ್ಟಡವೆಂದು ಭಾವಿಸಿ ಕೆಲಸ ಮಾಡಬೇಕು. ಮಹಾಜನತೆಯ ಬಹುಬೇಡಿಕೆಯ ಕಾಮಗಾರಿ ಇದಾಗಿದ್ದು, ಅಂದಾಜು ಪತ್ರಿಕೆಯಂತೆ ಎಲ್ಲ ಕೆಲಸಗಳು ಅಚ್ಚುಕಟ್ಟಾಗಿ ಆಗಬೇಕು. ಯಾವುದೇ ರೀತಿಯ ಲೋಪಗಳು ಉಂಟಾಗದಂತೆ ನೋಡಿಕೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಶಿವರಾಜ ಅಲ್ಮಾಜೆ, ಅರಹಂತ ಸಾವಳೆ, ಸಂಜು ವಡೆಯರ್, ಸೂರ್ಯಕಾಂತಸಿಂಗೆ, ಸೂರ್ಯಕಾಂತ ಅಲ್ಮಾಜೆ, ಬಾಬುರಾವ ತಾರೆ, ಯಾದು ಮೇತ್ರೆ, ಅಶೋಕರಾವ ಮೇತ್ರೆ, ಸುಜಿತ ರಾಠೋಡ, ಬಸವರಾಜ ಹಳ್ಳೆ ರತ್ನದೀಪ ಕಸ್ತೂರೆ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು, ವಿವಿಧ ಸಂಘಟನೆಗಳ ಮುಖಂಡರು, ಅಂಬೇಡ್ಕರ್ ಅನುಯಾಯಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# 75 ಮೇಲ್ಪಟ್ಟವರ ಮನೆ ಮನೆಗೆ ಪಡಿತರ ಕ್ರಮಕೈಗೊಳ್ಳಿ: ಚಿಮಕೋಡೆ

• ಮಲ್ಲಮ್ಮ ನುಡಿ ವಾರ್ತೆ ಬೀದರ




75 ವರ್ಷ ವಯಸ್ಸಿನ ಮೇಲ್ಪಟ್ಟ ಪಡಿತರ ಫಲಾನುಭವಿಗಳಿಗೆ ಮನೆ ಮನೆಗೆ ಪಡಿತರ ಧಾನ್ಯ ವಿತರಿಸುವ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಅಮೃತರಾವ ಚಿಮಕೊಡೆ ಸೂಚಿಸಿದರು.

ಅವರು ಮಂಗಳವಾರ ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳಾದ ಪಂಚಗ್ಯಾರಂಟಿ ಯೋಜನೆಗಳ ಕುರಿತು ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬೇಸಿಗೆ ಕಾಲ ಇರುವುದರಿಂದ ಪಡಿತರ ಧಾನ್ಯ ವಿತರಕರು ತಮ್ಮ ಅಂಗಡಿಗಳ ಮುಂದೆ ಪಡಿತರ ಧಾನ್ಯ ಫಲಾನುಭವಿಗಳಿಗೆ ತೊಂದರೆ ಆಗದಂತೆ ಕುಡಿಯುವ ನೀರು ಮತ್ತು ನೆರಳಿನ ವ್ಯವಸ್ಥೆ ಮಾಡಬೇಕು. ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಫಲಾನುಭವಿಗಳಿಗೆ ತಲುಪುವಂತಾಗಬೇಕೆಂದರು.

ಅನ್ನಭಾಗ್ಯ ಯೋಜನೆಯಡಿ ಒಟ್ಟು 13,13,305 ಫಲಾನುಭವಿಗಳಿದ್ದು, 3,57,286 ಪಡಿತರ ಚೀಟಿಗಳಿದ್ದು, ಅಂತ್ಯೋದಯ ಮತ್ತು ಬಿಪಿಎಲ್ ಆದ್ಯತಾ ಪಡಿತರ ಚೀಟಿದಾರರಿಗೆ 1 ಲಕ್ಷ 18 ಸಾವಿರ 80 ಕ್ವಿಂಟಲ್ ಅಕ್ಕಿಯನ್ನು ವಿತರಿಸಲಾಗುತ್ತಿದೆ. ಅಕ್ಟೋಬರ್.2025 ರ ಮಾಹೆಯಿಂದ ಒಟ್ಟು 10 ಕೆ.ಜಿ. ಅಕ್ಕಿಯನ್ನು ಮಾತ್ರ ವಿತರಿಸಲಾಗುತ್ತಿದೆ. ಪ್ರತಿ ಮಾಹೆಯಂತೆ ಮೃತ ಫಲಾನುಭವಿಗಳನ್ನು ಪರಿಶೀಲಿಸುತ್ತಿದ್ದು, ಇಲ್ಲಿಯವರೆಗೆ ಒಟ್ಟು 5004 ಜನ ಮೃತ ಫಲಾನುಭವಿಗಳ ಪಡಿತರ ಕಾರ್ಡ ರದ್ದುಗೊಳಿಸಲಾಗಿದೆ. ಇದರಿಂದ 500 ಕ್ವಿಂಟಲ್ ಅಕ್ಕಿ ಉಳಿತಾಯವಾಗಿದೆ.

ಗೃಹಲಕ್ಷ್ಮೀ ಯೋಜನೆಯಡಿಯಲ್ಲಿ 3,29,734 ಫಲಾನುಭವಿಗಳಿದ್ದು, 1751.40 ಕೋಟಿ ರೂ. ಫಲಾನುಭವಿಗಳಿಗೆ ಡಿಬಿಟಿ ಮುಖಾಂತರ ಅವರ ಖಾತೆಗೆ ಜಮಾ ಮಾಡಲಾಗಿದೆ. ಇಲ್ಲಿಯವರೆಗೆ ಮೃತ ವ್ಯಕ್ತಿಗಳ ಪರಿಷ್ಕರಣೆ ಮಾಡಲಾಗಿದ್ದು, ಜಿಲ್ಲೆಯಲ್ಲಿ ಒಟ್ಟು 5353 ಮೃತ ಫಲಾನುಭವಿಗಳಿದ್ದು ಮರಣ ಹೊಂದಿದ ಫಲಾನುಭವಿಗಳ ಸೇವಾ ಸಿಂಧು ಲಾಗಿನ್‌ನಲ್ಲಿ ಇಲ್ಲಿಯವರೆಗೆ 2004 ಫಲಾನುಭವಿಗಳ ಅಪಡೇಟ್ ಮಾಡಲಾಗಿದೆ. 3349 ಫಲಾನುಭವಿಗಳು ಮರಣ ಹೊಂದಿರುವ ಫಲಾನುಭವಿಗಳ ಸೇವಾ ಸಿಂಧು ಲಾಗಿನಲ್ಲಿ ಅಪಡೇಟ್ ಮಾಡಬೇಕಾಗಿದೆ. ಈಗಾಗಲೇ ಡಿಸೆಂಬರ್‌ವರೆಗೆ ಗೃಹಲಕ್ಷ್ಮೀ ಹಣ ಪಾವತಿಸಲಾಗಿದ್ದು, ಜನೇವರಿ ಮಾಹೆಯ ಗೃಹಲಕ್ಷ್ಮೀ ಮೊತ್ತ 2000 ರೂ. 3–4 ದಿನಗಳಲ್ಲಿ ಫಲಾನುಭವಿಗಳ ಖಾತೆಗೆ ಜಮೆ ಆಗಲಿದೆ.

ಶಕ್ತಿ ಯೋಜನೆಯಡಿ ಜಿಲ್ಲೆಯಲ್ಲಿ ದಿನಾಂಕ: 11–06–2023 ರವರೆಗೆ ಮಹಿಳಾ ಮತ್ತು ಬಾಲಕಿಯರು ಒಟ್ಟು ಸೇರಿ 11.70 ಕೋಟಿ ಜನರು ಈ ಸೌಲಭ್ಯವನ್ನು ಪಡೆದಿರುತ್ತಾರೆ. ಜಿಲ್ಲೆಯಲ್ಲಿ ಪ್ರತಿ ದಿನ ಸರಾಸರಿ 1.16 ಲಕ್ಷ ಮಹಿಳೆಯರು ಪ್ರಯಾಣಿಸುತ್ತಿದ್ದು, 3,45.88 ಕೋಟಿ ಮೊತ್ತ ಇಲಾಖೆಗೆ ಸಂದಾಯವಾಗಿರುತ್ತದೆ.


ಗೃಹಜ್ಯೋತಿ ಯೋಜನೆಯಡಿ 3,29,750 ಫಲಾನುಭವಿಗಳಿದ್ದು, ಫೆಬ್ರವರಿ ಅಂತ್ಯದವರಗೆ 495.80 ಕೋಟಿ ರೂ. ಇಲಾಖೆಗೆ ಹಣ ಸಂದಾಯವಾಗಿದೆ. ಯುವನಿಧಿ ಯೋಜನೆಯಡಿಯಲ್ಲಿ ಪದವಿ 16188, ಡಿಪ್ಲೋಮಾ 408 ಫಲಾನುಭವಿಗಳು ಸೇರಿ ಒಟ್ಟು 16,596 ವಿದ್ಯಾರ್ಥಿಗಳಿಗೆ 40.99 ಹಣ ಅವರ ಖಾತೆಗೆ ಡಿಬಿಟಿ ಮೂಲಕ ಸಂದಾಯ ಮಾಡಲಾಗಿರುತ್ತದೆ ಎಂದರು.

ಜಿಲ್ಲಾ ಪಂಚಾಯತ ಕಾರ್ಯನಿರ್ವಹಣಾ ಅಧಿಕಾರಿ ಡಾ.ಗಿರೀಶ ಬದೋಲೆ ಮಾತನಾಡಿ, ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ನಡೆಯುತ್ತಿದ್ದು, ಬಸ್ಸುಗಳ ಸರಿಯಾದ ಸಮಯಕ್ಕೆ ಓಡಿಸಿ ವಿದ್ಯಾರ್ಥಿಗಳೀಗೆ ಪರೀಕ್ಷೆ ಬರೆಯಲು ತೊಂದರೆ ಆಗದಂತೆ ನೋಡಿಕೊಳ್ಳಬೇಕು. ಶಕ್ತಿ ಹಾಗೂ ಗೃಹಲಕ್ಷ್ಮೀ ಯೋಜನೆಗಳಲ್ಲಿ ಪ್ರತಿ ಮಾಹೆವಾರು ಮೃತ ಫಲಾನುಭವಿಗಳ ಕುರಿತು ಪರಿಷ್ಕರಣೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.ಇದೇ ಸಂದರ್ಭದಲ್ಲಿ ಬಸ್ ನಿಲ್ದಾಣಗಳಲ್ಲಿ ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ ಹಾಗೂ ಕೆಲವು ಕಡೆ ಬಸ್ಸ್ ನಿಲುಗಡೆ ಕುರಿತು ಗ್ಯಾರಂಟಿ ಯೋಜನೆಗಳ ಸದಸ್ಯರು ಸಭೆಗೆ ಮಾಹಿತಿ ನೀಡಿದರು.

ಈ ಸಭೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿ ಕಿಶೋರ ದುಬೆ, ಆಹಾರ ಇಲಾಖೆಯ ಉಪನಿರ್ದೇಶಕರಾದ ಪ್ರವೀಣ ಬರಗಲ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಶ್ರೀಧರ ಸೇರಿದಂತೆ ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾ ಉಪಾಧ್ಯಕ್ಷರು, ತಾಲ್ಲೂಕಾಧ್ಯಕ್ಷರು, ಸದಸ್ಯರುಗಳು ಹಾಗೂ ಇನ್ನಿತರ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮುಖಂಡರು ಸದರಿ ಸಭೆಗೆ ಹಾಜರಾಗಿ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕೆಂದು ಬೀದರ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿಗಳ ಸುರಕ್ಷತೆಗಾಗಿ ಪೊಲೀಸ್ ಇಲಾಖೆಗೆ ಮನವಿ



• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ಪಟ್ಟಣದಲ್ಲಿ ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ಎಸ್.ಎಫ್.ಎಸ್ ಶಾಲೆಯಿಂದ ವಿದ್ಯಾನಂದ ಗುರುಕುಲ ಶಾಲೆಯವರೆಗೆ ವಾಹನಗಳ ವೇಗ ನಿಯಂತ್ರಣ ಹಾಗೂ ಸಂತೆ ಸಮಯದಲ್ಲಿ ಸಂಚಾರ ವ್ಯವಸ್ಥೆ ಸುಧಾರಣೆಗಾಗಿ ಕುಕನೂರ ಹಿತರಕ್ಷಣಾ ಸಮಿತಿಯ ಸದಸ್ಯರು ಇಂದು ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಿದರು.

ಸಮಿತಿಯ ಸದಸ್ಯರು ಪೊಲೀಸ್ ಇನ್ಸ್‌ಪೆಕ್ಟರ್ ಅವರಿಗೆ ಮನವಿ ಪತ್ರವನ್ನು ಹಸ್ತಾಂತರಿಸಿ, ಶಾಲಾ ಪ್ರದೇಶದಲ್ಲಿ ಹೆಚ್ಚುತ್ತಿರುವ ವಾಹನಗಳ ವೇಗದಿಂದ ವಿದ್ಯಾರ್ಥಿಗಳಿಗೆ ಅಪಾಯ ಉಂಟಾಗುತ್ತಿರುವುದನ್ನು ವಿವರಿಸಿದರು. ಈ ಹಿನ್ನೆಲೆಯಲ್ಲಿ ಶಾಲಾ ವಲಯವನ್ನು "ಖಭಿಬಂಟ ಚಿಂಟಿಜ ▯ ಆಡಿುತಜ ಖಟಂತಿ" ಎಂದು ಘೋಷಿಸಿ, ಬ್ಯಾರಿಕೆಡ್‌ಗಳನ್ನು ಅಳವಡಿಸುವಂತೆ ತಿಳಿಸಿದರು. ಇದಲ್ಲದೆ, ಪ್ರತಿ ಶುಕ್ರವಾರ ನಡೆಯುವ ತರಕಾರಿ ಸಂತೆ ಸಂದರ್ಭದಲ್ಲಿ ರಸ್ತೆ ಎರಡೂ ಬದಿಗಳಲ್ಲಿ ವ್ಯಾಪಾರ ನಡೆಯುತ್ತಿರುವುದರಿಂದ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ. ಆದ್ದರಿಂದ, ವೀರಭದ್ರಪ್ಪ ವೃತ್ತದಿಂದ ಂಟಿಜ–ತಿಚಿಥಿ ವ್ಯವಸ್ಥೆ ಜಾರಿಗೊಳಿಸಿ, ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸುವಂತೆ ಮನವಿ ಸಲ್ಲಿಸಲಾಯಿತು.

ಪೊಲೀಸ್ ಅಧಿಕಾರಿಗಳು ಮನವಿಯನ್ನು ಸ್ವೀಕರಿಸಿ, ಸಮಸ್ಯೆಯನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಮಿತಿಯ ಸಹ ಸಂಚಾಲಕರಾದ ಮಂಜುನಾಥ ನಾಡಗೌಡ, ಪದಾಧಿಕಾರಿಗಳಾದ ಅಂದಪ್ಪ ಜವಳಿ, ರಶೀದ್ ಹಣಜಗೇರಿ, ಕಳಕೇಶ್ ಹತ್ತಿಕಟಗಿ, ಗಂಗಾಧರ್ ನಾರಾಯಣಿ, ದೇವಪ್ಪ ರಾಟಿಮನಿ, ಕನಕಪ್ಪ ಬ್ಯಾಡರ್ ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.


ಕರ್ನಾಟಕ ಸರ್ಕಾರ

**ಆಯುಷ್ ಇಲಾಖೆ**

**ಜಿಲ್ಲಾ ಆಯುಷ್ ಕಛೇರಿ, ಕಲಬುರಗಿ.**

ಜಿಲ್ಲಾ ಆಯುಷ್ ಕಾರ್ಯಾಲಯ, ಸರ್ಕಾರಿ ಯುನಾನಿ ಆಸ್ಪತ್ರೆ (50 ಹಾಸಿಗೆ) ಮೊದಲನೇ ಮಹಡಿ,
ಆಳಂದ ಚೆಕ್ ಪೋಸ್ಟ ಹತ್ತಿರ, ದುಬೈ ಕಾಲೋನಿ ಕಲಬುರಗಿ–585101
ದೂರವಾಣಿ/ಫ್ಯಾಕ್ಸ ಸಂ:08472–224314 ಇ–ಮೇಲ್: dao.gulbarga09@gmail.com

ಸಂ:ಜಿಆಅ/ಕ/ಸಿಬ್ಬಂದಿ–5/ಹೊ.ಗು/19/2025–26 ದಿನಾಂಕ: 23–03–2026

**:: ಅಲ್ಪಾವಧಿ ಮೂರನೇ ಬಾರಿಗೆ (Call-3) ಇ–ಟೆಂಡರ್ ಪ್ರಕಟಣೆ ::**

ಕಲಬುರಗಿ ಜಿಲ್ಲೆಯಲ್ಲಿ ಆಯುಷ್ ಇಲಾಖೆ ಅಧೀನದಲ್ಲಿ ಬರುವ ಕಚೇರಿ/ಚಿಕಿತ್ಸಾಲಯ/ಆಸ್ಪತ್ರೆಗಳಲ್ಲಿ ಗ್ರೂಪ್–ಡಿ ವೃಂದದ ಎದುರು ಹುದ್ದೆಗಳ ಸ್ಥಳಗಳಲ್ಲಿ ಕೆಲಸ ನಿರ್ವಹಿಸಲು ಸಿಬ್ಬಂದಿಗಳ ಸೇವೆ ಅವಶ್ಯಕವಿದ್ದು ಆಯುಷ್ ಇಲಾಖೆಯಿಂದ ಖಾಯಂ ಸಿಬ್ಬಂದಿ ನೇಮಕವಾಗುವವರೆಗೆ ತಾತ್ಕಾಲಿಕವಾಗಿ 2026–2027 & 2027–28ನೇ ಸಾಲಿಗೆ ಒಂದು ವರ್ಷದ ಅವಧಿಗೆ ಮಾತ್ರ ಒಟ್ಟು 18 ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಂಸ್ಥೆಯ ಮುಖಾಂತರ ಸೇವೆ ಪಡೆಯಲು ಅರ್ಹ ಸಂಸ್ಥೆಯವರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮೂರನೇ ಬಾರಿಗೆ (Call-3) ಇ–ಟೆಂಡರ್ ಪ್ರಕಟಣೆ ಅಹ್ವಾನಿಸಲಾಗಿದೆ. 1) ಟೆಂಡರ್ ಪ್ರಕಟಣೆ ಅಥವಾ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ: ಸಂ:ಜಿಆಅ/ಕ/ಸಿಬ್ಬಂದಿ–5/ಹೊ.ಗು/19/2025–26 ದಿನಾಂಕ:23–03–2026, 2) ಇ–ಟೆಂಡರ್ ಅಂದಾಜು ಮೊತ್ತ: **49,06,000/–**, 3) ಹೊರ ಸಂಪನ್ಮೂಲ ನೌಕರರ ಒಟ್ಟು ಸಂಖ್ಯೆ: 18, 4) ಇ–ಟೆಂಡರ್ ಫಾರ್ಮ ಬೆಲೆ: ಇ–ಪ್ರೊಕ್ಯೂರ್‌ಮೆಂಟ್‌ನಂತೆ, 5) ಇ–ಟೆಂಡರ್ ಫಾರ್ಮ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 24–03–2026, 6) ಇ–ಟೆಂಡರ್ ಫಾರ್ಮ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ವೇಳೆ: 02–04–2026 ಸಾ.4.00 ಗಂಟೆಯವರೆಗೆ 7) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 04–04–2026, 8) ಆರ್ಥಿಕ ಲಕೋಟೆ ತೆರೆಯುವ ದಿನಾಂಕ: 07–04–2026 ಬೆ. 11.00 ಗಂಟೆಯ ನಂತರ, 9) ಟೆಂಡರದೊಂದಿಗೆ ಪಾವತಿಸುವ EMD ಮೊತ್ತ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟನಲ್ಲಿ ಪಾವತಿಸಿದ ಪ್ರತಿ ಲಗತ್ತಿಸುವುದು) : ರೂ. 122650/–, 10) ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ, ವಿಳಾಸ ಹಾಗೂ ದೂರವಾಣಿ ಸಂಖ್ಯೆ: ಜಿಲ್ಲಾ ಆಯುಷ್ ಕಛೇರಿ, ಕಲಬುರಗಿ. ಜಿಲ್ಲಾ ಆಯುಷ್ ಕಾರ್ಯಾಲಯ, ಸರ್ಕಾರಿ ಯುನಾನಿ ಆಸ್ಪತ್ರೆ (50 ಹಾಸಿಗೆ) ಮೊದಲನೇ ಮಹಡಿ, ಆಳಂದ ಚೆಕ್‌ಪೋಸ್ಟ ಹತ್ತಿರ, ದುಬೈ ಕಾಲೋನಿ ಕಲಬುರಗಿ 585101, ದೂರವಾಣಿ ಸಂಖ್ಯೆ: 08472–224314 11) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವೆಬ್‌ಸೈಟ್ ವಿಳಾಸ: https://kppp.karnataka.gov.in

ಒಂದು ವೇಳೆ ತಾಂತ್ರಿಕ ಹಾಗೂ ಹಣಕಾಸು ಬಿಡ್‌ನ ತೆರೆಯುವ ದಿನಾಂಕದಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ, ಆಡಳಿತಾತ್ಮಕ ಹಾಗೂ ತಾಂತ್ರಿಕ ತೊಂದರೆಯಾದಲ್ಲಿ ಮುಂದಿನ ಕರ್ತವ್ಯದ ದಿನದಂದು ಟೆಂಡರ್ ತೆರೆಯಲಾಗುವುದು.

**ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು,**
**ಜಿಲ್ಲಾ ಆಯುಷ್ ಕಚೇರಿ, ಕಲಬುರಗಿ**

ವಾ.ಸಾ.ಸಂ.ಇ/ಕಲಬುರಗಿ/1207/ಕೆ.ಎಸ್.ಎಂ.ಸಿ.&ಎ/2025–26


# ರಾಜ್ಯ ಎಸ್ ಎಸ್ ಕೆ ಅಭಿವೃದ್ಧಿ ಹೋರಾಟ ಸಮಿತಿ ರಚನೆ

ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ , ಅತ್ಯಂತ ಹಿಂದುಳಿದ ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜ ರಾಜ್ಯದ ಹಲವಾರು ಕಡೆಗಳಲ್ಲಿ ಸಣ್ಣಪುಟ್ಟ ವ್ಯಾಪಾರ ಮಾಡಿ ಬದುಕುತ್ತಿರುವ ಈ ಸಮಾಜಕ್ಕೆ ಸರಕಾರವು ಯಾವುದೇ ನಿಗಮ ಮಂಡಳಿ ಸ್ಥಾಪಿಸದೆ ನೈತಿಕವಾಗಿ ಸಮಾಜವು ಬಲವಿಲ್ಲದಂತಾಗಿದೆ.

ಪ್ರತಿಯೊಂದು ಹೋರಾಟದಿಂದಲೆ ಸಾದ್ಯ ಎಂಬ ಪರಿಕಲ್ಪನೆ ಹಿನ್ನೆಲೆಯಲ್ಲಿ ಸಮಾಜದ ಮೂಲ ಪುರುಷ ಶ್ರೀಸಹಸ್ರಾರ್ಜುನ ಮಹಾರಾಜರ ಜಯಂತಿ ಸರಕಾರದಿಂದ ಆಚರಿಸಬೇಕು ಎಂದು ಈಗಾಗಲೇ ರಾಜ್ಯದ ಎಲ್ಲಾ ಪಂಚಕಮೀಟಿಯವತಿಯಿಂದಾ ಎಲ್ಲಾ ಕ್ಷೇತ್ರದ ಶಾಸಕ ಸಚಿವರಿಗೆ ಮನವಿಗಳನ್ನು ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲಾ ಮತ್ತು ಈ ಸಮಾಜದ ಅಭಿವೃದ್ಧಿಗೆ ರಾಜ್ಯ ಸರಕಾರವು ಪ್ರತ್ಯೇಕವಾಗಿ ನಿಗಮ ಮಂಡಳಿಯನ್ನು ಸ್ಥಾಪಿಸಿ ನಿರುದ್ಯೋಗ ನಿವಾರಣೆಗೆ ವ್ಯಾಪಾರ ವಹಿವಾಟಿಗೆ ಅನುಕೂಲ ಮಾಡಿಕೊಡಬೇಕು,

ಹಾಗೂ ಈ ಸಮಾಜವನ್ನು ಎಸ್ಟಿ ವರ್ಗಕ್ಕೆ ಸೇರಿಸಿ ಪ್ರತ್ಯೇಕ ಮೀಸಲಾತಿ ನೀಡಿ ವಿದ್ಯಾವಂತ ಯುವಕರಿಗೆ ಸರಕಾರಿ ಉದ್ಯೋಗ ಸಿಗುವಂತೆ ಮಾಡಬೇಕು. ಎಂಬಿತ್ಯಾದಿ ಬೇಡಿಕೆಗಳನ್ನು ಇಟ್ಟುಕೊಂಡು ರಾಜ್ಯದ ವಿವಿಧ ಜಿಲ್ಲೆಗಳಿಂದಾ ಸಮಾಜದ ಮುಖಂಡರನ್ನು ಆಹ್ವಾನಿಸಿ ಕೊಪ್ಪಳದ ಭಾಗ್ಯನಗರದಲ್ಲಿನ ಶ್ರೀ ಅಂಭಾಭವಾನಿ ದೇವಸ್ಥಾನದಲ್ಲಿ ಇಂದು ನಡೆದ ರಾಜ್ಯ ಎಸ್ ಎಸ್ ಕೆ ಅಭಿವೃದ್ಧಿ ಹೋರಾಟ ಸಮಿತಿ ಅಸ್ತಿತ್ವಕ್ಕೆ ತರಲಾಯಿತು.

ಕರ್ನಾಟಕ ರಾಜ್ಯ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ರಾಜ್ಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಸಮಾಜದ ಗುರು ಹಿರಿಯರು, ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸರ್ವ ಸಮಾಜದ ಬಂಧುಗಳ ಸಮ್ಮುಖದಲ್ಲಿ ಪಾರದರ್ಶಕವಾಗಿ ಆಯ್ಕೆ ಮಾಡಲಾಯಿತು.

ಈ ಒಂದು ಕಾರ್ಯಕ್ರಮದಲ್ಲಿ ಎಲ್ಲರ ಪರವಾನಿಗೆ ಪಡೆದು, ಎಲ್ಲರ ಸಹಮತದೊಂದಿಗೆ ಹಾಲಿ ರಾಜ್ಯ ಸಂಚಾಲಕರಾದ ಹನುಮಂತಸಾ ಸಿ. ನಿರಂಜನ ಸಾ. ಹುಬ್ಬಳ್ಳಿ ಇವರ ಸೂಚನೆ ಮೇರಿಗೆ, ಕರ್ನಾಟಕ ರಾಜ್ಯ ಅಧ್ಯಕ್ಷರನ್ನಾಗಿ ಕೃಷ್ಣಾಸಾ. ಎಂ. ಪವಾರ(ಏಒಕ) ಸಾ. ರಾಣೆಬೆನ್ನೂರು ಇವರನ್ನು ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ನಂತರ ಅಲ್ಲಿ ಉಪಸ್ಥಿತರಿದ್ದ ನಮ್ಮ ಎಲ್ಲಾ ಭಾಗದ ಅಧ್ಯಕ್ಷರ ಒಪ್ಪಿಗೆಯನ್ನು ಪಡೆದು ನಾವು ರಾಜ್ಯ ಗೌವರಾಧ್ಯಕ್ಷರನ್ನು

ಜವಾಹರಲಾಲಸಾ ಅಂಟಾಳಮರದ ಸಾ. ಕೊಪ್ಪಳ ಇವರನ್ನು ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು,

ರಾಜ್ಯ ಉಪಾಧ್ಯಕ್ಷರನ್ನಾಗಿ ಶರಣುಸಾ ನಗಾರಿ, ಹಾಗೂ ಎಲ್ಲೂಸಾ ಬದಿ, ಇವರನ್ನು ರಾಜ್ಯ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ರಾಜ್ಯ ಸಂಚಾಲಕರನ್ನಾಗಿ ಹನುಮಂತಸಾ ಸಿ. ನಿರಂಜನ, ಇವರನ್ನು ಸರ್ವಾನುಮತದಿಂದ ಸಭೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನಾಗರಾಜ ಹನಮಂತಸಾ ನಗರಿ, ಮತ್ತು ಸಹ ಕಾರ್ಯದರ್ಶಿಯಾಗಿ ರವಿ ದಾಮಜಿ ಸಾ. ಬಾಗಲಕೋಟೆ ಇವರನ್ನು ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ರಾಘವೇಂದ್ರ ಟಿ. ಕಬಾಡಿ ಇವರನ್ನು ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ರಾಜ್ಯ ಖಜಾಂಚಿಯಾಗಿ ನಾರಾಯಣಸಾ ಪವಾರ, ಮತ್ತು ಸಹ ಖಜಾಂಚಿಯಾಗಿ ಸಂಜೀವ ಖಟವಟೆ, ಇವರನ್ನು ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಮುಂಬರುವ ದಿನಗಳಲ್ಲಿ ಬೃಹತ್ ಸಮಾವೇಶ ಮಾಡುವ ಮೂಲಕ ಸಮಾಜದ ಸಂಘಟನೆ ಮತ್ತು ಬೇಡಿಕೆಗಳ ಬಗ್ಗೆ ರಾಜ್ಯ ಸರಕಾರದ ಗಮನಸೆಳೆಯುವ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಸಭೆಗಳನ್ನು ಮಾಡಿ ಹೋರಾಟಗಳನ್ನು ಹಂತ ಹಂತವಾಗಿ ಹಮ್ಮಿಕೊಳ್ಳುವ ಜೋತೆಗೆ ಸಂಘಟನೆಗೆ ರಾಜ್ಯ ಪ್ರವಾಸ ಕೈಗೊಳ್ಳಲು ನಿರ್ಣಯ ಮಾಡಿದರು. ಆರಂಭದಲ್ಲಿ ಸಮಾಜದ ವಿವಿಧ ಭಾಗಗಳಿಂದ ಬಂದ ಅಧ್ಯಕ್ಷರು ಮುಖಂಡರು ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

# ಸಿಐಡಿ ತನಿಖೆಗೆ ವರ್ಗಾವಣೆ: ಸುಮನ್

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಬಳ್ಳಾರಿ ವಲಯ ಕಚೇರಿಯಲ್ಲಿ ರೂ.16 ಕೋಟಿಗೂ ಅಧಿಕ ಹಣದ ವಂಚನೆ ಪ್ರಕರಣ ಬೆಳಕಿಗೆ ಬಂದಿದ್ದು, ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡುವ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ||ಸುಮನ್ ಡಿ. ಪನ್ನೇಕರ್ ತಿಳಿಸಿದ್ದಾರೆ.

ಬಳ್ಳಾರಿ ನಗರದ ದುರ್ಗಮ್ಮಗುಡಿ ಸಮೀಪದ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, 2022ರಿಂದ 2026ರ ಅವಧಿಯಲ್ಲಿ ಮೂರು ಮಂದಿ ಎಕ್ಸಿಕ್ಯೂಟಿವ್ ಎಂಜಿನಿಯರ್‌ಗಳ ಕಾರ್ಯಾವಧಿಯ ವೇಳೆ ಕೆಐಎಡಿಬಿ ವಲಯ ಕಚೇರಿಯ ಗುತ್ತಿಗೆ ನೌಕರರು, ಇತರೆ ಸಿಬ್ಬಂದಿ ಹಾಗೂ ಬ್ಯಾಂಕ್ ಸಿಬ್ಬಂದಿ ಸೇರಿಕೊಂಡು

ನಕಲಿ ಸಹಿ ಬಳಸಿಕೊಂಡು ಮಂಡಳಿಯ ಖಾತೆಯಿಂದ ರೂ.16,17,98,916 ಹಣವನ್ನು ಸಂಬಂಧವಿಲ್ಲದ ಖಾತೆಗಳಿಗೆ ವರ್ಗಾವಣೆ ಮಾಡಿ ವಂಚನೆ ನಡೆಸಿರುವ ಬಗ್ಗೆ ದೂರು ದಾಖಲಾಗಿದೆಯೆಂದು ತಿಳಿಸಿದರು.'

ಈ ಸಂಬಂಧ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 65/2026 ಅಡಿಯಲ್ಲಿ ವಿವಿಧ ಭಾರತೀಯ ನ್ಯಾಯ ಸಂಹಿತೆ (ಃಓಖ) ಕಲಂಗಳಡಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ. ಆಂತರಿಕ ಲೆಕ್ಕಪರಿಶೋಧನೆ ವೇಳೆ ಈ ಭಾರಿ ವಂಚನೆ ಬೆಳಕಿಗೆ ಬಂದಿದ್ದು, ಪ್ರಸ್ತುತ ಪ್ರಕರಣ ಪ್ರಾಥ 'ಮಿಕ ತನಿಖೆಯ ಹಂತದಲ್ಲಿದ್ದು ಆರೋಪಿಗಳ ಪತ್ತೆ ಕಾರ್ಯ ಮುಂದುವರಿದಿದೆ ಎಂದು ಹೇಳಿದರು.

ವಂಚನೆ ಮೊತ್ತ ರೂ.15 ಕೋಟಿಗೂ ಅಧಿಕವಾಗಿರುವ ಹಿನ್ನೆಲೆಯಲ್ಲಿ ಪೊಲೀಸ್ ಪ್ರಧಾನ ಕಚೇರಿಯ ಆದೇಶದಂತೆ ಪ್ರಕರಣವನ್ನು ಸಿಐಡಿಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಕರಣದ ಸಂಪೂರ್ಣ ಸತ್ಯಾಂಶ ಹೊರತರಲು ಸಮಗ್ರ ತನಿಖೆ ನಡೆಸಲಾಗುತ್ತದೆ ಎಂದು ಎಸ್‌ಪಿ ಸ್ಪಷ್ಟಪಡಿಸಿದರು.

# ಕೋಟಿ ಕೋಟಿ ಹಣ ಗುಳುಂ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಇತನ ಹೆಸರು ಸಂತೋಷ್ ಕುಮಾರ್, ಕೆಆರ್ ಎಸ್ ಪಕ್ಷದ ಎಸ್ಸಿ ಎಸ್ಟಿ ಘಟಕದ ರಾಜ್ಯ ಉಪಾಧ್ಯಕ್ಷನಾಗಿದ್ದ. ಪ್ರಾಮಾಣಿಕತೆ ಬಗ್ಗೆ ಅನೇಕ ಅಧಿಕಾರಿಗಳಿಗೆ ಪಾಠ ಹೇಳುತ್ತಿದ್ದ. ಭ್ರಷ್ಟಾಚಾರದ ಬಗ್ಗೆ ಭಾಷಣ ಮಾಡುತ್ತಿದ್ದ. ಆದರೆ ಈತನೇ ಕೆಎಐಡಿ ಗೆ ಸಂಬಂಧಿಸಿದ ಕೋಟಿ, ಕೋಟಿ ರೂ ಲಪಟಾಯಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಕೆಎಐಡಿ ಬಳ್ಳಾರಿ ವಲಯ ಕಚೇರಿಯಲ್ಲಿ ಗುತ್ತಿಗೆ ನೌಕರನಾಗಿದ್ದ ಈ ಸಂತೋಷ್ ಕಳೆದ 2022 ರಿಂದ 26 ರ ವರೆಗೆ 16.7 ಕೋಟಿ ರೂ ವಂಚನೆ ಮಾಡಿರುವ ಬಗ್ಗೆ ಎಪಿಎಂಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

15 ಕೋಟಿ ರೂ ಮೇಲೆ ವಂಚನೆ ಪ್ರಕರಣ ಇದಾಗಿರುವುದರಿಂದ ಈ ಕೇಸು ಸಿಐಡಿ ತನಿಖೆಗೆ ನೀಡಲಿದೆಯಂತೆ. ಪ್ರಕರಣ ದಾಖಲಾದ ಮೇಲೆ ಈ ಸಂತೋಷ್ ನಾಪತ್ತೆಯಾಗಿದ್ದಾನೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಬಳ್ಳಾರಿ ವಲಯ ಕಛೇರಿಯಲ್ಲಿನ ಅಧಿಕಾರಿಗಳ ನಕಲಿ ಸಹಿ ಮಾಡಿ ಹಣ ಲಪಟಾಯಿಸಿದ್ದಾನಂತೆ. ಇದು ಅಂತರಿಕ ಲೆಕ್ಕಪರಿಶೋಧನೆಯ ಸಮಯದಲ್ಲಿ ಬೆಳಕಿಗೆ ಬಂದಿದೆ. ಸಂತೋಷ್ ಜೊತೆಗೆ ಯೂನಿಯನ್ ಬ್ಯಾಂಕ್ ಸಿಬ್ಬಂದಿ ಸಹ ಇದರಲ್ಲಿ ಪಾಲುದಾರರಾಗಿದ್ದಾರಂತೆ.

ಹಣ ಲಪಟಾಯಿಸುವ ಪ್ರಕ್ರಿಯೆ 2022 ರಿಂದಲೂ ನಡೆದಿದ್ದರೂ ಮೇಲಾಧಿಕಾರಿಗಳ ಗಮನಕ್ಕೆ ಯಾಕೆ ಬರಲಿಲ್ಲ ಎಂಬ ಪ್ರಶ್ನೆಯೂ ಉದ್ಭವವಾಗುತ್ತದೆ. ಅಲ್ಲದೆ ಆಂತರಿಕ ಲೆಕ್ಕ ಪರಿಶೋಧನೆ 2022 ರಿಂದ ನಡೆದಿರಲಿಲ್ಲವೇ, ನಡೆದಿದ್ದರೆ ಅಂತರಿಕ ಪರಿಶೋದನೆ ನಡೆಸಿದವರೂ ಏಕೆ ಆಗ ಸುಮ್ಮನಿದ್ದರು ಎಂಬ ಪ್ರಶ್ನೆ ಕಾಡುತ್ತದೆ.

ನಮ್ಮದು ಪ್ರಾಮಾಣಿಕ ಪಕ್ಷ ಉಳಿದವರೆಲ್ಲ ಭ್ರಷ್ಟರು ಎಂಬಂತೆ ಬಿಂಬಿಸಿಕೊಳ್ಳುವ ಕೆಆರ್ ಎಸ್ ಪಕ್ಷ ದಿಂದ ಈ ಸಂತೋಷ್ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಹಗರಿಬೊಮ್ಮನಹಳ್ಳಿ ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದರು. ಒಂದು ಕಡೆ ಕೆಎಐಡಿ ಹಣ ನುಂಗುತ್ತ. ಮತ್ತೊಂದು ಕಡೆ ಚುನಾವಣೆಯಲ್ಲಿ ನಾನು ಪ್ರಾಮಾಣಿಕವಾಗಿ ಇರುತ್ತೇನೆ ಎಂದು ಮತ ಕೇಳಿದ್ದು ಮಾತ್ರ ವಿಪರ್ಯಾಸ ಎನ್ನಬಹುದು.

# ವ್ಯಕ್ತಿ ಕಾಣೆ: ಪತ್ತೆಗೆ ಸಹಕರಿಸಲು ಮನವಿ

• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ



ಕೊಪ್ಪಳದ ಬೆಂಕಿನಗರದ ನಿವಾಸಿ 54 ವರ್ಷದ ಖಾಜಾ ಹುಸೇನ್ ತಂದೆ ಮಾಬು ಸಾಬ ಕಳಸಾಪೂರ ಎಂಬ ವ್ಯಕ್ತಿಯು ಕಾಣೆಯಾಗಿದ್ದು, ಪತ್ತೆಗೆ ಸಹಕರಿಸಲು ಕೊಪ್ಪಳ ನಗರ ಪೊಲೀಸ್ ಠಾಣಾಧಿಕಾರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಖಾಜಾ ಹುಸೇನ್ ಎಂಬ ವ್ಯಕ್ತಿಯು 2024ರ ಅಕ್ಟೋಬರ್ 25 ರಂದು ಮಧ್ಯಾಹ್ನ 2 ಗಂಟೆಗೆ ಬಜಾರಕ್ಕೆ ಹೋಗಿ ಬರುತ್ತೇನೆ ಎಂದು ಹೇಳಿ ಹೋದವರು ವಾಪಸ್ ಮನೆಗೆ ಬಂದಿರುವುದಿಲ್ಲ ಎಂದು ಕಾಣೆಯಾದ ವ್ಯಕ್ತಿಯ ಪತ್ನಿ ಶಬನಾ ಬೇಗಂ ಅವರು ಪೊಲೀಸ್ ಠಾಣೆಗೆ ದೂರು ನೀಡಿದ್ದು, ಕೊಪ್ಪಳ ನಗರ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ 13/2025 ಕಲಂ ಮನುಷ್ಯ ಕಾಣೆ ರಿತ್ಯ ಪ್ರಕರಣ ದಾಖಲಾಗಿದೆ. ಈ ವ್ಯಕ್ತಿಯು ಇಲ್ಲಿಯವರೆಗೆ ಪತ್ತೆಯಾಗಿರುವುದಿಲ್ಲ.

ಕಾಣೆಯಾದ ವ್ಯಕ್ತಿಯ ಚಹರೆ: ಖಾಜಾ ಹುಸೇನ್ ತಂದೆ ಮಾಬು ಸಾಬ ಕಳಸಾಪೂರ ವಯಸ್ಸು 54 ವರ್ಷ,ಜಾತಿ ಮುಸ್ಲಿಂ,ಉದ್ಯೋಗ ಬೆಲ್ದಾರ್ ಕೆಲಸ,5.6 ಅಡಿ ಎತ್ತರ,ಸಾದಾಗಪ್ಪು ಮೈಬಣ್ಣ,ಸದೃಡ ಮೈಕಟ್ಟು ಹಾಗೂ ದುಂಡು ಮುಖ ಹೊಂದಿದ್ದಾನೆ.ಮನೆಯಿಂದ ಹೊರಡುವಾಗ ಬಿಳಿ ಬಣ್ಣದ ತುಂಬು ತೋಳಿನ ಶರ್ಟ್ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ.ವ್ಯಕ್ತಿಯು ಕನ್ನಡ,ತೆಲುಗು,ಹಿಂದಿ ಭಾಷೆ ಮಾತನಾಡುತ್ತಾನೆ ಹಾಗೂ ಹಣೆಯ ಮೇಲಿನ ಕೂದಲು ಉದುರುತ್ತವೆ.

ಈ ವ್ಯಕ್ತಿ ಯಾರಿಗಾದರು ಕಂಡುಬಂದಲ್ಲಿ ಅಥವಾ ಇತನ ಬಗ್ಗೆ ಮಾಹಿತಿ ದೊರೆತಲ್ಲಿ ಕೊಪ್ಪಳ ಕಂಟ್ರೋಲ್ ರೂಂ ನಂ: 08539 230100 ಮತ್ತು 230222. ಅಥವಾ ನಗರ ಪೊಲೀಸ ಠಾಣೆ ಪೊಲೀಸ ಇನ್ಸಪೆಕ್ಟರ್ ಮೊ ಸಂ: 9480803745 ಹಾಗೂ ಕೊಪ್ಪಳ ನಗರ ಠಾಣೆ ದೂರವಾಣಿ ನಂ: 08539.220333 ಸಂಪರ್ಕಿಸಲು ಕೊಪ್ಪಳ ನಗರ ಪೊಲೀಸ್ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೂಲಭೂತ ಸೌಕರ್ಯಕ್ಕೆ ಶಾಸಕ ಭರತ್‌ರೆಡ್ಡಿ ಭರವಸೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಹಲವು ಅಸೌಕರ್ಯಗಳನ್ನು ಶಾಸಕರ ಗಮನಕ್ಕೆ ತಂದರು. ಇದರ ಜೊತೆಗೆ ಸ್ಥಳೀಯ ಶಾಲೆಗಳು ಮತ್ತು ದೇವಾಲಯಗಳ ಅಭಿವೃದ್ಧಿಗೆ ಅಗತ್ಯಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ನಾರಾ ಭರತ್‌ರೆಡ್ಡಿ ಅವರು, ಜನತಾನಗರದ ಅಭಿವೃದ್ಧಿಗೆ ಅಗತ್ಯವಾದ ಯೋಜನೆಗಳನ್ನು ಹಂತ ಹಂತವಾಗಿ ಜಾರಿಗೆ ತರಲಾಗುವುದು ಎಂದು ತಿಳಿಸಿದರು.

ವಿಶೇಷವಾಗಿ ರಾಜಕಾಲುವೆ ಸುಧಾರಣೆ, ರಸ್ತೆ ಕಾಮಗಾರಿಗಳು ಹಾಗೂ ಚರಂಡಿ ವ್ಯವಸ್ಥೆ ಸುಧಾರಣೆಗೆ ಆದ್ಯತೆ ನೀಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಕಾರ್ಪೊರೇಟರ್ ಹಾಗೂ ಮಾಜಿ ಮೇಯರ್ ಆದ ಮುಲ್ಲಂಗಿ ನಂದೀಶ್, ಕಾಂಗ್ರೆಸ್ ಪಕ್ಷದ ಮುಖಂಡರಾದ ಹಗರಿ ಗೋವಿಂದ, ಗುಂತಕಲ್ ಸುರೇಶ್, ಎಪಿಎಂಸಿ ಅಧ್ಯಕ್ಷ ಕಟ್ಟೆಮನೆ ನಾಗೇಂದ್ರ ಸೇರಿದಂತೆ ಹಲವು ಮುಖಂಡರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

ಬಳ್ಳಾರಿ ಮಹಾನಗರ ಪಾಲಿಕೆಯ ವಾರ್ಡ್ ನಂ. 18ರ ವ್ಯಾಪ್ತಿಯಲ್ಲಿ ಬರುವ ಜನತಾನಗರ ಪ್ರದೇಶಕ್ಕೆ ಶಾಸಕ ನಾರಾ ಭರತ್‌ರೆಡ್ಡಿ ಅವರು ನಿನ್ನೆ ಭೇಟಿ ನೀಡಿ ಸ್ಥಳೀಯ ನಿವಾಸಿಗಳ ಸಮಸ್ಯೆಗಳನ್ನು ಆಲಿಸಿದರು. ಜನರೊಂದಿಗೆ ನೇರ ಸಂವಾದ ನಡೆಸಿದ ಅವರು, ಮೂಲಭೂತ ಸೌಕರ್ಯಗಳ ಕೊರತೆಯನ್ನು ಗಂಭೀರವಾಗಿ ಪರಿಗಣಿಸುವುದಾಗಿ ಭರವಸೆ ನೀಡಿದರು.ಭೇಟಿ ವೇಳೆ ಜನರು ರಾಜಕಾಲುವೆ ಸಮಸ್ಯೆ, ಹಾಳಾಗಿರುವ ರಸ್ತೆಗಳು, ಸಮರ್ಪಕ ಚರಂಡಿ ವ್ಯವಸ್ಥೆಯ ಕೊರತೆ ಸೇರಿದಂತೆ

# ಪಂಚಾಂಗ ಶ್ರವಣ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಶ್ರೀ ಶಬರಿ ಅಯ್ಯಪ್ಪ ಟ್ರಸ್ಟ್ (ರಿ), ಬಳ್ಳಾರಿ ಕಬ್ಬರಲ್ ಆಕ್ಟಿವಿಟೀಸ್ ಅಸೋಸಿಯೇಷನ್ (ರಿ) ಇವರ ಸಂಯುಕ್ತ ಆಶ್ರಯದಲ್ಲಿ "ಪಂಚಾಂಗ ಶ್ರವಣ" ಕಾರ್ಯಕ್ರಮವನ್ನು ಶ್ರೀ ಶಬರಿ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಯಿತು

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಕಲ್ಯಾಣ ಮಹಾಸ್ವಾಮಿಗಳು ವಹಿಸಿದ್ದರು ಅಧ್ಯಕ್ಷತೆಯನ್ನು ಜಯಪ್ರಕಾಶ ಜೆ ಗುಪ್ತ ವಹಿಸಿದ್ದರು. ಮುಖ್ಯ. ಅತಿಥಿಗಳಾಗಿ ಗೌರವ ಅಧ್ಯಕ್ಷ ಶೀಲಾ ಬ್ರಹ್ಮಯ್ಯ ಬಳ್ಳಾರಿ ಕಲ್ಚರಲ್ ಆಕ್ಟಿವಿಟೀಶ್ ಅಸೋಸಿಯೇಷನ್ ಹಾಗು ಇತರ ಗಣ್ಯರು ಭಾಗವಹಿಸಿದ್ದರು.

ದೀಪ ಬೆಳಗುವದರೊಂದಿಗೆ ಕಾರ್ಯಕ್ರಮವನ್ನು ಉದ್ಘಟಿಸಲಾಯಿತು ಪಂಚಾಂಗ ಶ್ರವಣ ಕಾರ್ಯಕ್ರಮ ಪಂಚಾಂಗಕರ್ತ, ಬಳ್ಳಾರಿ ನಿವಾಸಿಗಳಾದ ಜ್ಯೋತಿಷಿಗಳು ವಾಸ್ತು ತಜ್ಞರಾದ ಜ್ಯೋತಿಷ್ಯ ರತ್ನ, ವಾಸ್ತು ಬ್ರಹ್ಮ ಪಂಡಿತ್ ಮಠಂಗುರುಪ್ರಸಾದ್ ರವರು ಪಂಚಾಂಗ ಪಠಣ ಮಾಡಿದರು. ನಂತರ ಜಯಪ್ರಕಾಶ ಜಿ ಗುಪ್ತ ರವರು ಮಾತನಾಡಿ, ಪ್ರಥಮ ಬಾರಿಗೆ ನಮ್ಮ ದೇವಸ್ಥಾನದಲ್ಲಿ ಪಂಚಾಂಗ ಶ್ರವಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಮುಂದಿನ ದಿನಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸಿಕೊಂಡು ಹೊಗುತ್ತೇವೆ ಮತ್ತು ಸಂಕ್ಷಿಪ್ತವಾಗಿ ಶ್ರೀ ವೈಧೀಶ್ವರ ಕೊವೆಲ್ ನಾಡಿ ಶಾಸ್ತ್ರ ವಿಚಾರವನ್ನು ನುಡಿದರು ಪಂಚಾಂಗ ಎನ್ನುವುದು ವೈಜ್ಞಾನಿಕ ಸತ್ಯವಾಗಿದೆ. ಹಾಗೂ ಮುಂದಿನ ಭವಿಷ್ಯವನ್ನು ಹೇಳುವ ಜ್ಞಾನವಾಗಿದೆ ಇದು ನಮ್ಮ ಪೂರ್ವಿಕರ ಸಾಧನೆಯಾಗಿದೆ ನಿಖರವಾಗಿ ಮುಂದಿನದನ್ನು ಹೇಳುವ ಶಕ್ತಿ ನಮ್ಮ ಪಂಚಾಂಗಕ್ಕೆ ಇದೆ ಎಂದು ತಿಳಿಸಿದರು. ಶ್ರೀ ಕಲ್ಯಾಣ ಶ್ರೀಗಳು ತಮ್ಮ ಆರ್ಶೀವಚದಲ್ಲಿ ನಮ್ಮ ಧರ್ಮವು ಸರ್ವರಿಗೂ ಒಳಿತನ್ನು ಬಯಸುವ ಧರ್ಮವಾಗಿದೆ ಒಳ್ಳೆಯ ಸಮಯ ಒಳ್ಳೆಯ ಕಾಲ ಒಳ್ಳೆಯ ದಿನಗಳ ಬಗ್ಗೆ ನಿಖರವಾದ ಅಧ್ಯಾಯನ ಮಾಡಲು ನಮ್ಮ ಪಂಚಾಂಗ ದಾರಿದೀಪವಾಗಿದೆ. ಪೂರತನ ಕಾಲದಿಂದಲು ನಮ್ಮವರು ಈ ವಿಷಯದಲ್ಲಿ ಸಾಧನೆ ಮಾಡುತ್ತ ಬಂದಿದ್ದಾರೆ ಅವರು ಹಾಕಿಕೊಟ್ಟ ಅಧ್ಯಾತ್ಮಿಕ ಹಾದಿಯು ನಮ್ಮ ನೆಮ್ಮದಿಯ ಜೀವನಕ್ಕೆ ಕಾರಣವಾಗಿದೆ ಎಂದು ತಿಳಿಸಿದರು ಗೌರವಧ್ಯಕ್ಷರಾದ ಶೀಲಾಬ್ರಹ್ಮಯ್ಯ ರವರು ವೇದಿಕೆ ಮೇಲೆ ಇರುವಂತಹ ಗಣ್ಯರನ್ನು ಸ್ವಾಗತ ಮಾಡುತ್ತ ಬಳ್ಳಾರಿ ಕಲ್ಚರಲ್ ಆಕ್ಟಿವಿಟೀಸ್ ಅಸೋಸಿಯೇಷನ್ (ರಿ) ಸಂಕ್ಷಿಪ್ತವಾಗಿ ವರದಿಯ ನುಡಿಗಳನ್ನು ಹಾಗೂ ಮಾತನಾಡಿ ಜನಸೇವೆಯೇ ಜನಾರ್ಧನ ಸೇವೆ ಎಂದು ನಮ್ಮ ಸಂಘವು ನಿರಂತವಾಗಿ ಸಮಾಜಮುಖಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳತ್ತಾ ಬಂದಿದ್ದೆದೆ ಎಂದು ತಿಳಿಸಿದರು ಕೆ.ಬಿ. ಸಂಜೀವ್ ಪ್ರಸಾದ್ ನಿರೂಪಣೆಯಲ್ಲಿ ಸಂಘವು ನಡೆಸುತ್ತಿರುವ ಕಾರ್ಯಕ್ರಮಗಳಿಗೆ ನಮ್ಮ ಟ್ರಸ್ಟ್ ವತಿಯಿಂದ ಸದಾ ಸಹಾಕರಿಸುತ್ತೇವೆ ಎಂದು ತಿಳಿಸಿದರು ದೇವಸ್ಥಾನದ ವತಿಯಿಂದ ಬೇವಿನೊಂದಿಗೆ ಮಹಾಪ್ರಸದದ ವಿತರಣೆಯನ್ನು ಮಾಡಲಾಗಿತು ಬಂದ ಭಕ್ತದಿಗಳು ಭಕ್ತಿಭವದಿಂದ ಕಾರ್ಯಕ್ರಮದಲ್ಲಿ ಪಾಲ್ಗೊಡಿದರು ಜಯಪ್ರಕಾಶ ಜೆ ಗುಪ್ತ ರವರ ಶ್ರೀಮತಿ ರವರಿಂದ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮ ಖಜಾಂಚಿಗಳಾದ ಡಾ. ಎಂ.ಟಿ.ಮಲ್ಲೇಶ್ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಯವಾಗಿತು. ಕಾರ್ಯಕ್ರಮದ ನಿರೂಪಣೆಯನ್ನು ಕೆ.ಬಿ. ಸಂಜೀವ್ ಪ್ರಸಾದ್ ನಡೆಸಿಕೊಟ್ಟರು

# ಕುಡಿಯುವ ನೀರಿನ ಅರವಟಿ ಉದ್ಘಾಟನೆ




• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ಬೇಸಿಗೆಯ ತೀವ್ರ ಬಿಸಿಲಿನ ಹಿನ್ನೆಲೆ ಪ್ರತಿ ವರ್ಷದಂತೆ ಈ ವರ್ಷವು ಕೂಡ ಸಾರ್ವಜನಿಕರ ದಾಹ ನೀಗಿಸುವ ಉದ್ದೇಶದಿಂದ, ಶ್ರೀ ಬಸವಶ್ರೀ ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ, ಮಾನವಿ ಕೊಪ್ಪಳ ಶಾಖೆ ಇದರಿಂದ ಕೊಪ್ಪಳ ನಗರದ ಲೇಬರ್ ಸರ್ಕಲ್, ಗುಪ್ತಾ ಪೆಟ್ರೋಲ್ ಬಂಕ್ ಹತ್ತಿರ ಶುದ್ಧ ಕುಡಿಯುವ ನೀರಿನ ಅರವಟಿಗೆಯನ್ನು ಪ್ರಾರಂಭಿಸಲಾಯಿತು.

ಸಂಘದ ಸಂಸ್ಥಾಪಕ ಅಧ್ಯಕ್ಷರಾದ ಡಾ. ಶಂಕರಗೌಡ ಎಸ್. ಪಾಟೀಲ್ ಅವರ ಮಾರ್ಗದರ್ಶನದಲ್ಲಿ, ನೆರವೇರಿತು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ವೀರೇಶ ಎನ್. ಹೊಸೂರ್ ಅವರು ಮಾತನಾಡಿ ವರ್ಷ ದಿಂದ ವರ್ಷಕ್ಕೆ ಬಿಸಿಲಿನ ತಾಪ ಮಾರ್ಚ್ ತಿಂಗಳಿಂದ ಹೆಚ್ಚಾಗುವದರಿಂದ ಪಟ್ಟಣಕ್ಕೆ ಬರುವ ಸಾವಿರಾರು ಪ್ರಯಾಣಿಕರು ಮತ್ತು ಸಾರ್ವಜನಿಕರಿಗೆ ನೀರಿನ ದಾಹ ತಣಿಸಲು ಸಹಕಾರಿಯಾಗಿದೆ ಎಂದರು.

ನಮ್ಮ ಸಂಸ್ಥೆಯ ಶಾಖೆಗಳು ಇರುವ ಮಾನವಿ ಲಿಂಗಸಗೂರು, ಸಿರವಾರ, ದೇವದುರ್ಗ, ರಾಯಚೂರು, ಸಿಂಧನೂರ, ಗಂಗಾವತಿ, ಹುಣಸಗಿ ಹಾಗೂ ಯಾದಗಿರಿ ನಗರಗಳಲ್ಲಿ ದಿನ ಆಗಮಿಸುವ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದೆ.

ಕೊಪ್ಪಳ ನಗರ ಠಾಣೆಯ ಸಿ.ಪಿ.ಐ (ಅಕಖ) ಅಧಿಕಾರಿಗಳಾದ ಶ್ರೀ ಪರಸಪ್ಪ ತುರಡಗಿ ಅವರು ಅರವಟಿಗೆಯನ್ನು ಉದ್ಘಾಟಿಸಿ, ಸಂಘದ ಈ ಜನಪರ ಕಾರ್ಯವನ್ನು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿರ್ದೇಶಕರಾದ ಶಂಕರಗೌಡ ಹಿರೇಗೌಡ್ರು, ಚಂದ್ರಶೇಖರಗೌಡ ಎಂ. ಪಾಟೀಲ್, ಕಾಶಿನಾಥ ರಡ್ಡಿ, ಪ್ರಭು ಬಬ್ಲಿ, ಸೋಮನಗೌಡ ಹೊಗರನಾಳ, ಫಕ್ರುದ್ದೀನ್ ನದಾಫ್ ಹಾಗೂ ಆಶೀಫ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕೊಪ್ಪಳ ಶಾಖಾ ವ್ಯವಸ್ಥಾಪಕರಾದ ಶ್ರೀ ಮಲ್ಲನಗೌಡ ಮುದೇನೂರ ಹಾಗೂ ಸಂಘದ ಸಿಬ್ಬಂದಿ ವರ್ಗದವರು ಭಾಗವಹಿಸಿ, ಸಾರ್ವಜನಿಕ ಸೇವೆಗೆ ಚಾಲನೆ ನೀಡಿದರು.

# ಎಲ್‌ಪಿಜಿ ಪೂರೈಸಲು ಜಿಲ್ಲಾಡಳಿತಕ್ಕೆ ಮನವಿ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಹೋಟೆಲ್ ಉದ್ಯಮವು ಎದುರಿಸುತ್ತಿರುವ ಎಲ್‌ಪಿಜಿ ಸಿಲಿಂಡರ್ ಸರಬರಾಜಿನ ಗಂಭೀರ ಸಮಸ್ಯೆಯನ್ನು ಪರಿಹರಿಸಲು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ಬಳ್ಳಾರಿ ಜಿಲ್ಲಾ ಹೋಟಲ್ ಮತ್ತು ಬೇಕರಿ ಮಾಲೀಕರ ಅಸೋಸಿಯೇಷನ್ ಜಿಲ್ಲಾಡಳಿತಕ್ಕೆ ಸೋಮವಾರ ಮನವಿ ಸಲ್ಲಿಸಿದೆ.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಹಾಗೂ ಗೌರವ ಕಾರ್ಯದರ್ಶಿಗಳಾದ, ಕೆ.ಸಿ. ಸುರೇಶಬಾಬು ಅವರ ನೇತೃತ್ವದಲ್ಲಿ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷರಾದ ವಿಕ್ರಂಪೋಲ ಅವರ ತಂಡವು ಅಪರ ಜಿಲ್ಲಾಧಿಕಾರಿಗಳಾದ ಎನ್. ಮೊಹಮ್ಮದ್ ಜುಬೈರ್ ಅವರನ್ನು ಭೇಟಿ ಮಾಡಿ, ಹೋಟಲ್ ಮತ್ತು ಬೇಕರಿ ಉದ್ಯಮಕ್ಕೆ ಹೆಚ್ಚಿನ ಸಿಲೆಂಡರ್‌ಗಳನ್ನು ಪೂರೈಸಬೇಕು ಎಂದು ಅವರು ಮನವಿ ಮಾಡಿದರು.

ಮಧ್ಯಪ್ರಾಚ್ಯ ದೇಶಗಳಲ್ಲಿಯ ಯುದ್ಧದ ವಾತಾವರಣದ ಕಾರಣ ಎಲ್‌ಪಿಜಿ ಸಿಲೆಂಡರಗಳ ಪೂರೈಕೆಯಲ್ಲಿ ಹೋಟಲ್ ಮತ್ತು ಬೇಕರಿ ಉದ್ಯಮಕ್ಕೆ ಧಕ್ಕೆ ಆಗುತ್ತಿದೆ. ಅಲ್ಲದೇ, ಈ ಉದ್ಯಮದಲ್ಲಿಯ ಉದ್ಯೋಗಿಗಳ ಬದುಕಿಗೆ ಕುತ್ತು ಬೀಳುತ್ತಿದೆ. ಕಾರಣ ಸರ್ಕಾರ ಸಿಲೆಂಡರ್‌ಗಳ ಪೂರೈಕೆಯಲ್ಲಿ ವಿಶೇಷ ಆಸಕ್ತಿ ತೋರಿಸಬೇಕು ಎಂದು ಕೋರಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಜಂಟಿ ಕಾರ್ಯದರ್ಶಿಗಳಾದ, ಡಾ. ಮರ್ಚೆಡ್ ಮಲ್ಲಿಕಾರ್ಜುನಗೌಡ ಸೇರಿ ಹೋಟೆಲ್ ಮತ್ತು ಬೇಕರಿ ಅಸೋಸಿಯೇಷನ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಪಾರಜಿಲ್ಲಾಧಿಕಾರಿ, ಮೊಹಮ್ಮದ್ ಜುಬೈರ್. ಎನ್ ಅವರು, ಸಮಸ್ಯೆ ಪರಿಹಾರಕ್ಕೆ ತ್ವರಿತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದರು.

# ಪರೀಕ್ಷೆ ಬಿಟ್ಟು ಪ್ರತಿಭಟನೆಗಿಳಿದ ವಿದ್ಯಾರ್ಥಿ ಶಾಲಾ ಆವರಣದಲ್ಲಿ ಉದ್ವಿಗ್ನ ಪರಿಸ್ಥಿತಿ



• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ಪಟ್ಟಣದ ಶುಗರ್ ಫ್ಯಾಕ್ಟರಿ ಪ್ರದೇಶದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಮೌಲಾನಾ ಆಜಾದ್ ಶಾಲೆ ನಿರ್ಮಾಣ ವಿಚಾರವಾಗಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.ಹೊಸ ಶಾಲಾ ಕಟ್ಟಡ ನಿರ್ಮಾಣಕ್ಕೆ ಗ್ರಾಮಸ್ಥರು ತೀವ್ರ ವಿರೋಧ ವ್ಯಕ್ತಪಡಿಸಿ, “ಇದೀಗಿರುವ ಶಾಲೆಗೆ ಹೆಚ್ಚುವರಿ ಸೌಲಭ್ಯಗಳನ್ನು ಒದಗಿಸಬೇಕು, ಹೊಸ ಶಾಲೆ ಅಗತ್ಯವಿಲ್ಲ” ಎಂದು ಅಕ್ರೋಶ ಹೊರಹಾಕಿದರು.

ಈ ಪ್ರತಿಭಟನೆಯಲ್ಲಿ ಗಮನಾರ್ಹ ಸಂಗತಿ ಎಂದರೆ, ಶಾಲಾ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬಿಟ್ಟು, ಶಾಲಾ ಸಮವಸ್ತ್ರದಲ್ಲೇ ಪ್ರತಿಭಟನೆಯಲ್ಲಿ ಭಾಗವಹಿಸಿರುವುದು. ವಿದ್ಯಾರ್ಥಿಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಆವರಣದ ಎರಡು ಶಾಲಾ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದು, ಘಟನೆಗೆ ಮತ್ತಷ್ಟು ಗಂಭೀರತೆ ತಂದಿದೆ. ಸ್ಥಳಕ್ಕೆ ತಹಶೀಲ್ದಾರ್ ಮಂಜುನಾಥ್ ಹಾಗೂ ಸಿಪಿಐ ವಾಸುಕುಮಾರ್ ಭೇಟಿ ನೀಡಿದ್ರು, ಪ್ರತಿಭಟನಾಕಾರರನ್ನು ಮನವೊಲಿಸಲು ತಹಶಿಲ್ದಾರ್ ಹರಸಾಹಸ ಪಟ್ಟರು. ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವ ಪ್ರಯತ್ನಗಳು ಮುಂದುವರಿದಿವೆ.

ಇಷ್ಟು ದಿನ ನ್ಯಾಯಯುತವಾಗಿ ತಮ್ಮ ಹಕ್ಕುಗಾಗಿ ಹೋರಾಟ ಮಾಡುತ್ತಿರುವ ಗ್ರಾಮಸ್ಥರು, ಪ್ರತಿಭಟನಾಕಾರರು, ಇದೇ ವೇಳೆ, ಶಾಲಾ ಮಕ್ಕಳನ್ನು ಪ್ರತಿಭಟನೆಯಲ್ಲಿ ಭಾಗವಹಿಸಲು ಯಾರು ಪ್ರೇರೇಪಿಸಿದರು ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಸರ್ಕಾರ ಹಾಗೂ ಶಿಕ್ಷಣ ಇಲಾಖೆಯ ನಿಯಮಗಳನ್ನು ಲೆಕ್ಕಿಸದೆ ಶಾಲಾ ಆಡಳಿತವೇ ನಡೆದುಕೊಂಡಿದೆಯೇ ಎಂಬ ಅನುಮಾನಗಳು ವ್ಯಕ್ತವಾಗುತ್ತಿವೆ.

ಶಿಕ್ಷಣ ಇಲಾಖೆಯ ನಿಯಮಗಳ ಪ್ರಕಾರ, ಮಕ್ಕಳನ್ನು ರಾಜಕೀಯ ಅಥವಾ ವಿವಾದಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಬಾರದು ಎಂಬುದು ಸ್ಪಷ್ಟವಾಗಿದೆ. ಅಪ್ರಾಪ್ತ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸುವುದಾದರೆ, ಪೋಷಕರ ಅನುಮತಿ, ಸುರಕ್ಷತೆ, ಶಾಂತಿಯುತತೆ ಹಾಗೂ ಕಾನೂನುಬದ್ಧತೆ ಕಡ್ಡಾಯವಾಗಿದ್ದು, ಅದು ಶಾಲಾ ಸಮಯದ ಹೊರಗೇ ನಡೆಯಬೇಕು. ಪರೀಕ್ಷೆ ಬಿಟ್ಟು ಪ್ರತಿಬ 'ಟನೆಗೆ ಹೋಗುವುದು ಮತ್ತು ಶಾಲಾ ಸಮವಸ್ತ್ರದಲ್ಲಿ ಸಾರ್ವಜನಿಕ ಅಥವಾ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದು ಶಾಲಾ ನಿಯಮಗಳಿಗೆ ವಿರುದ್ಧವಾಗಿದ್ದು, ಇದಕ್ಕೆ ಪ್ರೇರಣೆ ನೀಡಿದವರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.ಈ ಘಟನೆ ರಾಜಕೀಯ ತಿರುವು ಪಡೆದುಕೊಳ್ಳುವ ಸಾಧ್ಯತೆ ಇರುವುದರಿಂದ, ಮುಂದಿನ ಬೆಳವಣಿಗೆಗಳತ್ತ ಎಲ್ಲರ ಗಮನ ಕೇಂದ್ರೀಕೃತವಾಗಿದೆ.

# 144 ನೇ ಹೋರಾಟ ಯಶಸ್ವಿ




• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ನಮ್ಮೂರ ಜನರು ಕೊಪ್ಪಳದಲ್ಲಿ ನಿರಂತರವಾಗಿ ಹೋರಾಟ ಮಾಡುತ್ತಿದ್ದಾರೆ, ಈಗ ಅದನ್ನು ಬೆಂಗಳೂರಿನ ಜನರಿಗೆ, ಸರಕಾರಕ್ಕೆ ತಲುಪಿಸಲು ಫ್ರೀಡಂ ಪಾ9ನಲ್ಲಿ ಒಂದು ದಿನದ ಸಾಂಕೇತಿಕ ಪ್ರತಿಭಟನೆ ಮಾಡಿದ್ದಾರೆ ಎಂದು ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಜ್ಯೋತಿ ಎಂ. ಗೊಂಡಬಾಳ ಹೇಳಿದರು.

ಅವರು ನಗರಸಭೆ ಮುಂದೆ ನಡೆಯುತ್ತಿರುವ ಬಲ್ಡೋಟ ಕಾರ್ಖಾನೆ ವಿರೋಧಿ 144ನೇ ದಿನದ ಹೋರಾಟದಲ್ಲಿ ಮಾತನಾಡಿದರು.

ಜಿಲ್ಲಾ ಬಚಾವೋ ಆಂದೋಲನ ಮತ್ತು ಪರಿಸರ ಹಿತರಕ್ಷಣಾ ವೇದಿಕೆಯ ಜಂಟಿ ಕ್ರಿಯಾ ವೇದಿಕೆ ಮೂಲಕ ಹಮ್ಮಿಕೊಂಡಿರುವ ಹೋರಾಟ ಜನಸಾಮಾನ್ಯರ ಹೋರಾಟವಾಗಿದ್ದು, ಇದನ್ನು ಎಲ್ಲಾ ಸರಕಾರಗಳು ಪರಿಗಣಿಸಬೇಕು, 20 ಬಾಧಿತ ಗ್ರಾಮಗಳು ಸೇರಿದಂತೆ ಕೊಪ್ಪಳ ಭಾಗ್ಯನಗರದ 1.5 ಲಕ್ಷ ಜನರಿಗೆ ಸಮಸ್ಯೆ ಆಗಿದೆ, ಈಗಾಗಲೇ ಇಲ್ಲಿನ ಪರಿಸರ, ನೀರು ಹಾಳಾಗಿದ್ದು, ಆರೋಗ್ಯದ ಮೇಲೆ, ನಮ್ಮ ಮಕ್ಕಳ ತ್ವಚೆಯ ಮೇಲೆ ಗಂಭೀರ ಪರಿಣಾಮ ಬೀರಿದೆ. ಇಲ್ಲಿ ನಿರಂತರ ಹೋರಾಟ ಮಾಡುವ ಜೊತೆಯಲ್ಲಿ ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಹೋರಾಟ ಮಾಡಿದ್ದು ಈಗ ಬೆಂಗಳೂರಲ್ಲಿ ಹೋರಾಟ ಮಾಡಿದ್ದಾರೆ, ಇದು ನಿರಂತರವಾಗಿ ನಡೆಯುತ್ತಲೇ ಇರುತ್ತದೆ, ಜನರಿಗೆ ಮುಕ್ತಿ ಸಿಗಬೇಕು, ಜನಪರ ರೈತಪರ ಸಿದ್ದರಾಮಯ್ಯ ಅವರ ಸರಕಾರ ನಮ್ಮ ಮನವಿಯನ್ನೂ ಪರಿಗಣಿಸಿ, ದೇವನಹಳ್ಳಿ ಭೂಮಿ ರೈತರಿಗೆ ಬಿಟ್ಟು ಕೊಟ್ಟ ಹಾಗೆ ಇಲ್ಲಿಯೂ ಅಂತಹ ಕ್ರಮ ತೆಗೆಸುಕೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಹಿಳಾ ನಾಯಕಿ ಕಾವ್ಯ ಪ್ರಸನ್ನ ಗಡಾದ, ನಿವೃತ್ತ ಪ್ರಾಂಶುಪಾಲ ಬಿ. ಜಿ. ಕರಿಗಾರ, ಮುಖಂಡರುಗಳಾದ ಶಿವಪುತ್ರಪ್ಪ ಕವಡಿಮಟ್ಟಿ, ಮಹಾಂತೇಶ ಕೊತಬಾಳ, ರಾಜಶೇಖರ ಏಳುಬಾವಿ, ನಗರ ಆಶ್ರಯ ಸಮಿತಿ ಸದಸ್ಯ ಶ್ರೀನಿವಾಸ ಪಂಡಿತ, ಪಂಪಣ್ಣ ಚಿಲಕಮುಖಿ ಇತರರಿದ್ದರು.

# ಲಂಚದ ಬೇಡಿಕೆ:ಪಿಡಿಒ ಲೋಕಾಯುಕ್ತ ಬಲೆಗೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಮೀನುವೊಂದರಲ್ಲಿ ನಿವೇಶನ ಮಾಡಲು ಇ ಸ್ವತ್ತು ನೀಡಲು 50 ಸಾವಿರ ಲಂಚ ಪಡೆಯುವಾಗ ತಾಲೂಕಿನ ಸಿಡಿಗಿನಮೊಳ ಗ್ರಾ.ಪಂ.ಪಿಡಿಓ ಮುಶ್ರತ ಬಾನು ಹಾಗೂ ಬಿಲ್ ಕಲೆಕ್ಟರ್ ಅವರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಮೀನಳ್ಳಿಗ್ರಾಮದ ರವಿಕುಮಾರ್ ಡಿ.ಎನ್ನುವವರು ತಮ್ಮ ಜಮೀನಿನಲ್ಲಿ ನಿವೇಶನಗಳನ್ನು ಮಾಡಲು ಮುಂದಾಗಿದ್ದು, ತಮ್ಮ ಜಮೀನಿನ ಇಸ್ವತ್ತು ಪ್ರಮಾಣ ಪತ್ರ ನೀಡುವಂತೆ ಗ್ರಾಮ ಪಂಚಾಯಿತಿ ಪಿಡಿಓ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದಾರೆ. ಇದಕ್ಕೆ ಪಿಡಿಓ ಅಧಿಕಾರಿಗಳು 50 ಸಾವಿರ ಲಂಚದ ಹಣ ಬೇಡಿಕೆ ಇಟ್ಟಿದ್ದಾರೆ. ಇದಕ್ಕೆ ಒಪ್ಪಿಕೊಂಡ ರವಿಕುಮಾರ್ ಅವರು, ಲೋಕಾಯುಕ್ತ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಆದರೆ, ಪಿಡಿಓ ಅವರು, ಹಣವನ್ನು ಬಿಲ್ ಕಲೆಕ್ಟರ್ ಓಬಳೇಶ್ ಅವರ ಬಳಿ ತಲುಪಿಸಿ ಎಂದಿದ್ದಾರೆ. ಅದರಂತೆ ಲಂಚದ ಹಣ ನೀಡುವಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ, ಹಣ ಸಮೇತ ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ. ಪ್ರಕರಣ ದಾಖಲಾಗಿದೆ.


## :CITATION:

**IN THE COURT OF THE PRL. CIVIL JUDGE AND JMFC., AT HUMNABAD.**
**CRL. MISC. No.3556/2025.**

**Petitioners:**

**1. Bharat Bai W/o late Kallappa, Age: 72-year, Occu: Labour.**

**2. Anand S/o late Kallappa. Age: 45-year, Occu: Labour.**

**3. Prkash S/o late Kallappa. Age: 37-year, Occu : Labour.**

All R/o Village Chitkota, Tq. Humnabad. Dist. Bidar

**Respondent:**

The Registrar of Birth and Death through The Tahasildar Humnabad. Sub:-Petition U/Sec. 13(3) of Birth and Death Registration Act-1969

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Husband of Petitioner No.1 and Father of petitioner No.2 and 3 by namely **LATE. KALLAPPA S/O SHIVARAYYA,** who was died on 22.03.2023 at Village Chitkota. Tq. Humnabad. Dist. Bidar. The petitioners claiming the Death Certificate of said for transfer of property and other official purpose and home record. Therefore, it is hereby proclaimed that if any persons have got any objection in this regard, may approach to this Court on 10.04.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 18-03-2026

//By order of the court//
Chief Ministerial Officer, Prl. Civil Judge & JMFC Court, Humnabad



## :CITATION:

**IN THE COURT OF THE I ADDL. CIVIL JUDGE AND JMFC., AT HUMNABAD.**
**CRL. MISC. No.1607/2026.**

**Petitioners:**

**1.Vijaylaxmi W/o Ramanna,** Age: 56-year, Occu: Agriculture. R/o Village Talmadgi, Tq. Chitguppa. Dist. Bidar.

**Respondent:**

The Registrar of Birth and Death through The TMC Chitguppa.

***Sub:- Petition U/Sec. 13(3) of Birth and Death Registration Act-1969***

Whereas, the above mentioned petitioner has filed the petition under section 13(3) of Birth and Death Registration Act-1969 praying this Honorable Court to issue Death Certificate of Brother of petitioner Deceased by namely LATE. PRABHU S/O MANIK, who was died on 27.01.2017 at Boudh Nagar Town Chitguppa. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 23.04.2026 at 11.00 AM in person or any authorized pleader to answer such claim otherwise the matter will be heard and determined in your absence as per law.

***Given under my hand and seal of he court, this the 18-03-2026.***

**//By order of the court//**
**Chief Ministerial Officer,**
**Prl. Civil Judge & JMFC Court,**
**Humnabad.**


# ಮಾತೃ ಭಾಷೆ ಅಭ್ಯುದಯವಾಗದೇ ಭಾರತದ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಅಪೂರ್ಣ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಸ್ವದೇಶಿ ಭಾವನೆ ಜೀವನದ ಎಲ್ಲಾ ರಂಗಗಳಲ್ಲಿ ಪ್ರಕಟವಾಗಬೇಕು, ಸ್ವ ಭಾಷಾ ಪ್ರೇಮ, ಸ್ವದೇಶಿ ಪ್ರೇಮ ಹಾಗೂ ಸ್ವದೇಶ ಪ್ರೇಮ ಎಲ್ಲರಲ್ಲೂ ಇರಬೇಕು. ನಮ್ಮ ಸಂಸ್ಕೃತಿ, ಪರಂಪರೆ, ಇತಿಹಾಸಗಳ ಬಗ್ಗೆ ಹೆಮ್ಮೆ ಇರಬೇಕು. 'ಎಲ್ಲಾ ದಿಕ್ಕುಗಳಿಂದಲೂ ಸದ್ವಿಚಾರಗಳು ಬರಲಿ' ಎಂದು ನಮ್ಮ ವೇದಗಳೇ ಹೇಳಿವೆ. ಆದರೆ 21ನೇ ಶತಮಾನದಲ್ಲಿ ನಾವಿಂದು ಆಧುನಿಕರು, ಪ್ರಗತಿಪರರು ಎಂದು ಹೇಳಿಕೊಳ್ಳುತ್ತಾ ನಮ್ಮ ಮಾತೃಭಾಷೆಯನ್ನು ಬಳಸಲು, ಇಂದಿನ ಅವಶ್ಯಕತೆಗನುಗುಣವಾಗಿ ಅದನ್ನು ವಿಕಾಸಗೊಳಿಸುವುದನ್ನು ಬಿಟ್ಟು, ಪರಭಾಷೆಯ ಹಿಂದೆ ಬಿದ್ದಿರುವ ನಮ್ಮ ಸುಶಿಕ್ಷಿತ ವರ್ಗದ ಮನೋದ್ಯಾಸದ ಕುರಿತಂತೆ ತೀವ್ರ ಆಕ್ರೋಶವಿದ್ದ ಪಂ.ದೀನದಯಾಳ ಉಪಾಧ್ಯಾಯರ ಖಚಿತ ಅಭಿಪ್ರಾಯವೆಂದರೆ, ಮಾತೃಭಾಷೆಯ ಅಭ್ಯುದಯವಾಗದೇ ಭಾರತದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಅಪೂರ್ಣವಾಗಿ ಉಳಿದು ಬಿಡುತ್ತವೆ. ಮಾತೃಭಾಷೆಯ ಶಿಕ್ಷಣ ಮಾಧ್ಯಮವೇ ಇದಕ್ಕೆಲ್ಲಾ ಪರಿಹಾರ ಎಂಬ ಪಂ.ದೀನದಯಾಳರ ಇಂತಹ ಚಿಂತನೆಗಳು ಇಂದಿಗೂ ಪ್ರಸ್ತುತ ಎಂದು ಆರ್.ಎಸ್.ಎಸ್.ನ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಗೋಪಿಯವರು ತಿಳಿಸಿದರು, ಅವರು ನಿನ್ನೆ ನಗರದ ಡಾ.ರಾಜಕುಮಾರ ರಸ್ತೆಯಲ್ಲಿರುವ ಪಾಂಚಜನ್ಯ ಸಭಾಂಗಣದಲ್ಲಿ, ವಿದ್ಯಾರ್ಥಿ ಶಿಕ್ಷಣ ಸಂಸ್ಕೃತಿ ಸೇವಾ ಸಮಿತಿ ಹಾಗೂ ಎಬಿವಿಪಿ ನಗರ ಘಟಕಗಳು ಸಂಯುಕ್ತವಾಗಿ ಆಯೋಜಿಸಿದ್ದ ಪಂ.ದೀನ ದಯಾಳ ಉಪಾಧ್ಯಾಯರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಬ್ಯಾಂಕ್ ಅಧಿಕಾರಿ ಶ್ರೀ ಬಿ.ಎಲ್.ವೆಂಕಟೇಶ ಅವರು ಮಾತನಾಡಿ ತಮ್ಮ ವಿದ್ಯಾರ್ಥಿ ಜೀವನವನ್ನು ಮೆಲಕು ಹಾಕುತ್ತಾ ವಿದ್ಯಾರ್ಥಿಗಳು ಶಿಸ್ತು ಹಾಗೂ ಸಮಾಜಮುಖಿ ಜೀವನವನ್ನು ರೂಪಿಸಿಕೊಳ್ಳಬೇಕೆಂದು ಕರೆ ನೀಡಿದರು. ಆರಂಭದಲ್ಲಿ ಎನ್.ಬಸವರಾಜ ಪ್ರಾರ್ಥಿಸಿದರು, ಎಬಿವಿಪಿ ಜಿಲ್ಲಾ ಸಂಚಾಲಕ ಕೆ.ದಿಲೀಪಕುಮಾರ ಸ್ವಾಗತಿಸಿದರು,

ಭರತ ತಳವಾರ ವಂದಿಸಿದರು, ಕುಮಾರಿ ಇಂದಿರಾ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಸಮಿತಿಯ ಕಾರ್ಯದರ್ಶಿ ಮರ್ಚೇಡ್ ಮಲ್ಲಿಕಾರ್ಜುನಗೌಡ ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮುನ್ನ ಜಡೇಶ ಎಮ್ಮಿಗನೂರು ಅವರು ಮಧುರ ಗಾಯನದಿಂದ 'ಗಾನದುಂದುಬಿ' ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಹಾರ್ಮೋನಿಯಂನಲ್ಲಿ ಶಿವಕುಮಾರ, ತಬಲಾದಲ್ಲಿ ಹರ್ಷ ಆಚಾರ್ ಸಾತ್ ನೀಡಿದರು. ಎಂದು ವಿದ್ಯಾರ್ಥಿ ಶಿಕ್ಷಣ, ಸಂಸ್ಕೃತಿ ಸೇವಾ ಸಮಿತಿಯ ಅಧ್ಯಕ್ಷ ಕೆ.ಹೆಚ್.ಹರಿಕುಮಾರ್ ತಿಳಿಸಿದ್ದಾರೆ.

# ಉಪ ಚುನಾವಣೆ : ತರಬೇತಿ ಕಾರ್ಯಾಗಾರ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ಹಿನ್ನಲೆಯಲ್ಲಿ ನೇಮಕಗೊಂಡ ಮೈಕ್ರೋ ಆಬ್ಸರ್ವರಗಳಿಗೆ ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಮಂಗಳವಾರ ತರಬೇತಿ ಕಾರ್ಯಾಗಾರ ಜರುಗಿತು.

ತರಬೇತಿ ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡಿದ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ ಅವರು ಮೈಕ್ರೋ ಆಬ್ಸರ್ವರ್‌ಗಳ ಕರ್ತವ್ಯಗಳು ಹಾಗೂ ಜವಾಬ್ದಾರಿಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ಮತಗಟ್ಟೆಗಳಲ್ಲಿ ಮತದಾನ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಇವಿಎಂ ಹಾಗೂ ವಿವಿಪ್ಯಾಟ್ ಉಪಕರಣಗಳ ಕಾರ್ಯಾಚರಣೆ, ಮಾದರಿ ಮತದಾನ, ಮತದಾನದ ಆರಂಭ ಮತ್ತು ಅಂತ್ಯದ ಕ್ರಮಗಳ ಬಗ್ಗೆ ತಿಳಿಸಿಕೊಟ್ಟರು.

ಮತದಾನ ಪ್ರಾರಂಭದ ಮುಂಚೆಯೇ ನಿಯೋಜಿತ ಮತಗಟ್ಟೆಯಲ್ಲಿ ಹಾಜರಿದ್ದು, ಅಣಕು ಮತದಾನದ ಪ್ರಕ್ರಿಯೆಯನ್ನು ನಿಗಾವಹಿಸಬೇಕು. ಮತದಾನ ಆರಂಭದಿಂದ ಮುಕ್ತಾಯ ಆಗುವವರೆಗೆ ಹಾಜರಿದ್ದು, ಪ್ರತಿ ಹಂತದ ಮತದಾನದ ಪ್ರಕ್ರಿಯೆಯ ಮೇಲೆ ನಿಗಾವಹಿಸಿ, ಪ್ರತಿಹಂತದ ವಿವರಗಳನ್ನು ದಾಖಲಿಸಬೇಕು. ಮುಕ್ತ, ನ್ಯಾಯಸಮ್ಮತ ಸುಸೂತ್ರ ಚುನಾವಣೆಗಾಗಿ ಕಾರ್ಯನಿರ್ವಹಿಸಿ, ಚುನಾವಣಾ ಮಾರ್ಗಸೂಚಿಗಳನ್ನು ಪಾಲಿಸಬೇಕು. ಯಾವುದೇ ಸಮಸ್ಯೆಗಳು ಎದುರಾದರೂ ತಮ್ಮನ್ನು ಸೇರಿದಂತೆ ಜಿಲ್ಲಾ ಚುನಾವಣಾಧಿಕಾರಿಗಳನ್ನು ಸಂಪರ್ಕಿಸಲು ತಿಳಿಸಿದರು.

ಯಾವುದೇ ಅಕ್ರಮ ಅಥವಾ ಅಸಮಂಜಸ ಚಟುವಟಿಕೆಗಳನ್ನು ತಕ್ಷಣವೇ ವರದಿ ಮಾಡಬೇಕು. ಜೊತೆಗೆ ಟೆಂಡರ್ ಓಟ, ಚಾಲೆಂಜಿಂಗ್ ವೋಟ್ ಹಾಗೂ ಇತರ ವಿಶೇಷ ಪರಿಸ್ಥಿತಿಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿಸಿದರು. ಮತದಾರರ ಗುರುತು ಪರಿಶೀಲನೆ, ಮತಗಟ್ಟೆಯ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವುದು, ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದರು.

ಜಿಲ್ಲಾಧಿಕಾರಿ ಸಂಗಪ್ಪ ಅವರು ಮಾತನಾಡಿ, ಮೈಕ್ರೋ ಆಬ್ಸರವರಗಳು ತಮಗೆ ವಹಿಸಿದ ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು. ಅದಕ್ಕಾಗಿ ತರಬೇತಿ ನೀಡಲಾಗುತ್ತಿದ್ದು, ಇದರ ಸಂಪೂರ್ಣ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ತರಬೇತಿದಾರರಾದ ಸಂಗಮೇಶ ಸಣತಂಗಿ ಮತದಾನ ದಿನದಂದು ಮತಗಟ್ಟೆಗಳಲ್ಲಿ ಅನುಸರಿಸಬೇಕಾದ ಪಾತ್ರದ ಜೊತೆಗೆ ಮತಗಟ್ಟೆಗಳಲ್ಲಿ ಯಾರು ಬರಬೇಕು. ಯಾರು ಬರಬಾರದು ಎಂಬುದರ ಬಗ್ಗೆ ವಿವರವಾಗಿ ಪ್ರಾಯೋಗಿಕವಾಗಿ ತಿಳಿಸಿಕೊಟ್ಟರು. ಇದರ ಜೊತೆಗೆ ಸಾಮಾನ್ಯ ವೀಕ್ಷಕರಿಗೆ ಕಿವಿ, ಕಣ್ಣುಗಳಾಗಿ ಕೆಲಸ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ತರಬೇತಿ ಕಾರ್ಯಾಗಾರದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಲೀಡ್ ಬ್ಯಾಂಕ್ ಮ್ಯಾನೇಜರ್ ರಾಜಕುಮಾರ ಹೂಗಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಕ್ರಮ ತಡೆಗೆ ಸಿ,ವಿಜಿಲ್ ಆ್ಯಪ್ ಅಕ್ರಮ ತಡೆಗೆ ಸಾರ್ವಜನಿಕರು ಕೈ ಜೋಡಿಸಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ




ಚುನಾವಣಾ ಅಕ್ರಮಗಳನ್ನು ತಡೆಗಟ್ಟಲು ಚುನಾವಣಾ ಆಯೋಗವು ಸಿ–ವಿಜಿಲ್ ಎಂಬ (ಆ್ಯಪ್) ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಸಾರ್ವಜನಿಕರು ಯಾವುದೇ ರೀತಿಯ ಚುನಾವಣಾ ಅಕ್ರಮಗಳ ವಿಡಿಯೋ ಚಿತ್ರಿಕರಣ ಮತ್ತು ಛಾಯಾಚಿತ್ರಗಳನ್ನು ಆ್ಯಪ್ ಮೂಲಕ ಆಯೋಗದ ಗಮನಕ್ಕೆ ತರಬಹುದಾಗಿದೆ.

ಚುನಾವಣಾ ಸಂದರ್ಭದಲ್ಲಿ ಓಟಿಗಾಗಿ ಅಕ್ರಮ ನಡೆಸುವವರ ವಿರುದ್ದ ಸಿವಿಜಿಲ್ ಆ್ಯಪ್‌ನಲ್ಲಿ ಫೋಟೋ ಮತ್ತು ವಿಡಿಯೋ ಅಪಲೋಡ್ ಮಾಡಿ ದೂರು ನೀಡಬಹುದಾಗಿದ್ದು, ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಈ ಆ್ಯಪ್ ಹೆಚ್ಚು ಅನುಕೂಲವಾಗಲಿದೆ. ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳು ಹಾಗೂ ಅವರ ಬೆಂಬಲಿಗರು ಯಾವುದೇ ರೀತಿಯ ಅಕ್ರಮದಲ್ಲಿ ತೊಡಗುವ ಜೊತೆಗೆ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಗಳಲ್ಲಿ ತೊಡಗಿದ್ದಲ್ಲಿ ಇಂತಹ ಚಟುವಟಿಕೆ ನಿಯಂತ್ರಿಸಲು ಸಾರ್ವಜನಿಕರು ಅಕ್ರಮ ನಡೆಸುವವರ ವಿಡಿಯೋ ಮತ್ತು ಚಿತ್ರ ತೆಗೆದು ಅಪಲೋಡ್ ಮಾಡಿದಲ್ಲಿ ನೇರವಾಗಿ ಚುನಾವಣಾ ಆಯೋಗವೇ ಕ್ರಮ ಕೈಗೊಳ್ಳಲಿದೆ.

ಸಾರ್ವಜನಿಕರು ತಮ್ಮ ಸ್ಮಾರ್ಟ್ ಫೋನ್‌ನ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಸರ್ಚ ಮಾಡಿದಲ್ಲಿ ಈ ಆ್ಯಪ್ ಲಭ್ಯವಾಗಲಿದೆ. ಈ ಆಪ್ ಇನ್‌ಸ್ಟಾಲ್ ಮಾಡಿ, ತಮ್ಮ ಹೆಸರು, ಮೊಬೈಲ್ ಸಂಖ್ಯೆ, ಇಮೇಲ್ ಹಾಗೂ ಮತಕ್ಷೇತ್ರದ ಹೆಸರು ನಮೂದಿಸಿದರೆ ಸಾಕು ಆ್ಯಪ್‌ನಲ್ಲಿ ಯಾವುದೇ ರೀತಿಯ ಚುನಾವಣಾ ಸಂದರ್ಭದಲ್ಲಿ ನಡೆಯುವ ಅಕ್ರಮಗಳಿದ್ದಲ್ಲಿ ವಿಡಿಯೋ ಮತ್ತು ಛಾಯಾಚಿತ್ರವನ್ನು ಅಪಲೋಡ್ ಮಾಡಬಹುದಾಗಿದೆ. ಈ ಪ್ರಕ್ರಿಯೆಯು ಸಂಪೂರ್ಣ ಉಚಿತವಾಗಿರುತ್ತದೆ.

ದಾಖಲಾದ ದೂರುಗಳಿಗೆ ತಕ್ಷಣ ಕ್ರಮ ಕೈಗೊಳ್ಳಲಿದ್ದು, 100 ನಿಮಿಷದಲ್ಲಿಯೇ ಅಧಿಕಾರಿಗಳಿಂದ ಉತ್ತರ ಸಹ ಸಿಗಲಿದೆ. ಚುನಾವಣಾ ಅಕ್ರಮಗಳ ತಡೆಗೆ ಸಾರ್ವಜನಿಕರ ಬಳಕೆಗೆ ಈ ಆ್ಯಪ್ ಹೆಚ್ಚಿನ ಅನುಕೂಲವಾಗಲಿದ್ದು,

ಯಾವುದೇ ರೀತಿಯ ಹಣ, ಮದ್ಯ, ಉಡುಗೊರೆಗೆ ಸಂಬಂಧಪಟ್ಟಂತೆ ಅಕ್ರಮ ಚಟುವಟಿಕೆಗಳು ನಡೆದಲ್ಲಿ ತಕ್ಷಣ ದೂರು ಸಲ್ಲಿಸಬಹುದಾಗಿದೆ. ದೂರು ಸಲ್ಲಿಸುವವರ ಹೆಸರನ್ನು ಗೌಪ್ಯವಾಗಿ ಸಹ ಇಡಲಾಗುತ್ತದೆ. ಸಿವಿಜಿಲ್ ಮೂಲಕ ದೂರು ಸ್ವೀಕರಿಸಲು ಚುನಾವಣಾ ಘೋಷಣೆಯಾದ ಮಾರ್ಚ 15 ರಿಂದಲೇ ಜಿಲ್ಲೆಯಲ್ಲಿ ಪ್ರಾರಂಭಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

# ಜಲ ಸಂರಕ್ಷಣೆ ಇಂದಿನ ಅನಿವಾರ್ಯತೆ: ಸಿಇಒ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಪ್ರಸ್ತುತದಲ್ಲಿ ಜಲ ಸಂರಕ್ಷಣೆಯು ತುಂಬಾ ಅನಿವಾರ್ಯವಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಸರಳಾದೇವಿ ಸತೀಶ್ಚಂದ್ರ ಅಗರ್ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಿಲ್ಲಾ ಪಂಚಾಯತ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಆಯೋಜಿಸಿದ್ದ 'ವಿಶ್ವ ಜಲ ದಿನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನೀರನ್ನು ಮಿತವಾಗಿ ಬಳಸಿ, ಮುಂದಿನ ಪೀಳಿಗೆಗಾಗಿ ಅದನ್ನು ಸಂರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಿದೆ ಎಂದು ಅವರು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ನಿಂಗಪ್ಪ ಹೊಸಮನೆ ಅವರು ಮಾತನಾಡಿ, ಜಲ ಸಂರಕ್ಷಣೆಯ ಕಾನೂನಾತ್ಮಕ ಅರಿವು ಹಾಗೂ ನೀರಿನ ಮಹತ್ವ ಹೊಂದುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ ಎಂದು ಹೇಳಿದರು.

"ನೀರು ಮತ್ತು ಲಿಂಗ ಸಮಾನತೆ" "ಎಲ್ಲಿ ನೀರು ಹರಿಯುತ್ತದೆಯೋ, ಅಲ್ಲಿ ಸಮಾನತೆ ಬೆಳೆಯುತ್ತದೆ" ಎಂಬುದು 2026 ರ ಘೋಷವಾಕ್ಯವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸರಳಾದೇವಿ ಸತೀಶ್ಚಂದ್ರ ಅಗರ್ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ.ಪ್ರಹ್ಲಾದ ಜೋಶಿ, ಜಿಪಂ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ, ಜಿಪಂ ಮುಖ್ಯ ಲೆಕ್ಕಾಧಿಕಾರಿ ವಿನೋದ್ ಕುಮಾರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರ್ಯನಿರ್ವಾಹಕ ಅಭಿಯಂತರ ಇಂಧುದರ ಸೇರಿದಂತೆ ವಿವಿಧ ತಾಲ್ಲೂಕುಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಹಾಯಕ ಅಭಿಯಂತರರು, ಕಿರಿಯ ಅಭಿಯಂತರರು ಹಾಗೂ ಜಿಪಂ ಆಕಒ, ಒಖಖ ವಿಭಾಗದ ಸಿಬ್ಬಂದಿ, ಪ್ರಯೋಗಾಲಯದ ಸಿಬ್ಬಂದಿ, ಆಖಖಗ ಮತ್ತು ಸ್ವಚ್ಛ ಭಾರತ್ ಮಿಷನ್ ಸಿಬ್ಬಂದಿ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಂತ್ರಸ್ತರಿಗೆ ನೆರವಿನ ಹಸ್ತ ಚಾಚಿದ ಸಚಿವ ಸಂತೋಷ್ ಲಾಡ್

• ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ




ಕಲಘಟಗಿ ಪಟ್ಟಣದ ಮಾಚಾಪೂರ ಗ್ರಾಮದಲ್ಲಿ ಹಾನಿಗೊಳಗಾದ ಸಂತ್ರಸ್ತರಿಗೆ ಲಾಡ್ ಫೌಂಡೇಶನ್ ವತಿಯಿಂದ ಹೆಂಚುಗಳನ್ನು ವಿತರಿಸಲಾಯಿತು.

ತಾಲೂಕಿನ ಕೆಲ ಭಾಗದಲ್ಲಿ ಕಂಡು ಕೇಳರಿಯದ ರೀತಿಯಲ್ಲಿ ಸುರಿದ ಆಲಿಕಲ್ಲು ಮಳೆಯಿಂದ ಹಾನಿಗೊಳಗಾದ ಸಂತ್ರಸ್ತರಿಗೆ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಎಸ್. ಲಾಡ್ ತಮ್ಮ ಫೌಂಡೇಶನ್ ವತಿಯಿಂದ ಉಚಿತವಾಗಿ ಹೆಂಚುಗಳನ್ನು ವಿತರಿಸಿದರು.

ಪಟ್ಟಣದ ಮಾಚಾಪೂರ ಗ್ರಾಮ ಸಂಪೂರ್ಣ ಹಾನಿಗೊಳಗಾಗಿದ್ದು ಆ ಮನೆಗಳ ಸಂತ್ರಸ್ತರಿಗೆ ಒಟ್ಟು 50 ಸಾವಿರ

ಹೆಂಚುಗಳನ್ನು 210 ಕ್ಕೂ ಹೆಚ್ಚು ಮನೆಗಳಿಗೆ ಪ್ರತಿ ಕುಟುಂಬಕ್ಕೂ 200 ಹೆಂಚುಗಳನ್ನು ಜಿಲ್ಲಾ ಗ್ಯಾರೆಂಟಿ ಯೋಜನೆಯ ಅಧ್ಯಕ್ಷ ಎಸ್.ಆರ್ ಪಾಟೀಲ, ತಾಲೂಕಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ಮುರಳ್ಳಿ ವಿತರಣೆ ಮಾಡಿದರು.

ಜಿಲ್ಲಾ ಪಂಚ ಗ್ಯಾರಂಟಿ ಅಧ್ಯಕ್ಷ ಎಸ್. ಆರ್ ಪಾಟೀಲ ಮಾತನಾಡಿ ಸಚಿವ ಸಂತೋಷ್ ಎಸ್. ಲಾಡ್ ಅವರು, ಕ್ಷೇತ್ರದ ಜನರಿಗೆ ತೊಂದರೆಯಾದಾಗಲೆಲ್ಲಾ ತ್ವರಿತವಾಗಿ ಸ್ಪಂದಿಸಿದ್ದಾರೆ. ಈ ಬಾರಿ ಆಲಿಕಲ್ಲಿನಿಂದ ಹಾನಿಗೊಳಗಾದ ಮನೆಗಳಿಗೆ ಹೆಂಚುಗಳನ್ನು ಉಚಿತವಾಗಿ ನೀಡಿದ್ದಾರೆ.

ತಾಲೂಕಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ಮುರಳ್ಳಿ ಮಾತನಾಡಿ ಶೀಘ್ರದಲ್ಲೇ ಕ್ಷೇತ್ರಕ್ಕೆ ಸಚಿವರು ಭೇಟಿ ನೀಡಲಿದ್ದು ಅಧಿವೇಶನದ ಕಲಾಪದಲ್ಲಿ ಸಚಿವ ಲಾಡ್ ಅವರು ಭಾಗವಹಿಸಿದ್ದಾರೆ. ಮಳೆ ಮತ್ತು ಆಲಿಕಲ್ಲಿನಿಂದ ಉಂಟಾಗಿರುವ ಹಾನಿಯ ಮಾಹಿತಿ ಪಡೆದಿದ್ದು ಶೀಘ್ರದಲ್ಲೇ ಕ್ಷೇತ್ರಕ್ಕೆ ಭೇಟಿ ನೀಡಲಿದ್ದಾರೆ ಎಂದರು.

ಇ ಸಂಧರ್ಬದಲ್ಲಿ ಕೃಷಿಕ ಸಮಾಜದ ಅಧ್ಯಕ್ಷ ಬಾಬು ಅಂಚಟಗೇರಿ, ಬಾಳು ಖಾನಾಪೂರ, ಹರಿಶಂಕರ ಮಠದ, ಸುಧೀರ ಬೋಳಾರ, ಸೋಮಶೇಕರ ಬೆನ್ನೂರ, ಹನಮಂತ ಚೌರಗುಡ್ಡ, ಬೂದಪ್ಪ ಹುರಕಡ್ಲಿ, ಗಿರೀಶ ಸೂರ್ಯವಂಶಿ, ಪ್ರವೀಣ ಸೂರ್ಯವಂಶಿ, ಗುರು ಕಂಪ್ಲಿ, ನಾಗಪ್ಪ ಇಂದೂರ, ಬಸವರಾಜ ಕೆಲಗೇರಿ, ಮಂಜುನಾಥ ವಾಲಿಕಾರ, ವಿಜಯ ಮುರಾರಿ, ಬಸವಣೆಪ್ಪ ಬ್ಯಾಹಟ್ಟಿ, ಬಸವಣೆಪ್ಪ ಹೊನ್ನಳ್ಳಿ ಬಸವಣೆಯ್ಯ ಹೆಬ್ಬಳ್ಳಿಮಠ, ಸಹದೇವಪ್ಪ ಹುರಕಡ್ಲಿ, ಕಾಡಯ್ಯ ಹೆಬ್ಬಳ್ಳಿಮಠ, ಚಂದ್ರಯ್ಯ ಹೆಬ್ಬಳ್ಳಿಮಠ, ಇದ್ದರು.



**ಹೊಸ ಜಾಹೀರಾತುನೀತಿಯು ಕಠಿಣ ನಿಯಮಗಳಿಂದ ಕುಡಿದೆ. ಇದನ್ನು ಪರಿಷ್ಕರಿಸಿ ಪತ್ರಿಕೆಗಳಿಗೆ ಅನುಕೂಲವಾಗುವಂತೆ ನಿಯಮ ರೂಪಿಸಿ ಎಂದು ಕರ್ನಾಟಕ ದಿನ ಪತ್ರಿಕೆಗಳ ಸಂಘದ ರಾಜ್ಯಾಧ್ಯಕ್ಷ ಡಾ.ಜಿ.ವೈ. ಪದ್ಮನಾಗರಾಜ್ ಅವರು ರಾಜ್ಯದ ಎಲ್ಲಾ ಪತ್ರಿಕೆಗಳ ಪರವಾಗಿ ಮುಖ್ಯಮಂತ್ರಿ ಅವರಿಗೂ ಹಾಗೂ ಮಾಧ್ಯಮ ಸಲಹೆಗಾರ ಪ್ರಭಾಕರ್ ಅವರಿಗೂ ಮನವಿ ಸಲ್ಲಿಸಿದ್ದಾರೆ.**

## ಮತಾಂತರವಾದ ವ್ಯಕ್ತಿಗೆ ರಕ್ಷಣೆ ಸಲ್ಲ

**ಬೀದರ್ ಹೊಸದಿಲ್ಲಿ:** ಹಿಂದೂ ಧರ್ಮ, ಸಿಖ್ ಅಥವಾ ಬೌದ್ಧ ಧರ್ಮವನ್ನು ಹೊರತುಪಡಿಸಿ ಬೇರೆ ಧರ್ಮಕ್ಕೆ ಮತಾಂತರಗೊಳ್ಳುವ ವ್ಯಕ್ತಿ ಪರಿಶಿಷ್ಟ ಜಾತಿ ಸ್ಥಾನಮಾನಕ್ಕೆ ಅರ್ಹನಾಗಿರುವುದಿಲ್ಲ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯಡಿ ರಕ್ಷಣೆ ಪಡೆಯುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ತೀರ್ಪು ನೀಡಿದೆ. ಹಿಂದೂ ಧರ್ಮ, ಸಿಖ್ ಅಥವಾ ಬೌದ್ಧ ಧರ್ಮವನ್ನು ಪ್ರತಿಪಾದಿಸುವ ವ್ಯಕ್ತಿಗಳು ಮಾತ್ರ ಪರಿಶಿಷ್ಟ ಜಾತಿ ಸ್ಥಾನಮಾನವನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾರೆ ಎಂದು ನ್ಯಾಯಾಲಯವು ತೀರ್ಪು ನೀಡಿದೆ.

## ಶಂಕರಪುರಕ್ಕೆ ಹನುಮ ಜ್ಯೋತಿ




**ಗಂಗಾವತಿ:** ಇಂದು ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂದೇಶ್ ಅಡುಗೆಮನೆ, ಉಡುಪಿ ಜಿಲ್ಲೆಯ ಶ್ರೀ ಕ್ಷೇತ್ರ ಶಂಕರಪುರ ಸುಮಾರು 11 ವರ್ಷಗಳಿಂದ ಧಾರ್ಮಿಕ, ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿರುವ ಶ್ರೀ ಶ್ರೀ ಸಾಯಿ ಈಶ್ವರ್ ಗುರೂಜಿಯವರು ಶ್ರೀ ಕ್ಷೇತ್ರ ಆವರಣದಲ್ಲಿ ಹಿಂದೂ ಬಾಂಧವರ ಒಗ್ಗಟ್ಟು ಮತ್ತು ಏಳಿಗೆಯ ಮಹಾ ಸಂಕಲ್ಪದಲ್ಲಿ ಸುಮಾರು 60 ಲಕ್ಷ ರೂಪಾಯಿ ವೆಚ್ಚದಲ್ಲಿ 19 ಅಡಿ ಎತ್ತರದ ಏಕ ಶಿಲಾ ಶ್ರೀ ಮುಖ್ಯಪ್ರಾಣನ ಮೂರ್ತಿ ಸ್ಥಾಪನೆಯನ್ನು 2026 ಎಪ್ರಿಲ್ 02 ರಂದು ಪ್ರತಿಷ್ಠಾಪಿಸಲಿದ್ದು, ಈ ಬಗ್ಗೆ ಮಾರ್ಚ್ 26ರ ರಾಮನವಮಿಯಂದು ಹನುಮ ಜನ್ಮ ಭೂಮಿಯಿಂದ ಹನುಮ ಜ್ಯೋತಿ, ಕೌಮೋದಕಿ ಗಧೆ ಮತ್ತು ಹನುಮ ಧ್ವಜವು ಹೊರಟು ಮಾರ್ಚ್ 29ಕ್ಕೆ ಉಡುಪಿ ತಲುಪಲಿದೆ. ಉಡುಪಿ ಜೋಡುಕಟ್ಟೆಯಿಂದ ಅವಧೂತ ಭಗವಾನ್ ನಿತ್ಯಾನಂದ ಸ್ವಾಮಿಯ 210ಕೆಜಿ ತೂಕದ ಪಂಚಲೋಹ ಮೂರ್ತಿ ಹಾಗೂ ಹಸಿರು ಹೊರೆಕಾಣಿಕೆಯಿಂದ ಭವ್ಯ ಮೆರವಣಿಗೆಯಿಂದ ಶ್ರೀ ಕ್ಷೇತ್ರ ತಲುಪಲಿದೆ. ಮಾರ್ಚ್ 31ರಿಂದ ಎಪ್ರಿಲ್ 03ರ ವರೆಗೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು, ಹಾಗೂ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ನಡೆಯಲಿದೆ ಈ ಕಾರ್ಯಕ್ರಮಕ್ಕೆ ರಥಯಾತ್ರೆಗೆ ಚಾಲನೆ ನೀಡಲಕ್ಕೆ ರಾಜಮಾತೆ ಶ್ರೀಮತಿ ಲಲಿತಾ ರಾಣಿ ಶ್ರೀರಂಗದೇವರಾಯಲು ಹಾಗೂ ಸ್ಥಳೀಯ ಶಾಸಕರಾದ ಗಾಲಿ ಜನಾರ್ಧನರೆಡ್ಡಿ,ಮಾಜಿ ಶಾಸಕರು ಮಾಜಿ ಸಂಸದರು ಸೇರಿದಂತೆ ಅನೇಕ ರಾಜಕೀಯ ನಾಯಕರು ಮುಖಂಡರು ಆಗಮಿಸುತ್ತಾರೆ ,24.03.2026 ರಂದು ಬೆಳಿಗ್ಗೆ 10.00ಕ್ಕೆ ತಮ್ಮ ದೃಶ್ಯ, ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಈ ಸಂದರ್ಭದಲ್ಲಿ ಹಿಂದು ಜಾಗರಣ ವೇದಿಕೆ ಕರ್ನಾಟಕ ಉತ್ತರ ಪ್ರಾಂತ ಸಹಸಂಯೋಜಕ ನೀಲಕಂಠಪ್ಪ ನಾಗಶೆಟ್ಟಿ,ವಿಜಯ ಕೊಡುವೂರು,ಜಯರಾಮ್ ಶೆಟ್ಟಿಗಾರ್,ಸತೀಶ ದೇವಾಡಗ,ಸೇರಿದಂತೆ ಇತರರು ಇದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ನವೀಕೃತ ಪ್ರವೇಶ ದ್ವಾರವನ್ನು ಉದ್ಘಾಟಿಸಿದ ಸಂದರ್ಭ.

## ರಸ್ತೆ ಅಗಲೀಕರಣದ ಟಿ.ಡಿ.ಆರ್. ಸಭೆ

**ಬೆಂಗಳೂರು:** ಉತ್ತರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ, ಟಿ.ಡಿ.ಆರ್.(TransferableDevelopmentRight) ಹಾಗೂ ವಿವಿಧ ಕಾಮಗಾರಿಗಳ ಪ್ರಗತಿ ಕುರಿತು ನಗರ ಪಾಲಿಕೆಯ ಆಯುಕ್ತರಾದ ಶ್ರೀ ಪೊಮ್ಮಲ ಸುನೀಲ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಇಂದು ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ಸಮಗ್ರ ಪರಿಶೀಲನಾ ಸಭೆ ನಡೆಯಿತು.

ಸಭೆಯಲ್ಲಿ 'ಸುರಕ್ಷೆ-75' ಯೋಜನೆಯಡಿ ಕೈಗೊಂಡಿರುವ 16 ವೃತ್ತಗಳ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಲಾಯಿತು. ಮೆಟ್ರೋ ಕಾಮಗಾರಿ, ಅಂಡರ್‌ಪಾಸ್ ಮತ್ತು ಫ್ಲೈಓವರ್‌ಗಳ ಕಾರಣದಿಂದ ಬಾಕಿ ಉಳಿದ ವೃತ್ತಗಳನ್ನು ಹೊರತುಪಡಿಸಿ, ಉಳಿದ 9 ವೃತ್ತಗಳ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲು ಆಯುಕ್ತರು ಸೂಚಿಸಿದರು.

ರಸ್ತೆ ಅಗಲೀಕರಣ ಹಾಗೂ ಟಿ.ಡಿ.ಆರ್. ಕುರಿತು ಚರ್ಚೆ ಸಭೆಯಲ್ಲಿ ರಸ್ತೆ ಅಗಲೀಕರಣ ಹಾಗೂ ಟಿ.ಡಿ.ಆರ್. ಕುರಿತು ಚರ್ಚೆ ನಡೆಯಿತು. ಈಗಾಗಲೇ ಕಾಮಗಾರಿಗಳು ಪೂರ್ಣಗೊಂಡಿದ್ದರೂ ಟಿ.ಡಿ.ಆರ್. ಪೂರೈಕೆಯಲ್ಲಿ ವಿಳಂಬವಾಗಿರುವುದನ್ನು ಗಮನಿಸಿದ ಆಯುಕ್ತರು, ತ್ವರಿತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ವೇಳೆ ಕಾನೂನಿನ ಎಲ್ಲಾ ತೊಡಕುಗಳನ್ನು ನಿವಾರಿಸಿಕೊಂಡು, ಟಿ.ಡಿ.ಆರ್. ಗಳನ್ನು ಶೀಘ್ರದಲ್ಲಿ ಪೂರೈಸಲು ಸಂಬಂಧಿತ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ಅಪರ ಆಯುಕ್ತರು (ಅಭಿವೃದ್ಧಿ) ಶ್ರೀಮತಿ ಲತಾ, ಜಂಟಿ ಆಯುಕ್ತರು ಶ್ರೀ ಮೊಹಮ್ಮದ್ ನಯೀಮ್ ಮೊಮಿನ್ ಮತ್ತು ಶ್ರೀಮತಿ ಪಲ್ಲವಿ, ಮುಖ್ಯ ಅಭಿಯಂತರರಾದ ರಾಘವೇಂದ್ರ ಪ್ರಸಾದ್ ಮತ್ತು ಯಮುನಾ, ಅಧೀಕ್ಷಕ ಅಭಿಯಂತರರಾದ ಪ್ರಕಾಶ್ ಮತ್ತು ಕೃಷ್ಣಕುಮಾರ್, ಅಧಿಕಾರಿಗಳು, ಸಮಾಲೋಚಕರು, ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಪೊಲೀಸ್ ಹಾಗೂ ಇತರೆ ಸಂಬಂಧಿತ ಅಧಿಕಾರಿಗಳು ಉಪಸ್ಥಿತರಿದ್ದರು.

# ಯುವ ಪಶುವೈದ್ಯ ಸಮೀಕ್ಷಾ ರೆಡ್ಡಿ ಸಾವಿಗೆ ನ್ಯಾಯ

• **ಮಲ್ಲಮ್ಮ ನುಡಿ ವಾರ್ತೆ ಆನೇಕಲ್**

ಶಿವಮೊಗ್ಗದ ತ್ಯಾವರೆಕೊಪ್ಪ ಮೃಗಾಲಯದಲ್ಲಿ ನೀರಾನೆ ದಾಳಿಯಿಂದ ಮೃತಪಟ್ಟ ಯುವ ಪಶುವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಸಾವಿಗೆ ನ್ಯಾಯ ದೊರಕಿಸಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಕುಟುಂಬದವರಿಗೆ ಆಶ್ವಾಸನೆ ನೀಡಿದ್ದಾರೆ.



ಆನೆಕಲ್ ಬಳಿಯ ಸಕಲವಾರದಲ್ಲಿರುವ ಡಾ. ಸಮೀಕ್ಷಾ ರೆಡ್ಡಿ ಅವರ ನಿವಾಸಕ್ಕೆ ತೆರಳಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದ ಅವರು, ಇದೊಂದು ಅತ್ಯಂತ ನೋವಿನ ಸಂಗತಿ. ಸರ್ಕಾರ ಈ ನೋವಿನ ಸಂದರ್ಭದಲ್ಲಿ ಕುಟುಂಬದೊಂದಿಗೆ ನಿಲ್ಲುತ್ತದೆ ಎಂದರು.

ವನ್ಯಜೀವಿ ಚಿಕಿತ್ಸೆ ವೇಳೆ ಹುತಾತ್ಮರಾದ ಯುವವೈದ್ಯೆಯ ಹೆಸರಲ್ಲಿ ಸ್ಮಾರಕ ನಿರ್ಮಿಸಬೇಕು ಎಂಬ ಅವರ ತಂದೆ ಧ್ರುವಕುಮಾರ್ ಮತ್ತು ತಾಯಿ ಶೈಲಜಾ ರೆಡ್ಡಿ ಅವರ ಬೇಡಿಕೆಯನ್ನು ಪರಿಶೀಲಿಸುವುದಾಗಿ ತಿಳಿಸಿದರು.

ಮೃಗಾಲಯದಲ್ಲಿ ವನ್ಯಜೀವಿಗಳಿಗೆ ಪಶುವೈದ್ಯರು ಚಿಕಿತ್ಸೆ ನೀಡುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಲ್ಲಿ ಯಾವುದೇ ಲಿಖಿತ ಪ್ರಮಾಣಿತ ಮಾನದಂಡ ಇಲ್ಲ. ಈ ನಿಟ್ಟಿನಲ್ಲಿ ಮಹಿಳಾ ಪಶುವೈದ್ಯರಿಗೆ ಹಾಗೂ ವೈದ್ಯರಿಗೆ ಸುರಕ್ಷತೆ ಕಲ್ಪಿಸುವುದೂ ಸೇರಿದಂತೆ ಕೂಡಲೇ ಸೂಕ್ತ ಎಸ್.ಓ.ಪಿ. ರೂಪಿಸುವಂತೆ ಹಾಗೂ ಕಟ್ಟುನಿಟ್ಟಾಗಿ ಪಾಲನೆ ಮಾಡುವಂತೆ ತಾವು ಸೂಚನೆ ನೀಡಿರುವುದಾಗಿ ಈಶ್ವರ ಖಂಡ್ರೆ ತಿಳಿಸಿದರು.

ಈ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯುವ ಪಶುವೈದ್ಯೆ ಸಮೀಕ್ಷಾ ರೆಡ್ಡಿಗೆ ವನ್ಯಜೀವಿಗಳ ಬಗ್ಗೆ ಅಪಾರ ಕಾಳಜಿ ಇತ್ತು. ಅವರು ಚಿರತೆಯೊಂದಕ್ಕೆ ಚಿಕಿತ್ಸೆ ನೀಡಿ ಗುಣಪಡಿಸಿದ್ದ ಬಗ್ಗೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಇವರ ಸಾವಿನಿಂದ ರಾಜ್ಯ ಒಬ್ಬ ಯುವ ಪಶುವೈದ್ಯೆಯನ್ನು ಕಳೆದುಕೊಂಡಿದೆ ಎಂದರು.

ಮಗಳ ನೋವಿನ ನಡುವೆಯೂ ಕುಟುಂಬದ ಸದಸ್ಯರು ಸಾಮಾಜಿಕ ಕಾಳಜಿ ತೋರಿದ್ದಾರೆ. ಹಲವು ಸಲಹೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಪಶುವೈದ್ಯರು ಕೂಡ ತಮ್ಮನ್ನು ಭೇಟಿ ಮಾಡಿ ಪಶುವೈದ್ಯರ ಸಮಸ್ಯೆಗಳನ್ನೂ ತಿಳಿಸಿದ್ದಾರೆ. ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ವಹಿಸಲಾಗುವುದು ಎಂದರು.

ತಮಗೆ ಈ ಘಟನೆಯು ಬಗ್ಗೆ ತಿಳಿದ ಕೂಡಲೇ ಹಿರಿಯ ಅಧಿಕಾರಿಗಳ ಸಭೆ ಕರೆದು ಉನ್ನತ ಮಟ್ಟದ ತನಿಖೆಗೆ ಆದೇಶ ನೀಡಿದ್ದೇನೆ. ತನಿಖಾ ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ತಮಗೆ ಪರಿಹಾರ ನೀಡುವುದು ಬೇಡ, ಪರಿಹಾರದ ಹಣದಲ್ಲಿ ಡಾ. ಸಮೀಕ್ಷಾ ರೆಡ್ಡಿ ಅವರ ಹೆಸರಲ್ಲಿ ಸ್ಮಾರಕ ಮಾಡಲು ಕೋರಿದ್ದಾರೆ. ಆನೆಗೆ ಅವರ ಹೆಸರಿಡಬೇಕು ಎಂಬ ಸಲಹೆ ಬಂದಿದೆ. ಎಲ್ಲ ವಿಚಾರಗಳ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ಅರಣ್ಯ ಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕರಾದ ಕುಮಾರ್ ಪುಷ್ಕರ್ ಮತ್ತಿತರರು ಪಾಲ್ಗೊಂಡಿದ್ದರು.

## ವಿವಿಧೆಡೆ ದಾಳಿ: ಒಬ್ಬ ಬಾಲಕಾರ್ಮಿಕನ ರಕ್ಷಣೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಕಾರ್ಮಿಕ ಇಲಾಖೆ, ಜಿಲ್ಲಾ ಬಾಲ ಕಾರ್ಮಿಕ ಯೋಜನೆ ಹಾಗೂ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಮಂಗಳವಾರ ನಗರದ ವಿವಿಧೆಡೆ ದಾಳಿ ನಡೆಸಿ ಓರ್ವ ಬಾಲ ಕಾರ್ಮಿಕನನ್ನು ರಕ್ಷಿಸಲಾಗಿದೆ.

ಜಿಲ್ಲಾಧಿಕಾರಿಯವರ ನಿರ್ದೇಶನದ ಮೇರೆಗೆ ಹಾಗೂ ಪ್ಯಾನ್-ಇಂಡಿಯಾ ರಕ್ಷಣೆ ಮತ್ತು ಪುನರ್ವಸತಿ ಅಭಿಯಾನ ಅಂಗವಾಗಿ ಉಪತಹಶೀಲ್ದಾರ ಮಂಜುನಾಥ ಅವರ ಅಧ್ಯಕ್ಷತೆಯಲ್ಲಿ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕರ ಟಾಸ್ಕ್‌ಫೋರ್ಸ್ ಸಮಿತಿ ಸಭೆ ನಡೆಸಿ ಈ ದಾಳಿ ಕೈಗೊಳ್ಳಲಾಗಿದೆ. ನಗರದ ಬೆಂಗಳೂರು ರಸ್ತೆ, ಬಾಪೂಜಿ ನಗರ, ಎ.ಪಿ.ಎಂ.ಸಿ ಹತ್ತಿರದ ವಿವಿಧ ಸ್ಥಳಗಳಲ್ಲಿರುವ ಗ್ಯಾರೇಜ್, ಮೆಕ್ಯಾನಿಕ್ ಶಾಪ್, ಬೇಕರಿ, ಜೀನ್ಸ್ ಹೊಲಿಗೆ ಘಟಕಗಳ ಮೇಲೆ ಟಾಸ್ಕ್ ಫೋರ್ಸ್ ಸಮಿತಿ ಮೂಲಕ ಭೇಟಿ ನೀಡಿದ ಸಂದರ್ಭದಲ್ಲಿ ಮಕ್ಕಳು ಕೆಲಸ ಮಾಡುತ್ತಿರುವುದನ್ನು ಗಮನಿಸಲಾಯಿತು. ತಕ್ಷಣ ಅಲ್ಲಿ ಕೆಲಸ ನಿರ್ವಹಿಸುತ್ತಿದ್ದ 01 ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಮಕ್ಕಳನ್ನು ವಶಕ್ಕೆ ಪಡೆದು



ಮಕ್ಕಳ ಹೇಳಿಕೆಗಳನ್ನು ಸ್ಥಳದಲ್ಲಿಯೇ ಪಡೆದುಕೊಂಡು ಪೋಷಕರ ವಶಕ್ಕೆ ಒಪ್ಪಿಸಲಾಯಿತು.

ಇದೇ ವೇಳೆ ಎಲ್ಲಾ ಉದ್ದಿಮೆಗಳ ಮಾಲೀಕರಿಗೆ ಕರಪತ್ರ ಹಾಗೂ ಪೋಸ್ಟರ್‌ಗಳನ್ನು ನೀಡಿ ಜಾಗೃತಿ ಮೂಡಿಸಲಾಯಿತು. ಈ ಟಾಸ್ಕ್‌ಫೋರ್ಸ್ ಸಮಿತಿಯಲ್ಲಿ ಬಳ್ಳಾರಿಯ 1ನೇ ವೃತ್ತದ ಕಾರ್ಮಿಕ ನಿರೀಕ್ಷಕ ರಮೇಶ್, 2ನೇ ವೃತ್ತದ ಕಾರ್ಮಿಕ ನಿರೀಕ್ಷಕ ಪರಶುರಾಮ್, ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಮೌನೇಶ್, ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ಹೊನ್ನೂರಪ್ಪ, ಮಕ್ಕಳ ಸಹಾಯವಾಣಿ ಸಿಬ್ಬಂದಿ ಕಾರ್ತಿಕ್ ಮತ್ತು ರೀಚ್ ಸಂಸ್ಥೆಯ ಸಂಯೋಜಿಕಿ ಲಕ್ಷೀ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

## ಮಂಗಳೂರು ಕೂಸಿನ ಮನೆಯ ಅಧ್ಯಯನ

• **ಮಲ್ಲಮ್ಮ ನುಡಿ ವಾರ್ತೆಕೊಪ್ಪಳ**

ಜಿಲ್ಲೆಯ ಕೂಸಿನಮನೆ ಕಾರ್ಯನಿರ್ವಹಣೆ ಕುರಿತು ಅಧ್ಯಯನ ಕೈಗೊಳ್ಳಲು ಬೆಂಗಳೂರು ಮೂಲದ IIHS ಸಂಸ್ಥೆ (Indian Institute for Human Settle-ment) ಸಾಯಿರಾಮ್ ಮತ್ತು ಸುಕನ್ಯಾ ತಂಡವು ಕುಕನೂರ ತಾಲೂಕಿನ ಮಂಗಳೂರು ಕೂಸಿನ ಮನೆಗಳಿಗೆ ಭೇಟಿ ನೀಡಿ ಕಾರ್ಯನಿರ್ವಹಣೆ, ಮಕ್ಕಳ ಹಾಜರಾತಿ,ಆಹಾರ ವಿತರಣೆ, ಕಲಿಕಾ ಪೂರ್ವ ಚಟುವಟಿಕೆಗಳನ್ನು ಪರಿಶೀಲಿಸಿತು.

ಕೇರ್ ಟೇಕರ್ಸ್ ಕಾರ್ಯವೈಖರಿ, ಪ್ರತಿ ತಿಂಗಳು ಪೋಷಕರ ಸಭೆ, ಮಕ್ಕಳ ಆರೋಗ್ಯ ತಪಾಸಣೆ, ಕೇರ್ ಟೇಕರ್ಸ್ ವೇತನ ಪಾವತಿ, ಹಣಕಾಸಿನ ವ್ಯವಸ್ಥೆ, ಪ್ರತಿ ಮಾಸಿಕ ಕೂಸಿನ ಮನೆ ಮೇಲುಸ್ತುವಾರಿ ಸಭೆ ಜರುಗುವ ಬಗ್ಗೆ ಪಂಚಾಯತ ಅಭಿವೃದ್ಧಿ ಅಧಿಕಾರಿ, ಕೇರ್ ಟೇಕರ್ಸ್ ಹಾಗೂ ಪೋಷಕರ ಜೊತೆ ಸುದೀರ್ಘ ಚರ್ಚೆ ಜರುಗಿಸಿತು.

ಕೂಸಿನ ಮನೆಯಿಂದ ಆಗಿರುವ ಅನುಕೂಲ



ಕುರಿತು ಪೋಷಕರು ಅಭಿಪ್ರಾಯ ವ್ಯಕ್ತಪಡಿಸಿದರು.

ಕೂಸಿನ ಮನೆ ನಿರ್ವಹಣೆ ಕುರಿತು ಕೆಲವು ಸಲಹೆ ನೀಡಿತು. ಕೂಸಿನ ಮನೆ ನಿರ್ವಹಣೆ ಕುರಿತು ಇದೇ ಸಂದರ್ಭದಲ್ಲಿ ಮೆಚ್ಚುಗೆ ವ್ಯಕ್ತಪಡಿಸಿತು.

ತಾಲೂಕ ಐಇಸಿ ಸಂಯೋಜಕ ಲಕ್ಷ್ಮಣ ಕೆರಳ್ಳಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ನೀಲಮ್ಮ ಚಳಗೇರಿ, ಕಾರ್ಯದರ್ಶಿ ಜಂಬಣ್ಣ, ಕೇರ್ ಟೇಕರ್ಸ್ ಗ್ರಾ.ಪಂ ಸಿಬ್ಬಂದಿಗಳು ಹಾಜರಿದ್ದರು.

## ಸದಸ್ಯರ ಸಹಕಾರದಿಂದ ಪಟ್ಟಣ ಅಭಿವೃದ್ಧಿ

• **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**

ಪಟ್ಟಣದ ಸರ್ವತೋಮುಖ ಅಭಿವೃದ್ಧಿಯಲ್ಲಿ ಎಲ್ಲ ಸದಸ್ಯರ ಸಹಕಾರವೂ ಮುಖ್ಯ ಎಂದು ಪುರಸಭೆ ಅಧ್ಯಕ್ಷ ಎಂ. ಮರಿ ರಾಮಪ್ಪ ಹೇಳಿದರು.

ನಾನು ಪುರಸಭೆ ಅಧ್ಯಕ್ಷನಾದ ಮೇಲೆ ಸುಮಾರು 18 ತಿಂಗಳುಗಳ ಕಾಲ ನನಗೆ ಸಹಕರಿಸಿದ ಸರ್ವಸದಸ್ಯರಿಗೂ ಹೃದಯಪೂರ್ವಕ ಧನ್ಯವಾದಗಳು ಎಂದು ಅವರು ಕೃತಜ್ಞತೆ ತಿಳಿಸಿದರು.ಹಾಗೆಯೇ ಮುಂದಿನ ದಿನಮಾನಗಳಲ್ಲಿ ಯಾರೇ ಅಧ್ಯಕ್ಷರಾದರೂ ಅವರಿಗೆ ಸಹಕರಿಸೋಣ ಎಂದರು.

ಅವರು ಪುರಸಭೆಯ 2026-27 ನೆಯ ಸಾಲಿನ ಆಯವ್ಯಯ ಮಂಡಿಸಿ ಮಾತನಾಡಿದರು. ಪ್ರತಿ ವಾರ್ಡ್ಗಳಿಗೂ ಪುರಸಭೆ ಅನುದಾನ ಲಭ್ಯವಿದ್ದು ಪ್ರತಿ ಸದಸ್ಯರು ಕೆಲಸ,ಕಾಮಗಾರಿಗಳ ಪಟ್ಟಿಕೊಡಲು ಸದಸ್ಯರಲ್ಲಿ ವಿನಂತಿಸಿಕೊಂಡರು.

ಈ ವರ್ಷ ಪುರಸಭೆ ಆದಾಯ 5.30 ಕೋ. ರೂ.ನಿರೀಕ್ಷೆ ಇದ್ದು, 5.50 ಕೋಟಿ. ರೂ.ಗಳ ಖರ್ಚನ್ನು ನಿರೀಕ್ಷಿಸಲಾಗಿದೆ.

ಪ್ರತಿ ವಾರ್ಡಗಳಲ್ಲಿ ವೈಯಕ್ತಿಕ ಹಾಗೂ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು,ಗರಿಷ್ಠ




ಭೌತಿಕಗುರಿಗಳನ್ನು ಹೊಂದಲಾಗಿದೆ. ಪರಿಶಿಷ್ಟಜಾತಿ/ ಪರಿಶಿಷ್ಟ ಪಂಗಡಗಳ ಕಾಯ್ದಿರಿಸಿದ ಧನದಲ್ಲಿ ಶಾಲಾ ಮಕ್ಕಳಿಗೆ ಪುಸ್ತಕ ಲ್ಯಾಪ್ ಟಾಪ್ ಮುಂತಾದ ಶೈಕ್ಷಣಿಕ ಸಾಮಗ್ರಿಗಳನ್ನು ಒದಗಿಸಿ ಮಕ್ಕಳ ಕಲ್ಯಾಣದ ಹಲವು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

16 ನೆಯ ಹಣಕಾಸಿನಲ್ಲಿಯೂ ಕೂಡ ರಸ್ತೆ, ಕಟ್ಟಡಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಹಾಗೆಯೇ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು ಚರಂಡಿ, ಬೀದಿ ದೀಪ, ಸಿಬ್ಬಂದಿಗಳ ವೇತನ,ಕಚೇರಿಯ ಪೀಠೋಪಕರಣಗಳು ಹಾಗೂ ಅನುಪಯುಕ್ತ ವಸ್ತುಗಳ ಮಾರಾಟದಿಂದ ಬಂದ ಆದಾಯ ಇವೆಲ್ಲವುಗಳನ್ನು ಸರಿದೂಗಿಸಲು ಕ್ರಮ ಕೈಗೊಳ್ಳುವುದು.ಒಟ್ಟಾರೆ ಪುರಸಭೆ ವ್ಯಾಪ್ತಿಯ ಎಲ್ಲಾ ವಾರ್ಡ್ ಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವುದು.

ಈ ಸಂದರ್ಭದಲ್ಲಿ ಪುರಸಭೆಯ ಉಪಾಧ್ಯಕ್ಷರು, ಸರ್ವ ಸದಸ್ಯರು,ನಾಮನಿರ್ದೇಶಿತ ಸದಸ್ಯರು, ಮುಖ್ಯಾಧಿಕಾರಿ ಎಂ.ಕೆ.ಮುಗಳಿ, ಸಮುದಾಯ ಅಭಿವೃದ್ಧಿ ಅಧಿಕಾರಿ ಬಸವರಾಜ್ ಕಂದಾಯ ಅಧಿಕಾರಿ ಮಾರೆಪ್ಪ ಹಾಗೂ ಸಿಬ್ಬಂದಿ ವರ್ಗದ ಎಲ್ಲರೂ ಉಪಸ್ಥಿತರಿದ್ದರು.

**ಸಮುದಾಯ ಅಭಿವೃದ್ಧಿ ಅಧಿಕಾರಿ ಬಸವರಾಜ್ ಗೆ ತರಾಟೆ:** 5 ನೇ ವಾರ್ಡ್ ನ ಸದಸ್ಯ ಗಣೇಶ್ ಸಮುದಾಯ ಅಭಿವೃದ್ಧಿ ಅಧಿಕಾರಿಗೆ " ಎಲ್ಲಾ 23 ವಾರ್ಡ್ ಗಳಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಹೊಲಿಗೆ ಯಂತ್ರಗಳನ್ನು ಕೊಟ್ಟಿದ್ದೀರಿ.ಅವರ ಪಟ್ಟಿ ಕೊಡಿ. ಇದರಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ಆಗಿದೆ ಎಂದಾಗ ಎಲ್ಲಾ ಸದಸ್ಯರು ಅವರ ಮಾತಿಗೆ ದನಿಗೂಡಿಸಿದರು. ಆಗ ಸ್ವಲ್ಪ ಹೊತ್ತು ಪೆಚ್ಚಾದ ಬಸವರಾಜ್ ಲೆಕ್ಕ ಕೊಡಲು ಗಡಬಡಿಸಿದರು.

# ಕೊನೆಯ ಕಾಲುವೆಗಳಿಗೂ ನೀರು ಬೇಕು

## ಕ್ಷೇತ್ರ (ಇಂಡಿ)-ಕ್ಷೇತ್ರದ(ನಾಗಠಾಣ)ನಡುವೆ ಮಲತಾಯಿ ಧೋರಣೆ

• **ಮಲ್ಲಮ್ಮ ನುಡಿ ವಾರ್ತೆ ವಿಜಯಪುರ**

ವಿಜಯಪುರ ಜಿಲ್ಲೆಯ ನಾಗಠಾಣ ಮತಕ್ಷೇತ್ರದ ಚಡಚಣ ತಾಲೂಕಿನ ಕಡೆಯ ಭಾಗದ ರೈತರಿಗೆ ನಾರಾಯಣಪುರ ಎಡದಂಡೆ ಕಾಲುವೆ ಮುಖಾಂತರ ನೀರು ಹರಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಝಳಕಿ ಸಹಾಯಕ ಕಾರ್ಯಪಾಲಕ ಅಭಿಯಂತರ ಕಛೇರಿ ಎದುರು ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಅಧ್ಯಕ್ಷ ಸಂಗಮೇಶ ಸಗರ ಮಾತನಾಡಿ, ಜಿಲ್ಲೆಯ ನಾಗಠಾಣ ಮತಕ್ಷೇತ್ರದ ಚಡಚಣ ತಾಲೂಕಿನ ನಾರಾಯಣಪುರ ಎಡದಂಡೆ ಕಾಲುವೆ ಡಿಸ್ಟ್ರಿಬ್ಯುಟರ್ 35 ರಿಂದ 46 ರವರಿಗೆ ಕಾಲುವೆ ಮೂಲಕ ದಸೂರ ಗ್ರಾಮದ ಕೊನೆಯವರೆಗೂ ನೀರು ಹರಿಸಬೇಕು . ಏ. 12 ರ ನಂತರ ನೀರು ಬಿಡದೇ ಹೋದರೆ ಉಗ್ರ ಹೋರಾಟ ಮಾಡಲಾಗುವುದು ಎಚ್ಚರಿಕೆ ನೀಡಿದರು.

ಇಂಡಿ ತಾಲ್ಲೂಕಿನ ರೈತರಿಗೆ ಯಾವುದೇ ರೀತಿಯ ನೀರಿನ ಸಮಸ್ಯೆ ಎದುರಾಗಿಲ್ಲ, ಚಡಚಣ ತಾಲೂಕಿನ ನಾಗಠಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಡಿಸ್ಟ್ರಿಬ್ಯುಟರ್ 35 ರಿಂದ 46ರು ಕೊನೆಯ ಭಾಗದ ರೈತರಿಗೆ ಕಾಲುವೆ ನೀರು ಹರಿಸುವಲ್ಲಿ ಅಧಿಕಾರಿಗಳು ಮಲತಾಯಿ ಧೋರಣೆ



ಅನುಸರಿಸುತ್ತಿದ್ದಾರೆ, ನಾಗಠಾಣ ಮತಕ್ಷೇತ್ರದ ಶಾಸಕರು ಮತ್ತು ಚಡಚಣ ತಾಲೂಕು ಆಡಳಿತ ರೈತರಿಗೆ ಕಾಲುವೆ ನೀರಿನ ಪರಿಹಾರ ಬಗೆಹರಿಸುವಲ್ಲಿ ಮುಂದಾಗುತ್ತಿಲ್ಲ. ಬಿಸಿಲಿನ ತಾಪ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ರೈತರು ಬೆಳೆದ ಬೆಳೆಗಳು ಒಣಗುತ್ತವೆ. ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ಉಂಟಾಗುತ್ತಿದೆ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಚಡಚಣ ತಾಲೂಕಿನಲ್ಲಿ ಬರುವ ಕಾಲುವೆ ಕೊನೆಯವರೆಗೆ ನೀರು ಹರಿಸಲು ಕ್ರಮ ಕೈಗೊಳ್ಳಲು ಮುಂದಾಗಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆ ಹಿಡಿದು ಹೋರಾಟ ಮಾಡಬೇಕಾಗುತ್ತದೆ ಎಂದು ಹೇಳಿದರು.

ಕೆ ಬಿ ಜೆ ಎನ್ ಎಲ್ ಅಧೀಕ್ಷಿತ ಅಭಿಯಂತರ ಮನೋಜಕುಮಾರ ಗಡಬಳ್ಳಿ ಮಾತನಾಡಿ, ಏ. 1 ರಂದು ಕಾಲುವೆ ಮೂಲಕ ನೀರು ಹರಿಸುತ್ತೇವೆ ಏ. 12 ರವರಿಗೆ ನೀರು 35 ರಿಂದ 46 ರವರಿಗೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗುವುದು, ಹಿಂದಿನ ರೈತರು ತಮ್ಮ ಮೋಟಾರು ಪಂಪ್ ಒಂದೆರಡು ದಿನ ಕೊನೆ ಭಾಗದ ಜನರಿಗೆ ನೀರು ತಲುಪುವವರೆಗೆ ಬಂದ ಮಾಡುವ ಮೂಲಕ ಸಹಕರಿಸಬೇಕು ಮನವಿ ಮಾಡಿದರು.

**ನಾಗಠಾಣ ಮತಕ್ಷೇತ್ರದ ಚಡಚಣ ತಾಲೂಕಿನ ಹಲಸಂಗಿ, ಗೋಟ್ಯಾಳ, ಮಣಕಲಗಿ, ಏಳಗಿ, ಕೇರೂರ, ಉಮರಾಣಿ, ತದ್ದೇವಾಡಿ, ಕಂಚನಾಳ, ಲೋಣಿ ಬಿಕೆ, ಹಾವಿನಾಳ, ಹತ್ತಳ್ಳಿ, ರೇವತಗಾಂವ,ದಸೂರ, ಉಮರಜ, ನೀವರಗಿ ಸೇರಿದಂತೆ ಹಲವು ಗ್ರಾಮಗಳಿಗೆ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ಉಂಟಾಗಿದೆ ಎಂಬುದು ರೈತರ ಆಕ್ರೋಶ ವ್ಯಕ್ತಪಡಿಸಿದರು. ಈ ಹಿಂದೆ ಪ್ರತಿ ಬಾರಿ ಅಧಿಕಾರಿಗಳು ಕೊನೆಯ ಭಾಗದವರಿಗೆ ನೀರು ಹರಿಸುತ್ತೇವೆ ಎಂದು ಹೇಳುತ್ತಾ ಬಂದಿದ್ದು, ಕೊನೆಯ ಭಾಗಕ್ಕೆ ನೀರು ತಲುಪುತ್ತಿಲ್ಲ. ಇಂಡ ತಾಲೂಕಿನ ಕಾಲುವೆ ತುಂಬಿ ಹರಿಯುತ್ತಿದೆ , ಚಡಚಣ ತಾಲೂಕು ಮುಟ್ಟುವ ಮೊದಲೆ ನೀರಿನ ಹರಿವು ನಿಲ್ಲುತ್ತದೆ ಎಂದು ಹಲವು ರೈತರು ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿಗಳು ದೂರವಾಣಿ ಮೂಲಕ ರೈತರಿಗೆ ಹೋರಾಟ ಕೈ ಬಿಡುವಂತೆ ಮನವೊಲಿಸಿ ಹೋರಾಟ ಮೊಟಕು ಗೊಳಿಸಿದರು. ಇಂಡಿ ತಹಶೀಲ್ದಾರ್ ವಿಜಯ ಕಡಕಬಾವಿ, ಚಡಚಣ ತಹಶೀಲ್ದಾರ್ ಸಂಜಯ ಇಂಗಳೆ, ಶ್ರೀಮಂತ ಅಂಗಡಿ ರೈತ ಮುಖಂಡರಾದ , ವಸಂತ ಭೈರಮಡಿ, ದಯಾನಂದ ಕುಮಸಳೆ, ಸತೀಶ ತೊಳನೂರ, ಸಂದೀಪ ಬೆಳ್ಳಿ, ದಯಾನಂದ ಕೊಳಿ ಸೇರಿದಂತೆ ಹಲವು ಗ್ರಾಮಗಳ ರೈತ ಮುಖಂಡರು ಇದ್ದರು.**

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)